ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 29 ಸೋಮವಾರ 2025

ಸಂಪುಟ: 46 | ಸಂಚಿಕೆ: 163 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಭಾರತಕ್ಕೆ ಏಷ್ಯಾಕಪ್ 'ತಿಲಕ'

• 9ನೇ ಬಾರಿ ಟ್ರೋಫಿ ಗೆದ್ದ ಟೀಂ ಇಂಡಿಯಾ • ರನ್ನರ್‌ಅಪ್ ಪಾಕ್‌ಗೆ ಮುಖಭಂಗ

ದುಬೈ, ಸೆ.28– ದುಬೈನಲ್ಲಿ ನಡೆದ ಏಷ್ಯಾಕಪ್–2025ರ ಚಾಂಪಿಯನ್ ಆಗಿ ಭಾರತ ಹೊರಹೊಮ್ಮಿದೆ. ಇದರೊಂದಿಗೆ ಭಾರತ 9ನೇ ಬಾರಿಗೆ ಏಷ್ಯಾಕಪ್ ಎತ್ತಿ ಹಿಡಿದರೇ, ಪಾಕಿಸ್ತಾನ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟು ಮುಖಭಂಗ ಅನುಭವಿಸಿತು.

ಪಂದ್ಯಾವಳಿ ಹಾಟ್ ಫೇವರಿಟ್ ಆಗಿ ಕಣಕ್ಕಿಳಿದಿದ್ದ ಭಾರತ ಪ್ರಸಕ್ತ ಟೂರ್ನಿಯಲ್ಲಿ ಲೀಗ್, ಸೂಪರ್–4 ಹಂತ ಹಾಗೂ ಫೈನಲ್ ಪಂದ್ಯ ಸೇರಿದಂತೆ ಒಟ್ಟು 3 ಬಾರಿ ಪಾಕಿಸ್ತಾನವನ್ನು ಬಗ್ಗು ಬಡಿದು ಟೂರ್ನಿಯಲ್ಲಿ ಸೋಲಿಲ್ಲದ ಸರದಾರನಂತೆ ಮೆರೆದಾಡಿ ಅಜೇಯವಾಗಿ ಚಾಂಪಿಯನ್ ಪಟ್ಟ ಅಲಂಕರಿಸಿತು.

ಪಹಲ್ಗಾಮ್ ಉಗ್ರರ ದಾಳಿಗೆ ಪ್ರತಿಯಾಗಿ ಭಾರತ ತಂಡ ನೋ ಶೇಕ್ ಹ್ಯಾಂಡ್ ಮೌನ ಪ್ರತಿಭಟನೆ ಮೂಲಕ ಪಾಕ್‌ಗೆ ತಿರುಗೇಟು ನೀಡಿದ್ದಲ್ಲದೆ, ಅತ್ಯುತ್ತಮ ಕ್ರಿಕೆಟ್ ಮೂಲಕ ಪಾಕಿಸ್ತಾನದ ಬಾಯಿ ಮುಚ್ಚಿಸಿದೆ. 6 ತಿಂಗಳ ಹಿಂದಷ್ಟೇ ದುಬೈನಲ್ಲಿ ಏಕದಿನ ಮಾದರಿಯಲ್ಲಿ ನಡೆದ ಐಸಿಸಿ ಚಾಂಪಿಯನ್ ಟ್ರೋಫಿ ಎತ್ತಿ ಹಿಡಿದಿದ್ದ ಟೀಂ ಇಂಡಿಯಾ ಇದೀಗ ಟಿ20 ಮಾದರಿಯಲ್ಲಿ ನಡೆದ ಏಷ್ಯಾ ಕಪ್‌ನಲ್ಲೂ ತ್ರಿವಿಕ್ರಮ ಮೆರೆದಿದೆ.

ಇಲ್ಲಿನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಹೈವೋಲ್ಟೇಜ್ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 146 ರನ್‌ಗಳಿಗೆ ಆಲೌಟಾಯಿತು. ನಂತರ ಗುರಿ ಬೆನ್ನತ್ತಿದ ಭಾರತ ತಿಲಕ್ ವರ್ಮಾ ಅವರ ಅರ್ಧ ಶತಕದ ನೆರವಿನಿಂದ 19.3 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 150 ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು.

ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ಉತ್ತಮ ಆರಂಭ ಪಡೆಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಾಹಿಬ್‌ಜಾದಾ ಫರ್ಹಾನ್ ಹಾಗೂ ಫಖರ್ ಜಮಾನ್ ಮೊದಲ ವಿಕೆಟ್‌ಗೆ 84 ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ವೇದಿಕೆ ಸಿದ್ಧಪಡಿಸಿದರಾದರೂ, ಈ ವೇಳೆ ಫರ್ಹಾನ್ 38 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ 57 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಸೈಮ್ ಆಯುಬ್ 2 ಬೌಂಡರಿ ಒಳಗೊಂಡ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಉತ್ತಮವಾಗಿ ಆಡುತ್ತಿದ್ದ ಫಖರ್ ಜಮಾನ್ ಕೂಡ 35 ಎಸೆತಗಳಲ್ಲಿ ತಲಾ 2 ಸಿಕ್ಸ್, ಬೌಂಡರಿ ಒಳಗೊಂಡ 46 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಒಂದು ಹಂತದಲ್ಲಿ 200 ರನ್ ಗಳಿಸುವ ನಿರೀಕ್ಷೆಯಲ್ಲಿದ್ದ ಪಾಕಿಸ್ತಾನ ಕೊನೆಯ 8 ವಿಕೆಟ್‌ಗಳನ್ನು ಕೇವಲ 34 ರನ್‌ಗಳಿಗೆ ಕಳೆದುಕೊಂಡಿತು. ನಾಯಕ ಸಲ್ಮಾನ್ ಆಘಾ ಸೇರಿದಂತೆ ನಂತರ ಬಂದ ಬ್ಯಾಟ್ಸ್‌ಮನ್‌ಗಳು ಭಾರತೀಯ ಸ್ಪಿನ್ನರ್‌ಗಳ ದಾಳಿಗೆ ತತ್ತರಿಸಿ ಎರಡಂಕಿ ಮೊತ್ತ ದಾಖಲಿಸಲೂ ಸಾಧ್ಯವಾಗದೇ ■ 6ನೇ ಪುಟಕ್ಕೆ



ಟ್ರೋಫಿ ಇಲ್ಲದೆಯೇ ಸಂಭ್ರಮಾಚರಿಸಿದ ಟೀಂ ಇಂಡಿಯಾ ಆಟಗಾರರು.

ಟ್ರೋಫಿ ಸ್ವೀಕರಿಸಲು ನಿರಾಕರಿಸಿದ ಟೀಂ ಇಂಡಿಯಾ

ದುಬೈ: ಪಾಕಿಸ್ತಾನ ಸಚಿವ ಹಾಗೂ ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮೊಹ್ಸಿನ್ ನಖ್ವಿಯಿಂದ ಏಷ್ಯಾ ಕಪ್ ಚಾಂಪಿಯನ್ಸ್ ಟ್ರೋಫಿಯನ್ನು ಸ್ವೀಕರಿಸಲು ಭಾರತ ನಿರಾಕರಿಸಿದ ಪ್ರಸಂಗ ನಡೆಯಿತು. 2025ರ ಏಷ್ಯಾಕಪ್‌ನ ಉದ್ವಿಗ್ನ ಮತ್ತು ರಾಜಕೀಯವಾಗಿ ತುಂಬಿದ ಪರಾಕಾಷ್ಠೆಯಲ್ಲಿ ಭಾರತೀಯ ಕ್ರಿಕೆಟ್ ತಂಡವು ಪಾಕಿಸ್ತಾನದ ಆಂತರಿಕ ಸಚಿವ ಮತ್ತು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರಿಂದ ವಿಜೇತರ ಟ್ರೋಫಿಯನ್ನು ಸ್ವೀಕರಿಸಲು ನಿರಾಕರಿಸಿತು. ಈ ಹಿನ್ನೆಲೆಯಲ್ಲಿ ಟ್ರೋಫಿ ಸ್ವೀಕಾರ ಸಮಾರಂಭ ವಿಳಂಬವಾಯಿತು. ಎರಡೂ ರಾಷ್ಟ್ರಗಳ ನಡುವೆ ನಡೆಯುತ್ತಿರುವ ರಾಜತಾಂತ್ರಿಕ ಮತ್ತು ಕ್ರೀಡಾ ಉದ್ವಿಗ್ನತೆಯನ್ನು ಪ್ರತಿಬಿಂಬಿಸುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಿರ್ದೇಶನದ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವರದಿಯಾಗಿದೆ.

ಡ್ರೋನ್ ಚಮತ್ಕಾರಕ್ಕೆ ಬೆಕ್ಕಸಬೆರಗಾದ ಜನಸಾಗರ

ಆಗಸದಲ್ಲಿ ಆಕೃತಿಗಳ ಅಲಂಕಾರ

• ದಸರಾ ಪ್ರಯುಕ್ತ ಪ್ರಾಯೋಗಿಕ ಪ್ರದರ್ಶನದಲ್ಲಿ ಗಿನ್ನಿಸ್ ವಿಶ್ವ ದಾಖಲೆ ನಿರ್ಮಾಣ • 3 ಸಾವಿರ ಡ್ರೋನ್‌ಗಳಲ್ಲಿ ಮೂಡಿದ ಚಿತ್ತಾರ

ಮೈಸೂರು, ಸೆ.28(ಪಿಎಂ)– ಸಾವಿರಾರು ಡ್ರೋನ್‌ಗಳು ಆಗಸದಲ್ಲಿ ಆಕೃತಿಗಳ ಅಲಂಕಾರ ಅನಾವರಣಗೊಳಿಸಿ ದೃಶ್ಯಕಾವ್ಯ ಮೂಡಿಸಿದವು. ಇಂತಹ ನಯನ ಮನೋಹರ ದೃಶ್ಯಾವಳಿಗೆ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನ ಬೆಕ್ಕಸಬೆರಗಾದರು.

ಇಂತಹ ವಿಹಂಗಮ ದೃಶ್ಯಾವಳಿಗೆ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ಭಾನುವಾರ ರಾತ್ರಿ ಸಾಕ್ಷಿಯಾಯಿತು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವತಿಯಿಂದ ದಸರಾ ಅಂಗವಾಗಿ ಆಯೋಜಿಸಿದ್ದ ಪ್ರಾಯೋಗಿಕ ಡ್ರೋನ್ ಪ್ರದರ್ಶನ ನೋಡುಗರಿಗೆ ರೋಮಾಂಚನಕಾರಿ ಅನುಭವ ನೀಡಿತು. ಬಾನಂಗಳದಲ್ಲಿ ವಿವಿಧ ಕಲಾಕೃತಿಗಳನ್ನು ಬಣ್ಣ ಬಣ್ಣದಲ್ಲಿ ಮೂಡಿಸಿ ಮಾಡಿದ ಚಮತ್ಕಾರಕ್ಕೆ ಪ್ರೇಕ್ಷಕರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಹೀಗೆ 3 ಸಾವಿರ ಡ್ರೋನ್‌ಗಳು ಹೊಸ ಲೋಕವನ್ನು ಸೃಷ್ಟಿಸಿತು. ■ 6ನೇ ಪುಟಕ್ಕೆ




ಗಿನ್ನಿಸ್ ದಾಖಲೆ ಬರೆದ ಘರ್ಜಿಸುತ್ತಾ ಜಿಗಿದು ಹಾರುತ್ತಿರುವ ಹುಲಿ ಚಿತ್ರ

ಗಿನ್ನಿಸ್ ದಾಖಲೆ

ಘರ್ಜಿಸುತ್ತಾ ಜಿಗಿದು ಹಾರುತ್ತಿರುವ ಹುಲಿ ಚಿತ್ರ, 2,983 ಡ್ರೋನ್‌ಗಳ ಮೂಲಕ ಬೃಹದಾಕಾರದಲ್ಲಿ ಮೂಡಿಬಂದು ಗಿನ್ನಿಸ್ ವಿಶ್ವದಾಖಲೆಗೆ ಸೇರಿತು. ಸಸ್ತನಿಗೆ ಸಂಬಂಧಿಸಿದಂತೆ ಇಂತಹ ಅತಿ ದೊಡ್ಡ ವೈಮಾನಿಕ ಚಿತ್ರವನ್ನು ನಿರ್ಮಿಸಿದ್ದಕ್ಕಾಗಿ ಸೆಸ್ಕ್ ಮತ್ತು ರಾಜ್ಯ ಸರ್ಕಾರದ ಇಂಧನ ಇಲಾಖೆಗೆ ಪ್ರಮಾಣಪತ್ರವನ್ನು ಗಿನ್ನಿಸ್ ಸಂಸ್ಥೆ ಪ್ರತಿನಿಧಿಗಳು ಪ್ರದರ್ಶನದ ಕೊನೆಯಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ನೀಡಿ ಅಭಿನಂದಿಸಿದರು.

ಮನ್ ಕೀ ಬಾತ್‌ನಲ್ಲಿ ಅಕ್ಷರ ಮಾಂತ್ರಿಕ ಎಸ್.ಎಲ್.ಭೈರಪ್ಪ ಅವರನ್ನು ಸ್ಮರಿಸಿದ ಮೋದಿ

ನವದೆಹಲಿ, ಸೆ.28– ಇತ್ತೀಚೆಗಷ್ಟೇ ಇಹಲೋಕ ತ್ಯಜಿಸಿದ ಕನ್ನಡ ಸಾಹಿತ್ಯ ಲೋಕದ ಅಕ್ಷರ ಮಾಂತ್ರಿಕ ಎಸ್.ಎಲ್.ಭೈರಪ್ಪ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಸ್ಮರಿಸಿದ್ದಾರೆ. ತಮ್ಮ 126ನೇ ಮನದ ಮಾತು ಕಾರ್ಯಕ್ರಮದಲ್ಲಿ ನೆನೆದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ನಾನು ಮತ್ತು ನನ್ನ ದೇಶ ಮಹಾನ್ ವಿಚಾರವಾದಿ, ಮಹಾನ್ ಚಿಂತಕರೊಬ್ಬರನ್ನು ಕಳೆದುಕೊಂಡಿದೆ. ನಾನು ಅವರ ಜೊತೆ ವ್ಯಕ್ತಿಗತ ಸಂಪರ್ಕ ಇಟ್ಟುಕೊಂಡಿದ್ದೆ. ಹಲವು ಸಂದರ್ಭಗಳಲ್ಲಿ ಹಲವು ವಿಚಾರಗಳ ಮಂಥನ ನಡೆಸಿದ್ದೇವೆ. ಅವರ ಕೃತಿಗಳು ಯುವ ಪೀಳಿಗೆಗೆ ದಾರಿದೀಪ. ಅವರ ಅನೇಕ ಕೃತಿಗಳು ಹಲವು ಭಾಷೆಗಳಿಗೆ ಅನುವಾದವಾಗಿವೆ. ನಮ್ಮ ಮೂಲ ಸಂಸ್ಕೃತಿ ಬಗ್ಗೆ ಹೆಮ್ಮೆಪಡಬೇಕು, ಗೌರವ ತೋರಿಸಬೇಕು ಎಂಬುದನ್ನು ಅವರು ನಮಗೆ ಕಲಿಸಿಕೊಟ್ಟಿದ್ದಾರೆ. ಅವರ ಅಗಲಿಕೆಗೆ ನಾನು ಭಾವುಕ ವಿದಾಯ ತಿಳಿಸುತ್ತೇನೆ ಎಂದು ಭಾವುಕರಾದರು.



ಎಸ್.ಎಲ್.ಭೈರಪ್ಪ



ನರೇಂದ್ರ ಮೋದಿ

ಭೈರಪ್ಪ ಅವರ ಜೊತೆಗಿನ ಒಡನಾಟ ಪ್ರೇರಣಾದಾಯಕ, ಅವರ ಪುಸ್ತಕಗಳು ಯುವಕರಿಗೆ ಪ್ರೇರಣೆ, ಅವರ ಕೃತಿಗಳನ್ನ ಯುವಕರು ಹೆಚ್ಚು ಹೆಚ್ಚು ಓದಬೇಕು ಎಂದು ಕರೆ ನೀಡಿದರು.

ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಜಯಂತಿ ಆಚರಣೆ



ಸಾತಗಳ್ಳಿ ವೆಲ್ಫೇರ್ ಅಸೋಸಿಯೇಷನ್‌ನಿಂದ ಭಗತ್ ಸಿಂಗ್ ವೃತ್ತದಲ್ಲಿ ಭಗತ್ ಸಿಂಗ್ ಅವರ 118ನೇ ಜಯಂತಿ ಆಚರಣೆ ಮಾಡಲಾಯಿತು.


ಮೈಸೂರು, ಸೆ.28(ಜಿಎ)– ಭಗತ್‌ಸಿಂಗ್ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು ಎಂದು ನಿವೃತ್ತ ಸೈನಿಕರೂ ಆದ ನಜರ್‌ಬಾದ್ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವಿ.ಮಹೇಶ್ ತಿಳಿಸಿದರು.

ಸಾತಗಳ್ಳಿ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಸಾತಗಳ್ಳಿಯ ಭಗತ್‌ಸಿಂಗ್ ವೃತ್ತದಲ್ಲಿ ಭಾನುವಾರ ಬೆಳಗ್ಗೆ ಏರ್ಪಡಿಸಿದ್ದ ಭಗತ್‌ಸಿಂಗ್ ಅವರ 118ನೇ ಜಯಂತಿ ಕಾರ್ಯಕ್ರಮದಲ್ಲಿ ಭಗತ್‌ಸಿಂಗ್ ಭಾವಚಿತ್ರವುಳ್ಳ ನಾಮ ಫಲಕಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಭಗತ್‌ಸಿಂಗ್ ಅವರಲ್ಲಿದ್ದ ದೇಶಭಕ್ತಿ ಅಸಾಧಾರಣವಾದುದು. ತಮ್ಮ 12ನೇ ವಯಸ್ಸಿನಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಬಗ್ಗೆ ತಿಳಿದುಕೊಂಡು ಅಂದು ಹತರಾಗಿದ್ದ ಭಾರತೀಯರ ರಕ್ತದ ಮಣ್ಣನ್ನು ಒಂದು ಸೀಸೆಯಲ್ಲಿ ತುಂಬಿಸಿ ದೇವರ ಕೋಣೆಯಲ್ಲಿಟ್ಟು ಪೂಜಿಸುತ್ತಿದ್ದರು. ಅವರಿಗೆ ಗಲ್ಲು ಶಿಕ್ಷೆ ಆಗುವಾಗ ಹಗ್ಗಕ್ಕೆ ಮುತ್ತಿಟ್ಟು ಪ್ರಾಣ ತ್ಯಾಗ ಮಾಡಿದ ವ್ಯಕ್ತಿಯ ಜಯಂತಿಯನ್ನು ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಭಗತ್‌ಸಿಂಗ್ ಭಾರತದ ಕ್ರಾಂತಿಕಾರಿ ನಾಯಕ, ತಮ್ಮ ಧೈರ್ಯದಿಂದಲೇ ಬ್ರಿಟೀಷರ ಎದೆ ನಡುಗಿಸಿದ ಮಹಾನ್ ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರ. ಬ್ರಿಟೀಷ್ ಪೊಲೀಸ್ ಅಧಿಕಾರಿಗೆ ಗುಂಡಿಕ್ಕಿದ ಆರೋಪದ ಮೇಲೆ ಅವರಿಗೆ ಗಲ್ಲು ಶಿಕ್ಷೆ ವಿಧಿಸಲಾಗಿತ್ತು. 1931ರ ಮಾರ್ಚ್ 24ರಂದು ನೇಣಿಗೇರಿಸುವುದೆಂದು ತೀರ್ಮಾನಿಸಲಾಗಿತ್ತು. ಆದರೆ ಭಗತ್‌ಸಿಂಗ್ ಅವರಿಗೆ ವಿಧಿಸಿರುವ ಶಿಕ್ಷೆಯನ್ನು ರದ್ದು ಮಾಡಬೇಕೆಂದು ಲಾಹೋರ್ ಸೆಂಟ್ರಲ್ ಜೈಲಿನ ಎದುರು ಸುಮಾರು 25 ಸಾವಿರಕ್ಕೂ ಹೆಚ್ಚು ಜನರು ಪ್ರತಿಭಟನೆ ಹಮ್ಮಿಕೊಂಡಿದ್ದರು. ಇದನ್ನು ಅರಿತ ಬ್ರಿಟೀಷರು, ನೇಣಿಗೆರಿಸುವ ಸಮಯವನ್ನು 11 ಗಂಟೆ ಹಿಂದೂಡಿ ಮಾರ್ಚ್ 23ರಂದು 7.30ಕ್ಕೆ ಗಲ್ಲಿಗೇರಿಸಲಾಯಿತು. ಸಟ್ಲೆಜ್ ನದಿಯ ದಡದಲ್ಲಿ ಜೈಲು ಅಧಿಕಾರಿಗಳೇ ರಹಸ್ಯವಾಗಿ ಅಂತ್ಯಕ್ರಿಯೆ ನೆರವೇರಿಸಿದರು. ಇಂತಹ ಮಹಾನ್ ದೇಶಭಕ್ತನ ಧೈರ್ಯ, ಸಾಹಸ, ದೇಶಪ್ರೇಮ ಇಂದಿನ ಯುವಕರಿಗೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು. ಸಾತಗಳ್ಳಿ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಚೆಲುವೇಗೌಡ, ಉಪಾಧ್ಯಕ್ಷ ತಿರುಮಲಾಚಾರ್, ಕಾರ್ಯದರ್ಶಿ ಗಂಗಾಧರ್, ಜಯಸ್ವಾಮಿ, ರಾಘವೇಂದ್ರಭಟ್ಟ ಇದ್ದರು.

ಯೋಗ ಶಿಕ್ಷಕಿ ಸೇರಿ ಮೂವರಿಗೆ 48.30 ಲಕ್ಷ ಆನ್‌ಲೈನ್ ವಂಚನೆ



ಮೈಸೂರು, ಸೆ.28 (ಆರ್‌ಕೆ)– ಪ್ರತ್ಯೇಕ ಪ್ರಕರಣಗಳಲ್ಲಿ ಯೋಗ ಶಿಕ್ಷಕಿ ಸೇರಿದಂತೆ ಮೈಸೂರಿನ ಮೂವರಿಗೆ ಆನ್‌ಲೈನ್ ಮೂಲಕ ಬರೋಬ್ಬರಿ 48.30 ಲಕ್ಷ ರೂ. ಪಂಗನಾಮ ಹಾಕಿರುವ ಘಟನೆ ಬೆಳಕಿಗೆ ಬಂದಿದೆ.

ಸೈಬರ್ ಅಪರಾಧಗಳ ಬಗ್ಗೆ ಪೊಲೀಸರು ಸಾರ್ವಜನಿಕರಿಗೆ ನಿರಂತರ ತಿಳುವಳಿಕೆ ನೀಡುತ್ತಿದ್ದಾರಲ್ಲದೇ, ಮಾಧ್ಯಮಗಳ ಮೂಲಕ ಪ್ರತಿದಿನ ಆನ್‌ಲೈನ್ ವಂಚನೆ ಕುರಿತಂತೆ ಜಾಗೃತಿ ಮೂಡಿಸುತ್ತಿದ್ದರೂ ವಿದ್ಯಾವಂತರು, ವಕೀಲರು, ಪೊಲೀಸರು, ವೈದ್ಯರು, ಅಧಿಕಾರಿಗಳು, ಪ್ರಾಧ್ಯಾಪಕರೇ ದಿಢೀರ್ ಹಣ ಸಂಪಾದನೆ ಮಾಡಿ, ಬೆಳಗಾಗುವಷ್ಟರಲ್ಲಿ ಶ್ರೀಮಂತರಾಗಬೇಕೆಂಬ ಧಾವಂತಕ್ಕೆ ಸಿಲುಕಿ ಲಕ್ಷಾಂತರ ರೂ. ಕಳೆದುಕೊಳ್ಳುತ್ತಿರುವುದು ವಿಪರ್ಯಾಸ.

ಮೈಸೂರಿನ ವಿವೇಕಾನಂದ ನಗರ ನಿವಾಸಿಯಾಗಿರುವ ಯೋಗ ಶಿಕ್ಷಕಿ ವಿದೇಶದಲ್ಲಿರುವ ಶಿಷ್ಯ 50,000 ಪೌಂಡ್ ಉಡುಗೊರೆ ನೀಡುತ್ತೇನೆಂದು ಆಮಿಷವೊಡ್ಡಿದ್ದರಿಂದ ಆಸೆಗೆ ಬಿದ್ದು, ಹಂತ ಹಂತವಾಗಿ ಒಟ್ಟು 10.90 ಲಕ್ಷ ರೂ.ಗಳನ್ನು ಕಳೆದುಕೊಂಡವರಾಗಿದ್ದಾರೆ. ಯೋಗ ತರಬೇತಿ ನೀಡುವ ಕುರಿತು ಯೋಗ ಶಿಕ್ಷಕಿ ಅವರು ಯುಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ಜಾಹೀರಾತು ನೀಡಿದ್ದರು. ಅದನ್ನು ಗಮನಿಸಿದ ಟಾಮಿ ಆಲಿಸನ್ ಎಂಬ ವಿದೇಶಿ ಯುವಕ ತಾನು ಎರಡು ತಿಂಗಳ ಯೋಗ ತರಬೇತಿಗೆ ಸೇರಿಕೊಂಡಿದ್ದ.

ತರಬೇತಿ ಶುಲ್ಕ ಪಾವತಿಸುವಂತೆ ಶಿಕ್ಷಕಿ ಹೇಳಿದಾಗ ತಾನು ಜರ್ಮನಿ ಪ್ರಜೆಯಾಗಿರುವುದರಿಂದ ಹಣ ವರ್ಗಾವಣೆ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಗಿಫ್ಟ್ ಮತ್ತು 50,000 ಸಾವಿರ ಪೌಂಡ್ ಕೊಡುತ್ತೇನೆ. ಕಸ್ಟಂನಲ್ಲಿ ಸ್ವಲ್ಪ ಹಣ ಪಾವತಿಸಿ ಉಳಿದ ಹಣವನ್ನು ಪಡೆದುಕೊಳ್ಳಬಹುದು ಎಂದು ಆತ ನಂಬಿಸಿದನಲ್ಲದೇ, ಹಣ ಪಡೆಯಲು ತೊಂದರೆಯಾದರೆ ನಾನೇ ಭಾರತಕ್ಕೆ ಬರುವುದಾಗಿ ತಿಳಿಸಿದ. ಅವನ ಮಾತು ನಂಬಿದ ಶಿಕ್ಷಕಿ ಹಂತ ಹಂತವಾಗಿ ಒಟ್ಟು 10.90 ಲಕ್ಷ ರೂ. ಹಣವನ್ನು ಆತನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ನಂತರ ಮತ್ತಷ್ಟು ಹಣಕ್ಕೆ ಆತ ಬೇಡಿಕೆ ಇಟ್ಟಾಗ ಸಂಶಯಗೊಂಡು ಪರೀಕ್ಷಿಸಿದಾಗ ತಾವು ಮೋಸ ಹೋಗಿರುವುದು ತಿಳಿದ ತಕ್ಷಣ ಯೋಗ ಶಿಕ್ಷಕಿ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಗೋಕುಲಂ ನಿವಾಸಿ ಆನ್‌ಲೈನ್ ಟ್ರೇಡಿಂಗ್ ಸಂಬಂಧ ಇನ್ಸ್ಟಾಗ್ರಾಂನಲ್ಲಿ ಜಾಹೀರಾತು ನೋಡಿ ಹಂತ ಹಂತವಾಗಿ 29.40 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದ್ದಾರೆ. ಹಣ ವರ್ಗಾವಣೆ ಮಾಡಿದ ಬಳಿಕ ಯಾವುದೇ ಪ್ರತಿಕ್ರಿಯೆ ದೊರೆಯದಾಗ ಅನುಮಾನಗೊಂಡು ಪರಿಶೀಲಿಸಲಾಗಿ ತಾನು ಮೋಸ ಹೋಗಿರುವುದು ದೃಢಪಟ್ಟಿತು. ತಕ್ಷಣ ಅವರು ನಜರ್‌ಬಾದ್‌ನಲ್ಲಿರುವ ಸೈಬರ್ ಠಾಣೆಗೆ ತೆರಳಿ ಈ ಬಗ್ಗೆ ದೂರು ನೀಡಿದ್ದಾರೆ.

ಅದೇ ರೀತಿ ಇನ್ನೊಂದು ಪ್ರಕರಣದಲ್ಲಿ ಟಿ.ಕೆ.ಲೇಔಟ್ ನಿವಾಸಿಯೊಬ್ಬರು ಮೂವೀಗಳಿಗೆ ರಿವ್ಯೂ ಹಾಗೂ ರೇಟಿಂಗ್ಸ್ ಕೊಡುವ ಆಮಿಷಕ್ಕೆ ಸಿಲುಕಿ 8 ಲಕ್ಷ ರೂ. ಹಣ ಕಳೆದುಕೊಂಡಿದ್ದಾರೆ. ಆರಂಭದಲ್ಲಿ ರಿವ್ಯೂದಿಂದ 6000 ರೂ. ಬಂದಿದ್ದರಿಂದ ಅದನ್ನು ನಂಬಿದ ಅವರು ನಾಲ್ಕೈದು ಬಾರಿ ಹಣ ವರ್ಗಾವಣೆ ಮಾಡಿ ಎಂಟು ಲಕ್ಷ ರೂ.ಗಳನ್ನು ಕಳೆದುಕೊಂಡಿದ್ದಾರೆ.

ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಸೆನ್ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಮಾಜಿ ಮೇಯರ್ ಪುರುಷೋತ್ತಮ್ ಬಂಧನಕ್ಕೆ ಮಾಜಿ ಉಪ ಮೇಯರ್ ಶೈಲೇಂದ್ರ ಆಗ್ರಹ



ವಿ.ಶೈಲೇಂದ್ರ

ಮೈಸೂರು,ಸೆ.28(ಜಿಎ)–ಚಾಮುಂಡಿಬೆಟ್ಟದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮಹಿಷ ದಸರಾ ಆಚರಣೆಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅನುಮತಿ ನೀಡಿರಲಿಲ್ಲ. ಇದನ್ನೇ ನೆಪವಾಗಿರಿಸಿಕೊಂಡು ಜಂಬೂಸವಾರಿ ದಿನ ನಗರದ ಎಂಟೂ ದಿಕ್ಕಿನಲ್ಲಿ ಕಪ್ಪು ಬಾವುಟ ಪ್ರದರ್ಶಿಸುವುದಾಗಿ ಬೆದರಿಕೆ ಹಾಕಿರುವ ಮಾಜಿ ಮೇಯರ್ ಪುರುಷೋತ್ತಮ್ ಅವರನ್ನು ಕೂಡಲೇ ಬಂಧಿಸಬೇಕು ಅಥವಾ ಗಡಿಪಾರು ಮಾಡಬೇಕು ಎಂದು ಮಾಜಿ ಉಪಮೇಯರ್ ವಿ.ಶೈಲೇಂದ್ರ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಚಾರಕ್ಕಾಗಿ ಪುರುಷೋತ್ತಮ್ ಇಂತಹ ಬಾಲಿಶ ಹೇಳಿಕೆ ನೀಡುತ್ತಿದ್ದಾರೆ. ಪದೇ ಪದೇ ಧಾರ್ಮಿಕ ಕ್ಷೇತ್ರವಾದ ಚಾಮುಂಡಿಬೆಟ್ಟದ ಬಗ್ಗೆ ಅಪಮಾನಕಾರಿ ಹೇಳಿಕೆ ನೀಡುತ್ತಿದ್ದಾರೆ. ಈ ಹಿಂದೆ ಅವರು ಮೇಯರ್ ಆಗಿದ್ದಾಗ ಚಾಮುಂಡೇಶ್ವರಿಗೆ ಸ್ವತಃ ಪುಷ್ಪಾರ್ಚನೆ ಮಾಡಿದ್ದನ್ನು ಇವರು ಮರೆತಿದ್ದಾರೆಂದು ಶೈಲೇಂದ್ರ ಲೇವಡಿ ಮಾಡಿದರು.

ಮೈಸೂರು ಸಾಂಸ್ಕೃತಿಕ, ಶಾಂತಿಯುತ ನಗರವಾಗಿದ್ದು, ಪುರುಷೋತ್ತಮ್ ಪದೇ ಪದೇ ಶಾಂತಿ ಭಂಗಕ್ಕೆ ಕಾರಣವಾಗುವ ಹೇಳಿಕೆ ಮೂಲಕ ದಲಿತ ಸಮುದಾಯದವರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಚಾಮುಂಡಿಬೆಟ್ಟ ಯದುವಂಶದ ಆಸ್ತಿಯಾಗಿದೆ. ಇವರಿಗೆ ಮಹಿಷಾಸುರನ ಬಗ್ಗೆ ಅಷ್ಟೊಂದು ಗೌರವ ಇದ್ದರೆ ತಮ್ಮ ಸ್ವಂತ ಆಸ್ತಿಯಲ್ಲಿ ಮಹಿಷನ ಪ್ರತಿಮೆ ನಿರ್ಮಿಸಿ ಪೂಜಿಸಲಿ. ಇದಕ್ಕೆ ತಮ್ಮ ಅಭ್ಯಂತರ ಇಲ್ಲ. ಬದಲಾಗಿ ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನದಲ್ಲಿರುವ ಕಾನೂನುಗಳಿಗೆ ಅಡ್ಡಿಯುಂಟು ಮಾಡುವುದು ಸರಿಯಲ್ಲ. ಇದೇ ರೀತಿಯ ಹೇಳಿಕೆ ಮುಂದುವರಿಸಿದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಅಶೋಕಪುರಂ ಮಹೇಶ್, ವಾಜಮಂಗಲ ಮಹೇಶ್, ರವಿ, ಗೌತಮ್ ಉಪಸ್ಥಿತರಿದ್ದರು.

ಉದ್ಯೋಗ ಮಾಹಿತಿ, ಮಾರ್ಗದರ್ಶನ, ತರಬೇತಿ

ಮೈಸೂರು, ಸೆ. 28–ಬಿ.ಜಿ.ಎಸ್. ಒಕ್ಕಲಿಗ ಹಿರಿಯ ನಾಗರೀಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಸಕ್ತ ಸಮಾಜ ಸೇವಾ ಸಂಸ್ಥೆಗಳ ಮತ್ತು ದಾನಿಗಳ ಸಹಕಾರದಿಂದ ಗ್ರಾಮೀಣ ಪ್ರದೇಶದ, ಆರ್ಥಿಕವಾಗಿ ಹಿಂದುಳಿದ ಮತ್ತು ಪ್ರತಿಭಾನ್ವಿತ ಒಕ್ಕಲಿಗ ಬಾಲಕ ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟ, ಶೈಕ್ಷಣಿಕ ಹಾಗೂ ಉದ್ಯೋಗ ಮಾಹಿತಿ, ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡಲಿದೆ.

ಪಿ.ಯು.ಸಿ, ಡಿಗ್ರಿ, ಮಾಸ್ಟರ್ ಡಿಗ್ರಿ, ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಆಸಕ್ತ ಅರ್ಹ ಬಾಲಕ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸೆ.30ರೊಳಗೆ ಬಿ.ಜಿ.ಎಸ್.ಒಕ್ಕಲಿಗ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ, ಆಶ್ರಯ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಸಿ.ಎ 122, ಹೊಸ ನ್ಯಾಯಾಲಯದ ಎದುರು, ಜಯನಗರ, ಮೈಸೂರು ಇಲ್ಲಿಗೆ ಸಲ್ಲಿಸುವುದು. ಮಾಹಿತಿಗಾಗಿ ಕಚೇರಿಗೆ ಭೇಟಿ ನೀಡುವುದು ಅಥವಾ ದೂ.ಸಂಖ್ಯೆ 9844834608, 9742496013, 9980412406, 9483453005, 9900629393 ಸಂಪರ್ಕಿಸಬಹುದು.

ಶಿಕ್ಷಕಿಯರಿಗೆ ಆತ್ಮೀಯ ಸನ್ಮಾನ...



ಮೈಸೂರು ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಭೈರವಿ ಗೌಡ್ತಿಯರ ಬಳಗದ ಮಾಸಿಕ ಕಾರ್ಯಕ್ರಮದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಶಿಕ್ಷಕಿಯರನ್ನು ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ರೇಣುಕಾ ಜಗದೀಶ್, ಉಮಾ ನಾಗೇಶ್, ರಾಧಾ, ಸವಿತಾ, ಗಾಯತ್ರಿ, ಕಲಾವತಿ ಸೇರಿದಂತೆ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಬೃಂದಾವನ ಆರೋಗ್ಯ ಮಾತೆ ದೇವಾಲಯದ ವಾರ್ಷಿಕೋತ್ಸವ



ಮೈಸೂರು, ಸೆ. 28– ಮಂಡ್ಯ ಜಿಲ್ಲೆ, ಬೆಳಗೊಳ ಸಮೀಪದ ಹುಲಿಕೆರೆಯಲ್ಲಿರುವ ಬೃಂದಾವನ ಆರೋಗ್ಯ ಮಾತೆಯ ದೇವಾಲಯದ ವಾರ್ಷಿಕೋತ್ಸವವನ್ನು ಫಾ. ರೇಮಂಡ್ ಪ್ಯಾರೀಸ್ ಪ್ರೀಸ್ಟ್ ಅವರು ಅದ್ದೂರಿಯಾಗಿ ನೆರವೇರಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ಧ್ವಜಾರೋಹಣ ಜಪಸರ, ದಿವ್ಯ ಬಲಿಪೂಜೆ, ನವೇನ ಪ್ರಾರ್ಥನೆ ನಡೆಯಿತು. ಈ ವೇಳೆ ಪ್ರಬೋಧಕ ವಂ.ಗುರು ರೋಕ್ಷನ್ ಬಾರೂಸ್ (ಸಂತ ಜೋಸೆಫರ ಆಸ್ಪತ್ರೆ ನಿರ್ದೇಶಕರು), ಪ್ರಭೋದಕ ಪ್ರವೀಣ್ ಹರಾನ ಎಸ್.ವಿ.ಡಿ., ಪ್ರಬೋಧಕ ವಂ.ಗುರು ಆರ್. ನವೀನ್‌ಕುಮಾರ್, ಪ್ರಬೋಧಕ ವಂ.ಗುರು ಎಡ್ವರ್ಡ್ ಫಿಲಿಪ್, ಪ್ರಬೋಧಕ ವಂ. ಗುರು ಕೆ.ನವೀನ್‌ಕುಮಾರ್, ವಂ.ಗುರು ಜೆ.ಶಾಂತಕುಮಾರ್ ಬಲಿಪೂಜೆ ನಡೆಸಿಕೊಟ್ಟರು.

ಅಸ್ಪೃಶ್ಯ ಸಮುದಾಯಗಳು ಧರ್ಮ ಕಾಲಂನಲ್ಲಿ ಬೌದ್ಧ ಎಂದೇ ಬರೆಸಿ

ಮೈಸೂರು,ಸೆ.28(ಜಿಎ)–ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸಮಗ್ರ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಮೀಕ್ಷೆ ವೇಳೆ ಅಸ್ಪೃಶ್ಯ ಸಮುದಾಯಗಳು ತಮ್ಮ ಅಸ್ಮಿತೆಗಾಗಿ ಧರ್ಮ ಕಾಲಂನಲ್ಲಿ ಬೌದ್ಧ ಎಂದೇ ಬರೆಸಬೇಕೆಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಸಂಚಾಲಕ ಚೋರನಹಳ್ಳಿ ಶಿವಣ್ಣ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಮತ್ತು ಸಾಂಸ್ಕೃತಿಕ ತಳಹದಿ ಮೇಲೆ ಸಮಾಜವನ್ನು ಕಟ್ಟಬೇಕಿರುವುದರಿಂದ ಬುದ್ಧನ ಚಿಂತನೆಗಳನ್ನು ಅಪ್ಪಿಕೊಂಡವರು, ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಅನುಸರಿಸುವವರು, ಅದರಲ್ಲಿಯೂ ಅಸ್ಪೃಶ್ಯ ಸಮುದಾಯಗಳು ಅಂಬೇಡ್ಕರ್ ಅವರ ಆಶಯದಂತೆ ಭಾರತೀಯರ ಮೂಲ ಧರ್ಮವಾದ ಬೌದ್ಧ ಧಮ್ಮವನ್ನು ಮರು ಸ್ಥಾಪಿಸಲು ಬೌದ್ಧ ಎಂದು ಬರೆಯಿಸಬೇಕೆಂದು ಸಲಹೆ ನೀಡಿದರು.

ಪರಿಶಿಷ್ಟ ಜಾತಿಯವರು ಬೌದ್ಧ, ಸಿಖ್, ಹಿಂದೂ ಧರ್ಮಗಳಲ್ಲಿ ಯಾವುದಾದರೊಂದಕ್ಕೆ ಆಯ್ಕೆ ಮಾಡಿಕೊಂಡರೂ ಮೀಸಲಾತಿ ಮುಂದುವರಿಯಲಿದೆ. ಹೀಗಾಗಿ ಪರಿಶಿಷ್ಟರು ಬೌದ್ಧ ಧರ್ಮ ಎಂದು ಬರೆಯಿಸಿದರೆ ಮೀಸಲಾತಿ ತಪ್ಪುತ್ತದೆ ಎಂಬ ಆತಂಕ ಬೇಡ ಎಂದರು. ಗೋಷ್ಠಿಯಲ್ಲಿ ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ಶಿವಮೂರ್ತಿ ಶಂಕರಪುರ, ಸೋಮನಾಯಕ, ಚಿಕ್ಕಲಿಂಗಣ್ಣ ಉಪಸ್ಥಿತರಿದ್ದರು.



ವಿಶ್ವರೂಪ ದರ್ಶನದ ರಂಗೋಲಿ ಪ್ರದರ್ಶನ

ಮೈಸೂರಿನ ಮುಲಕನಾಡು ಸಭಾ ಭವನದಲ್ಲಿ ಕಲಾವಿದೆ ಕುಮಾರಿ ನೇಹಾ ಮಂದಾರ ಅವರು ದಸರಾ ಪ್ರಯುಕ್ತ ರಂಗೋಲಿಯಲ್ಲಿ ಬಿಡಿಸಿರುವ 15 ಅಡಿ ಉದ್ದ 10 ಅಡಿ ಅಗಲದ ವಿಶ್ವರೂಪ ದರ್ಶನದ ರಂಗೋಲಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.09.2025 ಸೋಮವಾರ, ಮಳೆ ನಕ್ಷತ್ರ: ಹಸ್ತ 27.09.2025ರಿಂದ 10.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ,
ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಸಪ್ತಮಿ, ಬೆಳಗ್ಗೆ ಉತ್ಸವ, ಧನ್ವಂತ್ರಿ ಹೋಮ, ಸಂಜೆ ಹೂವಿನ ಚಪ್ಪರ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣಮಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ದುರ್ಗಾ ಪೂಜೆ, ಮಹಾ ಸಪ್ತಮಿ, ಬೆಳಗ್ಗೆಯಿಂದ ಶ್ರೀ ದುರ್ಗಾ ಮಾತೆಗೆ ಪೂಜೆ, ಬೆಳಗ್ಗೆ 8 ಗಂಟೆಗೆ ದುರ್ಗಾ ಸಪ್ತಸತಿ ಪಾರಾಯಣ, 11ಕ್ಕೆ ಭಜನೆ, 11.45ಕ್ಕೆ ಆರತಿ ಮತ್ತು ಪುಷ್ಪಾಂಜಲಿ, ಸಂಜೆ 7 ಗಂಟೆಗೆ ಸಂಧ್ಯಾರತಿ, ವಿಶೇಷ ಪೂಜೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ಸಪ್ತಮಿ–ಶ್ರೀ ಸರಸ್ವತಿ (ವೀಣಾ ಶಾರದಾಲಂಕಾರ) ಅಲಂಕಾರ, ವಿದ್ಯಾ ಸರಸ್ವತಿ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಸರಸ್ವತಿ ಅವಾಹನ, ಶ್ರೀ ಕಾಲರಾತ್ರಿ, ಶ್ರೀ ವಿದ್ಯಾ ಲವಣದುರ್ಗಾ ಪೂಜಾ, ಸಪ್ತಪತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಬಾಲಾ ತ್ರಿಪುರ ಸುಂದರೀ ಮತ್ತು ಶ್ರೀ ದಶ ಶ್ಯಾಮಲಾ ಹೋಮ, ಶ್ರೀ ವಾಗ್ವಾದಿನಿ, ಶ್ರೀ ವಾಗೀಶ್ವರಿ, ಶ್ರೀ ಶೌರಿಕಾ ಶ್ಯಾಮಲಾ, ಶ್ರೀ ವೀಣಾ ಶ್ಯಾಮಲಾ, ಶ್ರೀ ವೇಣು ಶ್ಯಾಮಲಾ, ಶ್ರೀ ಶುಕ ಶ್ಯಾಮಲಾ, ಶ್ರೀ ನಕುಲಿ ಶ್ಯಾಮಲಾ, ಶ್ರೀ ಹಸಂತಿ ಶ್ಯಾಮಲಾ, ಶ್ರೀ ಲಘು ಶ್ಯಾಮಲಾ, ಶ್ರೀ ರಾಜ ಶ್ಯಾಮಲಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಅವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಂ (ಶ್ರೀ ಅವನೀ ಶೃಂಗೇರಿ ಮಠ, ಮೈಸೂರು ಶಾಖೆ):** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ–2025 ಸಪ್ತಮಿ–ಕಾಳರಾತ್ರಿ ಅಲಂಕಾರ, ಬೆಳಗ್ಗೆ 9ಕ್ಕೆ ಶ್ರೀ ಸರಸ್ವತಿ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶಾರದಾ ಕಲಾ ಕೇಂದ್ರ (ಮಧುವನ ಬಡಾವಣೆ, ಶ್ರೀರಾಂಪುರ)ದವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಅವನೀ ಶೃಂಗೇರಿ ಮಠ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸೆ, ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025, ಬೆಳಗ್ಗೆ 9 ಗಂಟೆಗೆ ಸರಸ್ವತಿ ಅವಾಹನೆ, ಶ್ರೀ ಮಹಾ ಸರಸ್ವತಿ ಹೋಮ, ಶ್ರೀ ಸರಸ್ವತಿ ಅಲಂಕಾರ, 11.30ಕ್ಕೆ ಪೂರ್ಣಾಹುತಿ ಸಂಜೆ 6.30ಕ್ಕೆ ಸುಮಂಗಲಿಯರಿಂದ ಕುಂಕುಮಾರ್ಚನೆ, ಸಪ್ತಸತಿ ಪಾರಾಯಣ, ಸ್ಥಳ: ದೇವಸ್ಥಾನ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವ್ಯವಸ್ಥಾಪಕರು:** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ–2025, ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವ, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ವನಾವರಣ ಪೂಜೆ, ಕರ್ನಾಟಕ ವೀಣಾವಾದನ: ವಿದುಷಿ ಶುಭ ಸಂತೋಷ ಅವರಿಂದ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ಸರಸ್ವತಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದ ಮಂಟಪ, ಶ್ರೀ ಸಚ್ಚಿದಾನಂದ ಆಶ್ರಮದ ಆವರಣ.

■ **ಶ್ರೀ ಅಮೃತೇಶ್ವರ ದೇವಸ್ಥಾನ:** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಉಭಯ ಜಗದ್ಗುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಚಂಡಿಕಾ ಯಾಗ, ಬೆಳಗ್ಗೆ 9.30ಕ್ಕೆ 8ನೇ ದಿನದ ಸಹಸ್ರ ಚಂಡಿಕಾ ಯಾಗ–ಮಹಾಗೌರಿ ದೇವಿಯ ಆರಾಧನೆ, 12 ಗಂಟೆಗೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಅಮೃತೇಶ್ವರ ದೇವಸ್ಥಾನ, ಧನ್ವಂತರಿ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ದಸರಾ ಚಿಂತನ, ಡಾ.ವಿ.ರಂಗನಾಥ್, 6.15–ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್ .ಎಸ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಪ್ರಾಯೋಜಿತ ಕಾರ್ಯಕ್ರಮ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಿಶ್ವ ಹೃದಯ ದಿನದ ಸಂದರ್ಭದಲ್ಲಿ ಹೃದಯ ದಿನದ ಸಂದೇಶ, ಮಹತ್ವ ಮತ್ತು ಹೃದಯದ ಪಿಸುಮಾತು ಈ ಕುರಿತು ತಿಳಿಸಿಕೊಡುತ್ತಾರೆ ಹಿರಿಯ ಹೃದ್ರೋಗ ತಜ್ಞರು ಹಾಗೂ ಹೃದಯ ವಿಜ್ಞಾನಗಳ ವಿಭಾಗದ ನಿರ್ದೇಶಕ ಡಾ.ಕೇಶವಮೂರ್ತಿ .ವಿ ನಡೆಸಿಕೊಡುತ್ತಾರೆ–ಬೇದ್ರೆ ಮಂಜುನಾಥ್, ಪ್ರಾಯೋಜಕರು–ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಮೈಸೂರು. 9.30–ಮೈಸೂರು ಬ್ರಾಂಡ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.40–ಮೈಸೂರು ಸಂಸ್ಥಾನದ ಕಲಾ ಪರಂಪರ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿ ಶಂಕರ್–ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ ವಿವಿಧ ಕಲಾವಿದರಿಂದ. 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, **ಮಧ್ಯಾಹ್ನ:** 12.05 ವನಿತಾ ವಿಹಾರ–ಹೃದಯದ ಕಾಳಜಿ ಈ ಕುರಿತು ಡಾ.ರವಿವರ್ಮ ಪಾಟೀಲ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಮಂಜುಳಾ ಪುರಾಣಿಕ, 12.35–ದೇವರನಾಮ, 12.45–ನಮ್ಮ ಆರೋಗ್ಯ–ವಿಶ್ವ ಹೃದಯ ದಿನಾಚರಣೆಯ ಸಂದರ್ಭದಲ್ಲಿ ಹೃದಯ ದಿನಾಚರಣೆಯ ಸಂದೇಶ–ಮಹತ್ವ ಮತ್ತು ಹೃದಯದ ಆರೋಗ್ಯ ಕುರಿತು ತಿಳಿಸಿಕೊಡಲಿದ್ದಾರೆ ಮಂಡ್ಯದ ಇಂಟರ್ ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ಹೇಮಾ ಎಸ್. ಇವರೊಂದಿಗೆ ಭಾಗವಹಿಸುತ್ತಾರೆ: ಡಾ.ಕುಲದೀಪ್ ಎನ್., 1.00–ಪ್ರಗತಿ ಪಥ, ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಅಲ್ಪಸಂಖ್ಯಾತರಿಗಾಗಿ ಇರುವ ಪ್ರಧಾನಮಂತ್ರಿಗಳ 15 ಅಂಶಗಳ ಯೋಜನೆ ಕುರಿತು ಮಾತನಾಡುತ್ತಾರೆ ಪತ್ರಕರ್ತರಾದ ಬಿ.ಸತೀಶ್ ಆರಾಧ್ಯ. 1.20 ಸೇವಾ ಪರ್ವ, 2025–ಆತ್ಮ ನಿರ್ಭರ ಭಾರತ್, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಸರಳಾಯ ಸಹೋದರಿಯರ ಯುಗಳ ಹಾಡುಗಾರಿಕೆ, 4.00–ಮಹಿಳಾರಂಗ, ಪ್ರವಾಸಿ ದಸರಾ–ಮೈಸೂರು ಸೀಮೆಯ ದಸರಾ ಸಂಭ್ರಮ, ಪ್ರಸ್ತುತಿ: ಕೀರ್ತನಾ.ವಿ, ಸಹನಾ ಹಾಗೂ ನೇತ್ರಾ.ಕೆ, 4.30–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ.ಪ್ರಭು ಅವರು ನಡೆಸಿದ್ದ ಸಂವಾದದ ಮೊದಲ ಭಾಗ. 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಸಿರಿಧಾನ್ಯ ಬೆಳೆಗಳು ಮತ್ತು ಮೌಲ್ಯವರ್ಧನೆ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಚಂದ್ರಕಲಾ ಹಣಗಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ: ಯುವ ಸೆಲೆಬ್ರೆಟಿ–ಚಿತ್ರನಟಿ ಹಾಗೂ ರೂಪದರ್ಶಿ ಆರೋಹಿಗೌಡ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ದಿಗ್ವಿಜಯ್.ಬಿ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ : ಗಾಯತ್ರಿ ವೆಂಕಟರಾಘವನ್–ಹಾಡುಗಾರಿಕೆ, 10.00–ನಿನಾದ: ವೈಣಿಕ ವಾಗ್ಗೇಯ ವಾಹಿನಿ. 10.30–ಸವಿನೆನಪು.

■ **ಬಾಸುದೇವ ಸೋಮಾನಿ ಕಾಲೇಜು:** ರಾಷ್ಟ್ರೀಯ ಸೇವಾ ಯೋಜನೆ, ಎನ್‌ಎಸ್‌ಎಸ್ ದಿನಾಚರಣೆ, ಉದ್ಘಾಟನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷರಾದ ಡಾ. ಎಂ. ಪುಟ್ಟಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು:** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ–ಡಾ. ಅರವಿಂದ ಮಾಲಗತ್ತಿ, ವಿಚಾರ ಸಂಕಿರಣ: ಬಸವಣ್ಣ ಮತ್ತು ಕನಕದಾಸರು: ತೌಲನಿಕ ಅಧ್ಯಯನ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು ಅವರಿಂದ, ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೇ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ರಿಂದ.

■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಭಜನೆ: ಗಾಯಿತ್ರಿ ಮಹಿಳಾ ಸಮಾಜ ಮತ್ತು ಅಪೂರ್ವ ಮಹಿಳಾ ಸಮಾಜದವರಿಂದ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ, ಸಂಜೆ 7 ರಿಂದ.

ಮೈಸೂರು ಮಿತ್ರ

ಅರಮನೆ ಆವರಣದಲ್ಲಿ ವಿಜಯಪ್ರಕಾಶ್ ಸಂಗೀತ ಯಾನದಲ್ಲಿ ತೇಲಿದ ಜನಸಮೂಹ



ಅರಮನೆ ಆವರಣದ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಧಾನ ವೇದಿಕೆಯಲ್ಲಿ ಭಾನುವಾರ ಖ್ಯಾತ ಹಿನ್ನೆಲೆ ಗಾಯಕ ವಿಜಯಪ್ರಕಾಶ್ 'ಸಂಗೀತ ಯಾನ' ಪ್ರಸ್ತುತಪಡಿಸಿದರು.

ಮೈಸೂರು,ಸೆ.28(ಎಸ್‌ಬಿಡಿ)– ಅರಮನೆ ಅಂಗಳದಲ್ಲಿ ಭಾನುವಾರ ಕಿಕ್ಕಿರಿದಿದ್ದ ಜನಸಮೂಹವನ್ನು ಖ್ಯಾತ ಹಿನ್ನೆಲೆ ಗಾಯಕ ವಿಜಯಪ್ರಕಾಶ್ 'ಸಂಗೀತ ಯಾನ'ದಲ್ಲಿ ತೇಲಿಸಿದರು.

'ಜೈಹೋ.. ಮೈಸೂರು' ಎಂದು ದಸರಾ ಸಾಂಸ್ಕೃತಿಕ ಪ್ರಧಾನ ವೇದಿಕೆಗೆ ಆಗಮಿಸಿದ ವಿಜಯ್ ಪ್ರಕಾಶ್, ಪ್ರೇಕ್ಷಕರ ಉತ್ಸಾಹ ಹೆಚ್ಚಿಸಿದರು. ಸಹಗಾಯಕರೊಂದಿಗೆ ಶಾಸ್ತ್ರೀಯ ಶೈಲಿಯಲ್ಲಿ ಶ್ರೀ ಚಾಮುಂಡೇಶ್ವರಿ ಭಕ್ತಿಗೀತೆ ಹಾಡಿ 'ಸಂಗೀತ ಯಾನ' ಆರಂಭಿಸಿ, ವಿಭಿನ್ನ ಗೀತೆಗಳೊಂದಿಗೆ ರಂಜಿಸಿದರು.

'ಹಬ್ಬ ಹಬ್ಬ ಇದು ಕರುನಾಡ ಮನೆ ಮನೆ ಹಬ್ಬ, ಇದು ಚಾಮುಂಡಿ ತಾಯಿ ತವರ ಹಬ್ಬ...' ಗೀತೆಯೊಂದಿಗೆ ತಮ್ಮೂರಿನ ದಸರಾ ಮಹೋತ್ಸವದ ಸೊಬಗನ್ನು ಸ್ಮರಿಸಿಕೊಂಡರು. ಈ ಹಾಡಿಲ್ಲದೆ ನಮ್ಮ ಕಾರ್ಯಕ್ರಮವೇ ಇಲ್ಲ ಎಂದು 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೆ ರಾಜಕುಮಾರ...' ಗೀತೆಯನ್ನು ಹಾಡುತ್ತಿದ್ದಂತೆ ಪ್ರೇಕ್ಷಕರ ಶಿಳ್ಳೆ, ಕೇಕೆ ಮುಗಿಲುಮುಟ್ಟಿತ್ತು. 'ಹಲ್ಲೋ ಹಲ್ಲೋ ನನ್ ಮನ್ಸು ಇಲ್ಲೇ ಎಲ್ಲೋ...' ಹಾಡುವಾಗ ಪ್ರೇಕ್ಷಕರೂ ಧ್ವನಿಗೂಡಿಸಿದರು. 'ಓಪನ್ ಹೇರು ಬಿಟ್ಕೊಂಡು ಕೂದಲು ಹಾರಾಡುಸ್ಕೊಂಡು ಏರಿಯಾದಲ್ಲಿ ಓಡಾಡ ಬೇಡ್ವೆ...' ಎಂದು ಹಾಡಿ ಯುವಸಮೂಹವನ್ನು ಕುಣಿಸಿದರು.



ವಿಜಯಪ್ರಕಾಶ್ ತುಡದ ಪೃಥ್ವಿ ಭಟ್, ಶಾಶ್ವತಿ ಕಶ್ಯಪ್ ಹಾಗೂ ಅಖಿಲ ಗಾಯನದ ಮೋಡಿ

ಕಾಂತಾರ ಚಿತ್ರದ ಜನಪ್ರಿಯ 'ಸಿಂಗಾರ ಸಿರಿಯೇ ಅಂಗಾಲಿನಲೇ ಬಂಗಾರ ಅಗೆಯುವ ಮಾಯೆ...', 'ಬೆಳಗೆದ್ದು ಯಾರ ಮುಖವಾ ನಾನು ನೋಡಿದೆ...' ಸೇರಿದಂತೆ ಹಲವು ವಿಭಿನ್ನ ಗೀತೆಗಳನ್ನು ಪ್ರಸ್ತುತಪಡಿಸಿ, ಸಂಗೀತಾಭಿಮಾನಿಗಳಿಗೆ ರಸದೌತಣ ನೀಡಿದರು.



ವಿಜಯಪ್ರಕಾಶ್ 'ಸಂಗೀತ ಯಾನ'ವನ್ನು ಆಸ್ವಾದಿಸಿದ ಗಣ್ಯರು.

ಪರಿವರ್ತನಾ ಗೀತಾಯಾನ: ಬೆಂಗಳೂರಿನ ಭೂಮ್ತಾಯಿ ಬಳಗದಿಂದ ಪರಿವರ್ತನಾ ಗೀತೆಗಳ ಪ್ರಸ್ತುತಿ ವಿಶೇಷವಾಗಿತ್ತು. ಗಾಯಕಿ ನಿರ್ಮಲಾ ನೇತೃತ್ವದ ಕಲಾವಿದರ ತಂಡವು, ಅಪರೂಪದ ರಚನೆಗಳನ್ನು ಹಾಡುವ ಮೂಲಕ ಸಾಮಾಜಿಕ ಸುಧಾರಣೆಗೆ ಶ್ರಮಿಸಿದ ಮಹನೀಯರ ಸ್ಮರಣೆಯೊಂದಿಗೆ ಬದುಕಿನ ಮೌಲ್ಯಗಳನ್ನು ಪ್ರೇಕ್ಷಕರ ಮನಮುಟ್ಟಿಸಿದರು. 'ಮರೆಯೋದುಂಟೇ ಮೈಸೂರ ಒಡೆಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ...', 'ಜೈ ಭೀಮ್ ಮಹಾರಾಷ್ಟ್ರದ ಹಣತೆ, ನೀನೊಂದು ಮುಗಿಯದ ಕವಿತೆ...', 'ಓ ಸೋದರರೇ ಓ ಸೋದರೀಯರೆ... ಎದ್ದೇಳಿ ಜಾಗೃತರಾಗಿ ಚಿಂತಿಸಿ ಒಂದಾಗಿ...', 'ಗುಡಿಸಲಾ ಜ್ಯೋತಿ ಊರೂರಾ ಸುತ್ತಿ ಗುಡಿಯನು ಬೆಳಗಿತು ಜ್ಯೋತಿರ್ಲಿಂಗ, ಕೂಡಲ ಸಂಗಮದೇವ...', 'ಪ್ರೀತಿಯ ಗಾಳಿ ಬೀಸುತಿದೆ...', 'ಕತ್ತಲ ಜಗತ್ತಿಗೆ ಬೆಳಕನು ನೀಡಿದ ಅರಿವೇ ಅಂಬೇಡ್ಕರ...', 'ಕಲ್ಲು ಬಂಡೆಯ ಹಾಗೆ ಗಟ್ಟಿ ಮಾಡಿಕೋ ಎದೆಯಾ, ಆ ಕಲ್ಲೇ ಕೊನೆಗೊಮ್ಮೆ ಮೂರ್ತಿಯಾಗುವುದು ಗೆಳೆಯಾ...', 'ಭಾರತವೆಂದರೆ ತ್ರಿವರ್ಣ ಧ್ವಜವು ಗಡಿಯೂ ಗಡಿಯೊಳಗಿನ ನೆಲವು...' ಸೇರಿದಂತೆ ಅನೇಕ ಪರಿವರ್ತನಾ ಗೀತೆಗಳನ್ನು ಮೊಳಗಿಸಿದರು.

ಜೊತೆಗೆ ಹೆಚ್.ಭುವನೇಶ್ವರಿ ವೆಂಕಟೇಶ್ ಮತ್ತು ತಂಡದವರ ಸುಗಮ ಸಂಗೀತ, ಡಾ.ಪದ್ಮಜಾ ರೆಡ್ಡಿ ತಂಡದ ನವದುರ್ಗಾ ಕೂಚುಪುಡಿ ನೃತ್ಯ, ತಮಿಳುನಾಡಿನ ಡಾ.ರಾಗಿಣಿ ಮತ್ತು ತಂಡದ ಭಜನ್ ಸಂಗೀತ ಹಾಗೂ ರಂಗಸ್ವಾಮಿ ತಂಡದವರ ನಾದಸ್ವರ ಪ್ರಸ್ತುತಿ, ಪ್ರೇಕ್ಷಕರಿಗೆ ಮುದ ನೀಡಿದವು.

ಗಜ 'ಗಂಭೀರ'!: ಕಾರ್ಯಕ್ರಮದಲ್ಲಿ ನಿರೂಪಕರು ಆಗಾಗ್ಗೆ ಗಜ ಗಂಭೀರತೆ ಬಗ್ಗೆ ನೆನಪಿಸುತ್ತಿದ್ದರು. ಪಟ್ಟದ ಆನೆ, ನಿಶಾನೆ ಆನೆಗಳು ಅರಮನೆಯಿಂದ ಕೋಡಿ ಸೋಮೇಶ್ವರ ದೇವಸ್ಥಾನಕ್ಕೆ ಹೋಗಿ ಬರುವ ವೇಳೆಯಲ್ಲಿ ಕಾರ್ಯಕ್ರಮ ನಿಲ್ಲಿಸಲಾಗುತ್ತಿತ್ತು. ನಿರೂಪಕರು ಪದೇ ಪದೆ ಆನೆಗಳು ಓಡಾಡುವಾಗ ಯಾರೂ ಕಿರುಚಾಡಬೇಡಿ, ಫ್ಲಾಷ್ ಲೈಟ್ ಹಾಕಿ ಫೋಟೋ, ವಿಡಿಯೋ ತೆಗೆಯಬೇಡಿ, ಗಂಭೀರತೆ ಕಾಪಾಡಿ ಎಂದು ಮನವಿ ಮಾಡಿದರು. ಅಲ್ಲದೆ ಧ್ವನಿವರ್ಧಕಗಳ ಸದ್ದೂ ಕಡಿಮೆ ಮಾಡಲಾಗಿತ್ತು.

ರೋಮಾಂಚನಕಾರಿ ದಸರಾ ಕುಸ್ತಿ ಪಂದ್ಯಾವಳಿಗೆ ತೆರೆ

ಪೈ.ಸ್ವಾತಿ ಪಾಟೀಲ್‌ಗೆ 'ದಸರಾ ಕಿಶೋರಿ', ಪೈ.ಸಂಜೀವ ಕೋರವರ 'ದಸರಾ ಕಿಶೋರ', ಪೈ.ಮಂಜುನಾಥ್ 'ದಸರಾ ಕೇಸರಿ', ಪೈ.ಕಾಮೇಶ್ ಪಾಟೀಲ್ 'ದಸರಾ ಕಂಠೀರವ' ಪ್ರಶಸ್ತಿ



ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ಮೈಸೂರು ದಸರಾ ಕಿಶೋರಿ, ದಸರಾ ಕಿಶೋರ, ದಸರಾ ಕೇಸರಿ, ದಸರಾ ಕಂಠೀರವ ಪ್ರಶಸ್ತಿಗಳಿಗೆ ಭಾಜನರಾದ ಪೈಲ್ವಾನ್‌ಗಳನ್ನು ಚಿತ್ರದಲ್ಲಿ ಕಾಣಬಹುದು

ಮೈಸೂರು, ಸೆ.28(ಎಸ್‌ಪಿಎನ್)– ದಸರಾ ಮಹೋತ್ಸವದ ಜಗಜಟ್ಟಿ ಕಾಳಗದಲ್ಲಿ ಬೆಳಗಾವಿ ಸ್ವಾತಿ ಪಾಟೀಲ್‌ಗೆ 'ದಸರಾ ಕಿಶೋರಿ', ದಾವಣಗೆರೆಯ ಸಂಜೀವ ಕೋರವರ 'ದಸರಾ ಕಿಶೋರ', ಉತ್ತರ ಕನ್ನಡದ ಪೈ.ಮಂಜುನಾಥ್ 'ದಸರಾ ಕೇಸರಿ' ಹಾಗೂ ಬಹಳ ರೋಮಾಂಚನಕಾರಿಯಾಗಿ ಬೆಳಗಾವಿ ಕಾಮೇಶ್ ಪಾಟೀಲ್ 'ದಸರಾ ಕಂಠೀರವ' ಪ್ರಶಸ್ತಿಗೆ ಭಾಜನರಾದರು.

ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆದ ಏಳುದಿನದ ಕೊನೆಯ ದಿನದಲ್ಲಿ ನಡೆದ ಕುಸ್ತಿ ಪಂದ್ಯಾವಳಿಗಳು ಅಂತ್ಯಗೊಂಡಿದೆ. ಭಾನುವಾರ ವಿವಿಧ ಟೈಟಲ್ ಕುಸ್ತಿಗಳಾದ ಮೈಸೂರು ದಸರಾ ಕುಮಾರ, ದಸರಾ ಕಿಶೋರಿ, ದಸರಾ ಕಿಶೋರ, ದಸರಾ ಬಾಲ ಕಿಶೋರ, ದಸರಾ ಬಾಲ ಕಿಶೋರಿ, ದಸರಾ ಕೇಸರಿ, ದಸರಾ ಕಂಠೀರವ, ದಸರಾ ಬಾಲ ಕೇಸರಿ, ದಸರಾ ಬಾಲ ಕಂಠೀರವ ವಿಭಾಗದಲ್ಲಿ ಜಟ್ಟಿಗಳು ಗೆದ್ದು ಬೀಗಿದರು.

'ಮೈಸೂರು ದಸರಾ ಕುಮಾರ': ಪ್ರಶಸ್ತಿಗಾಗಿ ಮದಗಜಗಳಂತೆ ಮಟ್ಟಿಯಲ್ಲಿ 30 ನಿಮಿಷದ ಕುಸ್ತಿಯಲ್ಲಿ ಸೆಣಸಾಡಿದ ಮೈಸೂರು ವಿವಿ ಪೈ.ಚೇತನ್, ಎದುರಾಳಿ ಮೈಸೂರು ಪೈ.ಚೇತನ್‌ಗೌಡರನ್ನು 30 ನಿಮಿಷದ ಟೈಟಲ್ ಕುಸ್ತಿಯಲ್ಲಿ ಚಿತ್ ಮಾಡಿ 19 ಅಂಕಗಳ ಅಂತರದಲ್ಲಿ ಭರ್ಜರಿ ಜಯಭೇರಿ ಬಾರಿಸಿ 'ಮೈಸೂರು ದಸರಾ ಕುಮಾರ' ಪ್ರಶಸ್ತಿಗೆ ಭಾಜನರಾದರು. **'ದಸರಾ ಕಿಶೋರ' ವಿಭಾಗದಲ್ಲಿ:** ದಾವಣಗೆರೆಯ ಸಂಜೀವ ಕೋರವರ (12ಅಂಕ) ಪಡೆದು ಬಾಗಲಕೋಟೆ ಕುಮಾರ ನಾಗಲೂರು (0ಅಂಕ) ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದು ಬೀಗಿದರು.

'ದಸರಾ ಕೇಸರಿ ಪ್ರಶಸ್ತಿ'ಗೆ ಉತ್ತರ ಕನ್ನಡ ಮಂಜುನಾಥ(4ಅಂಕ) ಹಣಾಹಣಿಯ ಕಾಳಗದಲ್ಲಿ, ಬೆಳಗಾವಿ ಪರಮಾನಂದ(2ಅಂಕ) ಅವರನ್ನು ಸೋಲಿಸಿ ಜಯಶೀಲರಾದರೆ, **ದಸರಾ ಬಾಲ ಕಿಶೋರ:** ದಾವಣಗೆರೆ ಆರ್.ಪ್ರಜ್ವಲ್(5ಅಂಕ) ಎದುರಾಳಿಯನ್ನು ಮಣ್ಣುಮುಕ್ಕಿಸುವ ಮೂಲಕ, ಬೆಳಗಾವಿ ಪ್ರದೀಪ್(0ಅಂಕ) ಅವರನ್ನು ಸೋಲಿಸಿ ಪರಾಕ್ರಮ ಮೆರೆದರು.

'ದಸರಾ ಬಾಲ ಕುಮಾರ': ಧಾರವಾಡ ಚೇತನ್ ಉತ್ತಮ ಕುಸ್ತಿ ಮಾಡುವ ಮೂಲಕ(11ಅಂಕ) ಎದುರಾಳಿ ಮುತ್ತುರಾಜ್(4ಅಂಕ) ಕಟ್ಟಿಹಾಕಿದರೆ, **'ದಸರಾ ಬಾಲ ಕೇಸರಿ':** ಅರ್ಜುನ್ ಕೊರವರ ಬಿರುಸಿನ ಕುಸ್ತಿ ಆಡುವ ಮೂಲಕ(8ಅಂಕ), ಸತ್ಯರಾಜ್ ಅವರನ್ನು (4ಅಂಕ) ಸೋಲುಣಿಸಿದರು.

'ದಸರಾ ಬಾಲ ಕಂಠೀರವ': ಹನುಮಂತ ಬೇವಿನಮಟ್ಟಿ (6ಅಂಕ) ಅವರ ರೋಮಾಂಚನಕಾರಿ ಕಾಳಗದಂತಿದ್ದ ಕುಸ್ತಿಯಲ್ಲಿ ಎದುರಾಳಿ ಸುರೇಶ್ ಮುರಾರಿ ಲಂಗೋಟಿ ಅವರನ್ನು (6ಅಂಕ) ಸಮಬಲದಲ್ಲಿದ್ದ ಅಂಕವನ್ನು ಕೊನೆಯ ಕ್ಷಣದಲ್ಲಿ ಮುರಿದು ಧೂಳೆಬ್ಬಿಸಿದರೆ, **ದಸರಾ ಬಾಲ ಕಿಶೋರಿ:** ಬನ್ನೂರು ಜಾನವಿ ಅವರು ಉತ್ತಮ ಕುಸ್ತಿ ಆಡಿ, ತಿ.ನರಸೀಪುರ ನಂದಿನಿ ಅವರ ವಿರುದ್ಧ ಜಯಗಳಿಸಿದರು.

ದಸರಾ ಕಂಠೀರವ: ಬಹಳ ರೋಮಾಂಚನಕಾರಿಯಾಗಿ ಬೆಳಗಾವಿ ಕಾಮೇಶ್ ಪಾಟೀಲ್(2ಅಂಕ) ಕುಸ್ತಿ ನಡೆಸಿ, ಭದ್ರಾವತಿ ಕಿರಣ್(1ಅಂಕ)ಅವರಿಗೆ ಸೋಲುಣಿಸಿದರೆ, **ಮೈಸೂರು ದಸರಾ ಕಿಶೋರಿ:** ಬೆಳಗಾವಿ ಸ್ವಾತಿ ಪಾಟೀಲ್ (6ಅಂಕ) ಹಣಾಹಣಿಯ ಕುಸ್ತಿಯಾಡಿ, ಹಳಿಯಾಳ ಪ್ರತೀಕ್ಷ(2ಅಂಕ)ರನ್ನು ಸೋಲಿಸಿ ಮೈಸೂರಿನ ದಸರಾ ಕಿಶೋರಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಕ್ಕರೆ ಅದೇ ಸ್ವರ್ಗ

ತಿಮ್ಮ : ವೋಟ್ ಹಾಕೋಕೆ 18 ವರ್ಷ ಸಾಕಂತೆ. ಆದರೆ, ಮದುವೆ ಆಗೋಕೆ ಯಾಕ್ 21 ವರ್ಷ ಬೇಕಂತೆ?

ಗುಂಡ : ಅಯ್ಯೋ ದಡ್ಡ. ಸರ್ಕಾರಕ್ಕೂ ಗೊತ್ತಿದೆ. ದೇಶ ಆಳೋದು ಸುಲಭ, ಆದರೆ ಸಂಸಾರ ಮಾಡೋದು ಕಷ್ಟ ಅಂತ.

ಮೈಸೂರು ಮಿತ್ರ

ಸೋಮವಾರ, 29 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಜೀವನ ಎಂದರೆ ಅಭಿನಯಿಸುವುದಲ್ಲ, ಅನುಭವಿಸುವುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇದ್ದದ್ದು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದಂತೆ

ನಿಮ್ಮ ಪತ್ರಗಳು

ಸರಸ್ವತಿ ಪುತ್ರರ ಬ್ರಹ್ಮಲೋಕ 'ಯಾನ'

ಮಾನ್ಯರೆ,

ಪದ್ಮಶ್ರೀ, ಪದ್ಮಭೂಷಣ, ಸರಸ್ವತಿ ಸಮ್ಮಾನ ಪುರಸ್ಕೃತ, ಸಂತೆಶಿವರ ಲಿಂಗಣ್ಣಯ್ಯ



ಭೈರಪ್ಪ(ಎಸ್.ಎಲ್ ಭೈರಪ್ಪ) ಈ ಹೆಸರು ವಿಶ್ವವಿಖ್ಯಾತ, ನಾಡು ಕಂಡ ಅಪ್ರತಿಮ ಕಾದಂಬರಿಕಾರ, ದೇಶಭಕ್ತ, ರಾಷ್ಟ್ರವಾದಿ, ನೇರನುಡಿಯ ಭೈರಪ್ಪನವರು 94 ವರ್ಷಗಳ ತುಂಬು ಜೀವನ ನಡೆಸಿ ಬ್ರಹ್ಮಲೋಕ 'ಯಾನ' ಮಾಡಿದ್ದಾರೆ. ಬ್ರಹ್ಮಲೋಕವೇ ಏಕೆ ಅಂದರೆ ಕಾರಣ ಅವರು ಸರಸ್ವತಿ ಪುತ್ರರು. ಒಂದು ಕನ್ನಡ ಕಾದಂಬರಿಗೆ ಪ್ಯಾನ್ ಇಂಡಿಯಾ ಸ್ಟೇಟಸ್ ನೀಡಿದ ಪ್ರಥಮ ಕನ್ನಡಿಗ. ಪ್ಯಾನ್ ಇಂಡಿಯಾ ಕಾದಂಬರಿಕಾರ ಅಂದರೆ ತಪ್ಪಾಗಲಿಕ್ಕಿಲ್ಲ. ಭೈರಪ್ಪನವರ 19 ಕಾದಂಬರಿಗಳು ಇತರೆ ಭಾರತೀಯ ಮತ್ತು ವಿದೇಶಿ ಭಾಷೆಗಳಿಗೆ ಭಾಷಾಂತರಗೊಂಡಿವೆ. ಬಹುಶಃ ಬೇರೆ ಯಾರದು ಇಷ್ಟಿರಲಿಕ್ಕಿಲ್ಲ.

ಇಂತಹ ಭೈರಪ್ಪನವರ ಬಾಲ್ಯವೇನು ಸುಖವಾಗಿರಲಿಲ್ಲ. ಕಷ್ಟ ಕಾರ್ಪಣ್ಯ "ದಾಟಿ" ಬೆಳೆದು ವಾರಾನ್ನ ಮಾಡಿ, ವಿದ್ಯಾಭ್ಯಾಸ ಮಾಡಿ, ಈ ಎತ್ತರಕ್ಕೆ ಬೆಳೆದಿದ್ದು ಕನ್ನಡಿಗರ ಹೆಮ್ಮೆ ಮತ್ತು "ಗರ್ವ", ಅವರೇ "ಬಿತ್ತಿ" ಆರಂಭಿಸಿದ ಸಾಹಿತ್ಯ ಕೃಷಿ ಇಷ್ಟರ ಮಟ್ಟಿಗೆ "ಆವರಣ"ಗೊಂಡಿರುವುದು ಅವರು ನಡೆಸಿದ ಸಾಹಿತ್ಯ ಕೃಷಿಗೆ "ಸಾಕ್ಷಿ" ಸಮಾಜದ ಆಗುಹೋಗುಗಳ ಬಗ್ಗೆ ಅವರು ನಡೆಸುತ್ತಿದ್ದ ಸಂಶೋಧನೆ ಮತ್ತು ಕಾದಂಬರಿ ರೂಪದಲ್ಲಿ ಓದುಗರಿಗೆ ತಲುಪಿಸುತ್ತಿದ್ದ ರೀತಿಗೆ ಭೈರಪ್ಪನವರಿಗೆ ಭೈರಪ್ಪನವರೇ ಸಾಟಿ.

ಬಹುತೇಕ ಅವರ ಎಲ್ಲ ಕಾದಂಬರಿಗಳು ಪಿಹೆಚ್.ಡಿಗೆ ಅರ್ಹವಾದುದ್ದೆ. ಆಬಾಲವೃದ್ಧರವರೆಗೆ ಓದುಗರನ್ನು ಹೊಂದಿದ್ದ ಭೈರಪ್ಪನವರ ಕಾದಂಬರಿಗಳು ಬಿಡುಗಡೆಗೆ ಮುನ್ನ ಮುಂಗಡವಾಗಿ ಕಾಯ್ದಿರಿಸುತ್ತಿದ್ದ ಓದುಗರನ್ನು ನಾನು ಮೈಸೂರು, ಬೆಂಗಳೂರು ಸಪ್ನ ಬುಕ್‌ಹೌಸಿನಲ್ಲಿ ನೋಡಿದ್ದೇನೆ. ಭೈರಪ್ಪನವರು ಮೈಸೂರಲ್ಲಿ ಅದರಲ್ಲೂ ನಮ್ಮ ಮನೆಯ ಹತ್ತಿರ ವಾಸವಿದ್ದು ಅವರ ಜೀವಿತಾವಧಿಯಲ್ಲಿ ನಾವಿದ್ದೇವೆಲ್ಲ ಎಂಬ ಸಂತೋಷ ಮತ್ತು ಸಾರ್ಥಕ ಭಾವನೆ, ಭೈರಪ್ಪನವರು ದೇಶದ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದ ಮತ್ತು ಮೋದಿ ಅವರೇ ಪ್ರಧಾನ ಮಂತ್ರಿ ಆಗಬೇಕೆಂದು ಆಸೆಪಟ್ಟವರ ಪಟ್ಟಿಯಲ್ಲಿ ಮೊದಲಿಗರು.

ದೇಶ, ಧರ್ಮದ ವಿಚಾರ ಬಂದಾಗ ಯಾವುದೇ ಮುಲಾಜಿಲ್ಲದೆ ಸಮರ್ಥವಾಗಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿದ್ದರು. ಅವರ ಬರವಣಿಗೆ ಮತ್ತು ಅವರ ಭಾಷಣದ ಧಾಟಿ ಬಹಳ ಅಪರೂಪ ಮತ್ತು ವಿಶೇಷ. ಬಲಪಂಥೀಯ ಸಾಹಿತಿ ಎಂದು ಕೆಲವರು ಹೇಳಿದರು ಅವರು ಅದಕ್ಕೆ ಕವಡೆಕಾಸಿನ ಕಿಮ್ಮತ್ತು ಕೊಟ್ಟಿರಲಿಲ್ಲ, ಹಲವು ಸನ್ನಿವೇಶಗಳಲ್ಲಿ ಅವರಿಗೆ ಜ್ಞಾನಪೀಠ ತಪ್ಪಿದ್ದು ಪ್ರಾಯಸ ಇದೆ ಕಾರಣಕ್ಕಿರಬಹುದು. ಬಹುತೇಕ ಕನ್ನಡಿಗರಿಗೆ "ಸರಸ್ವತಿ ಸಮ್ಮಾನ್"ಎಂಬ ಪ್ರಶಸ್ತಿ ಇದೆ ಎಂಬುದು ಗೊತ್ತಾಗಿದ್ದೆ ಭೈರಪ್ಪನವರ "ಮಂದ್ರ" ಕಾದಂಬರಿಗೆ ದೊರೆತಾಗ.


ಹೋಗಿ ಬನ್ನಿ ಭೈರಪ್ಪನವರೇ ಮತ್ತೆ ಮತ್ತೆ ಹುಟ್ಟಿ ಬನ್ನಿ, ನಿಮ್ಮ "ವಂಶವೃಕ್ಷ" ಬೆಳೆಯಲಿ ಮತ್ತು ಬೆಳಗಲಿ, ನಿಮ್ಮ ಅಗಲಿಕೆ ಕನ್ನಡ ಸಾರಸ್ವತ ಲೋಕಕ್ಕೆ "ತಬ್ಬಲಿಯು ನೀನಾದೆ ಮಗನೆ" ಆಗಿದೆ. ಇದನ್ನು ಅಷ್ಟು ಸುಲಭವಾಗಿ ನಿಮ್ಮ ಓದುಗರಿಗೆ "ದಾಟು"ವುದು ಕಷ್ಟ, ಕನ್ನಡ ಸಾರಸ್ವತ ಲೋಕದಲ್ಲಿ ನಿಮ್ಮ ಹೆಸರು ಚಿರಸ್ಥಾಯಿ. ನೀವು ಅಧ್ಯಕ್ಷತೆ ವಹಿಸಿದ್ದ 1999ರ ಕನಕಪುರ ಸಾಹಿತ್ಯ ಸಮ್ಮೇಳನದ ಕೊನೆಯ ದಿನದ ಭಾಷಣ, 2019ರ ಮೈಸೂರು ದಸರಾ ಉದ್ಘಾಟನೆ ಸಾಹಿತ್ಯಾಭಿಮಾನಿಗಳ ಮತ್ತು ವಿಶೇಷವಾಗಿ ನಿಮ್ಮ ಓದುಗ ಬಳಗದ ಅವಿಸ್ಮರಣೀಯ ಕ್ಷಣಗಳು. ವಿಪರ್ಯಾಸ ಅಂದರೆ ಇದೇ ನವರಾತ್ರಿ "ಪರ್ವ" ಕಾಲದಲ್ಲಿ ನೀವು "ತಂತು" ಕಳಚಿ "ಯಾನ" ಮುಗಿಸಿದ್ದು, ಹೋಗಿ ಬನ್ನಿ ನಮ್ಮ ಜೀವಿತ ಅವಧಿಯಲ್ಲಿ ಓದಲು ಸಾಕಷ್ಟು ಸರಕು ನೀಡಿದ್ದೀರಿ, ನಿಮಗೆ ನಿಮ್ಮೆಲ್ಲಾ ಓದುಗರ ಪರವಾಗಿ ನಮಸ್ಕಾರ.

–ಸತ್ಯಪ್ರಸಾದ್, ಸಿ.ಆರ್., ಶ್ರೀರಾಂಪುರ, ಮೈಸೂರು.

ಕೈಬೀಸಿ ಕರೆಯುವ ಫಲ–ಪುಷ್ಪ ಪ್ರದರ್ಶನ

ಮಾನ್ಯರೆ,

ವಿಶ್ವ ವಿಖ್ಯಾತ 2025ರ ಮೈಸೂರು ದಸರಾ ಮಹೋತ್ಸವವು ಸೆ.22ರಿಂದ



ಆರಂಭವಾಗಿದ್ದು ಅ.2ರವರೆಗೆ ನಡೆಯಲಿದೆ. ಹಲವಾರು ಮನರಂಜನೆ ಮತ್ತು ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ ಮೈಸೂರು ಮತ್ತು ತೋಟಗಾರಿಕೆ ಸಂಘದಿಂದ ಪ್ರತಿ ವರ್ಷವೂ ಕುಪ್ಪಣ್ಣ ಪಾರ್ಕ್‌ನಲ್ಲಿ ದಸರಾ ಅಂಗವಾಗಿ ಫಲ–ಪುಷ್ಪ ಪ್ರದರ್ಶನ ಏರ್ಪಡಿಸುತ್ತಾ ಬಂದಿದ್ದು, ವರ್ಷದಿಂದ ವರ್ಷಕ್ಕೆ ವಿಭಿನ್ನ ಮತ್ತು ವಿಶಿಷ್ಟವಾಗಿ ನಡೆಸಿಕೊಂಡು ಬರುತ್ತಿದೆ. ಅದರಂತೆಯೇ ಈ ಬಾರಿ ಹಲವು ರೀತಿಯ ಕಲಾಕೃತಿಗಳನ್ನು ವಿವಿಧ ಬಗೆಯ ತಳಿಗಳ ಬಣ್ಣ ಬಣ್ಣದ ಅಂದ ಚಂದದ ತರಹೇವಾರಿ ಹೂಗಳಿಂದ ಕಲಾಕೃತಿಗಳನ್ನು ಸಿಂಗರಿಸಿ ನೋಡುಗರನ್ನು ತನ್ನತ್ತ ಸೆಳೆಯುವಂತೆ ಮೋಡಿ ಮಾಡಿದೆ.

ಒಂದು ರೀತಿಯಲ್ಲಿ ಹೂವಿನ ಲೋಕವೇ ಸೃಷ್ಟಿಯಾಗಿದೆ. ಕಣ್ಣು ಮತ್ತು ಮನಸ್ಸಿಗೆ ಹಿತಕರ ಅನುಭವಗಳನ್ನು ನೀಡುತ್ತಿದೆ. ಗಾಜಿನ ಮನೆಯಲ್ಲಿ ಮಹಾತ್ಮ ಗಾಂಧಿಯವರ ಮಂಟಪವು ಮೂರು ಲಕ್ಷ ಗುಲಾಬಿ ಹೂಗಳಿಂದ ಅತ್ಯಂತ ಆಕರ್ಷಣೀಯವಾಗಿದೆ. ಉದ್ಯಾನದತ್ತ ಹೆಜ್ಜೆ ಹಾಕಿದರೆ ನವದುರ್ಗೆಯರು, ಅಂಬಾರಿ ಹೊತ್ತ ಆನೆ, ಆಪರೇಷನ್ ಸಿಂಧೂರ್‌ನಲ್ಲಿ ಭಾರತಕ್ಕೆ ಕೀರ್ತಿ ತಂದಂತಹ ಹೆಮ್ಮೆಯ ಸುಪುತ್ರಿಯರು, ಮಹಾನಂದಿ, ಭೂಮಿಯನ್ನು ರಕ್ಷಿಸುವ ಸಂದೇಶ, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ. ತಂಡಿ ಸಡಕ್, ಡಾಲ್ಫಿನ್ ಹೂವಿನ ಕಲಾಕೃತಿಗಳು ಕಣ್ಮನ ಸೆಳೆಯುತ್ತಿವೆ.

ಹಚ್ಚ ಹಸಿರಿನಿಂದ ಕಂಗೊಳಿಸುವ ಚಪ್ಪರವು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಈ ಮನಮೋಹಕ ದೃಶ್ಯಗಳನ್ನು ಕಣ್ತುಂಬಿಕೊಂಡು ಇವುಗಳನ್ನು ಸೆರೆ ಹಿಡಿದು ಸೆಲ್ಫಿ ಮತ್ತು ಫೋಟೋಗಳಿಗಾಗಿ ಮುಗಿ ಬೀಳುತ್ತಿರುವ ದೃಶ್ಯಗಳು ಕಾಣುತ್ತವೆ. ಹಾಗೆಯೇ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಜ್ಯೋತಿ, ಶಕ್ತಿ ಯೋಜನೆ, ಗೃಹಲಕ್ಷ್ಮಿ, ಅನ್ನಭಾಗ್ಯ ಹಾಗೂ ಯುವ ನಿಧಿ ಯೋಜನೆಗಳ ಕಲಾಚಿತ್ರಗಳನ್ನು ಒಳಗೊಂಡಂತೆ ರಾರಾಜಿಸುತ್ತಿವೆ. ಅಲ್ಲಲ್ಲಿ ಸೂರ್ಯಕಾಂತಿಯ ಹೂವುಗಳು ಸ್ವಾಗತಿಸುವಂತೆ ಭಾಸವಾಗುತ್ತದೆ. ಒಟ್ಟಿನಲ್ಲಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. **–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸ್ವಾರ್ಥದ ಸೌಧಗಳು... ಸಂಬಂಧದ ಸಮಾಧಿಗಳು...!

ಪುರಾಣ ಪುಣ್ಯ ಕಥೆಗಳನ್ನು ಓದುವುದು, ಆಲಿಸುವುದು, ಸಿನೆಮಾ–ನಾಟಕಗಳಲ್ಲಿ ನೋಡುವುದು ಅವುಗಳಲ್ಲಿನ ಜೀವನ ಮೌಲ್ಯಗಳನ್ನು ಬದುಕಿಗೆ ಅಳವಡಿಸಿಕೊಳ್ಳುವುದು, ದಾನವರ ಗುಣಗಳನ್ನು ತ್ಯಜಿಸಿ, ಮಾನವರ ಗುಣಗಳನ್ನು ಅನುಸರಿಸಬೇಕೆಂದು ಅವುಗಳ ಉದ್ದೇಶವಾಗಿರುತ್ತದೆ. ಅದು ನಿಜವಾದ ಶಿಕ್ಷಣ. ನೀತಿಕಥೆಗಳನ್ನು ಮಕ್ಕಳಿಗೆ ಹೇಳುವುದು, ಅವುಗಳಲ್ಲಿನ ನೀತಿಗಳನ್ನು ತಮ್ಮ ಬದುಕಿನಲ್ಲಿ ಅನ್ವಯಿಸಿಕೊಳ್ಳಬೇಕೆಂದು. ಆದರೆ ಇಂದು ಓದುವುದೇ ಬೇರೆ, ಬದುಕುವುದೇ ಬೇರೆ ಎನ್ನುವಂತಾಗಿದೆ. ಪಠ್ಯಪುಸ್ತಕದಲ್ಲಿನ ವಿಷಯಗಳೆಲ್ಲಾ ಪರೀಕ್ಷೆಯಾಗುವವರೆವಿಗೆ ನೆನಪಿನಲ್ಲಿ ಇರಿಸಿಕೊಂಡು, ನಂತರ ಮರೆತು ಬಿಡುವುದಕ್ಕೆ ಎಂದು ಬಹುಪಾಲು ವಿದ್ಯಾರ್ಥಿಗಳ ನಂಬಿಕೆ ಮತ್ತು ಅನಿಸಿಕೆ. ಮನುಷ್ಯ ಹೆಚ್ಚೆಚ್ಚು ಶಿಕ್ಷಣ ಪಡೆದಂತೆಲ್ಲಾ ಸಮಾಜದಿಂದ ದೂರಾಗುತ್ತಾ ಹೋಗುತ್ತಾನೆ ಎಂದು ಮಹಾತ್ಮರೊಬ್ಬರು ಹೇಳಿದ್ದಾರೆ. ಇಂದಿನ ಶಿಕ್ಷಿತ ವರ್ಗದ ಬದುಕಿನ ರೀತಿ ರಿವಾಜು, ನಡೆ–ನುಡಿ ನೋಡಿದರೆ, ಅದು ಸತ್ಯ ಎನಿಸುತ್ತದೆ. ಮೋಸ, ವಂಚನೆ, ದುರಾಸೆ, ದುರಾಲೋಚನೆ, ಲಂಪಟತನ, ಸ್ವಾರ್ಥ, ನಿರ್ಭಾವುಕತೆ, ಪ್ರಾಕ್ಟಿಕಲ್ ಮನೋಭಾವ ಇವುಗಳು ಹೆಚ್ಚಾಗಿ ವಿದ್ಯಾವಂತರಲ್ಲಿಯೇ ಕಾಣುತ್ತಿರುವುದು ಈ ಶತಮಾನದ ದೌರ್ಭಾಗ್ಯಗಳಲ್ಲೊಂದು.

ಇಂದು ಪೊಲೀಸ್ ಸ್ಟೇಷನ್‌ಗೆ ನೀಡುವ ದೂರುಗಳು, ಕೋರ್ಟಿನಲ್ಲಿರುವ ವ್ಯಾಜ್ಯಗಳು ಸ್ವಾರ್ಥ, ದುರಾಸೆಯಿಂದ ಇರುವ ಕಾರಣಕ್ಕೆ, ಹೊಂದಾಣಿಕೆ ಇಲ್ಲದೇ ಇರುವುದು, ತ್ಯಾಗ ಮಾಡದೇ ಇರುವುದು ಇಂತಹ ಮನೋಭಾವದಿಂದಲೇ ಹೆಚ್ಚಾಗುತ್ತಿವೆ. ರಕ್ತ ಹಂಚಿಕೊಂಡು ಹುಟ್ಟಿದ ಒಡಹುಟ್ಟಿದವರೊಂದಿಗೆ ಒಂದು ಗುಂಟೆ ಜಮೀನು, ಒಂದು ಅಡಿ ಸೈಟು ಹಂಚಿಕೊಳ್ಳುವ ಕಾರಣಕ್ಕೆ ಕೋರ್ಟು ಮೆಟ್ಟಿಲು ಹತ್ತಿದ ಉದಾಹರಣೆಗಳಿವೆ. ಅಣ್ಣ–ತಂಗಿ, ಅಕ್ಕ–ತಮ್ಮ ಅಷ್ಟೇ ಏಕೆ ಗಂಡ–ಹೆಂಡತಿ, ಹೆತ್ತವರು–ಮಕ್ಕಳು ಸಂಬಂಧಗಳಲ್ಲಿ ಸಾಮರಸ್ಯ ಕಡಿಮೆಯಾಗಿ ಎಲ್ಲವೂ ಕಾನೂನಿನ ಪ್ರಕಾರ ನಡೆಯಲು ಮುಂದಾಗುತ್ತಿರುವ ಕಾರಣಕ್ಕೆ ಅವಾಂತರಗಳು ನಡೆಯುತ್ತಿವೆ. ಸಂಬಂಧಗಳು ಸಹ ವ್ಯವಹಾರಿಕವಾಗುತ್ತಿರುವುದು ಸ್ವಸ್ಥ ಸಮಾಜದ ಲಕ್ಷಣವಲ್ಲ. ಒಡಹುಟ್ಟಿನ ಸಂಬಂಧ ಕಡಿದು ಹೋದರು ಪರವಾಗಿಲ್ಲ, ತನ್ನ ಪಾಲು ತನಗೆ ಬರಬೇಕು, ತನ್ನ ಪಾಡಿಗೆ ತಾನು ಬದುಕಬೇಕು ಎಂಬ ಸ್ವಾರ್ಥ ಹೆಚ್ಚಾದ ಕಾರಣಕ್ಕೆ ಇಂದು ಸ್ವಾರ್ಥದ ಮಹಲುಗಳನ್ನು ಕಟ್ಟಿ, ಸಂಬಂಧಗಳಿಗೆ ಸಮಾಧಿಗಳನ್ನು ಕಟ್ಟಲಾಗುತ್ತಿದೆ.

ಇಂದು ಎಲ್ಲದರಲ್ಲೂ, ಎಲ್ಲರಲ್ಲೂ ನನಗೇನು ಲಾಭ ಎಂಬ ವ್ಯವಹಾರಿಕ ಮನೋಭಾವ ಹೆಚ್ಚಾದ ಕಾರಣ ಸಂಬಂಧಗಳು ಅರ್ಥ, ವ್ಯಾಪ್ತಿ, ವ್ಯಾಲಿಡಿಟಿಯನ್ನೇ ಕಳೆದುಕೊಳ್ಳುತ್ತಿವೆ. ಐಷಾರಾಮದ ಬದುಕು, ತೋರಿಕೆಯ ಬದುಕು ಅತಿಯಾದ ಕಾರಣಕ್ಕೆ ನಾಚಿಕೆ ಬಿಟ್ಟು ತಮ್ಮ ಪಾಲು ಕೊಟ್ಟುಬಿಡು ಎಂದು ಯಾವುದೇ ಮುಜುಗರವಿಲ್ಲದೆ ಕೇಳುವ ಮಂದಿ ಇದ್ದಾರೆ. ಇದರಲ್ಲಿ ಗಂಡಸರು, ಹೆಂಗಸರು ಎಂಬ ಭೇದಭಾವವಿಲ್ಲ. ಹಿರಿಯರು–ಕಿರಿಯರು ಎಂಬುದಿಲ್ಲ. ಎಲ್ಲರೂ ಸ್ವಾರ್ಥದ ಪರಾಕಾಷ್ಠೆಯಲ್ಲಿಯೆ ಬದುಕುತ್ತಿರುವವರೆ. ತಮ್ಮ ಒಡಹುಟ್ಟಿದವರಿಗೆ ಒಂದಿನಿತು ಸೋಲದೆ ತನಗೆ ಬರಬೇಕಾದ್ದನ್ನು ಪಡೆದು ಗೆಲುವಿನ ನಗೆ ಬೀರುತ್ತಾರೆ. ಸಂಬಂಧಗಳು ಸೋತರೂ, ಸಂಬಂಧಿಗಳು ಸತ್ತರೂ ಪರವಾಗಿಲ್ಲ, ತಮ್ಮ ಸ್ವಾರ್ಥ, ಹಠ ಗೆಲ್ಲಬೇಕು ಅಷ್ಟೆ, ತಾವು ಬದುಕಬೇಕು ಅಷ್ಟೆ.



> “ ಇಂದು ಎಲ್ಲದರಲ್ಲೂ, ಎಲ್ಲರಲ್ಲೂ ನನಗೇನು ಲಾಭ ಎಂಬ ವ್ಯವಹಾರಿಕ ಮನೋಭಾವ ಹೆಚ್ಚಾದ ಕಾರಣ ಸಂಬಂಧಗಳು ಅರ್ಥ, ವ್ಯಾಪ್ತಿ, ವ್ಯಾಲಿಡಿಟಿಯನ್ನೇ ಕಳೆದುಕೊಳ್ಳುತ್ತಿವೆ. ಐಷಾರಾಮದ ಬದುಕು, ತೋರಿಕೆ ಬದುಕು ಅತಿಯಾದ ಕಾರಣಕ್ಕೆ ನಾಚಿಕೆ ಬಿಟ್ಟು ತಮ್ಮ ಪಾಲು ಕೊಟ್ಟುಬಿಡು? ಎಂದು ಯಾವುದೇ ಮುಜುಗರವಿಲ್ಲದೆ ಕೇಳುವ ಮಂದಿ ಇದ್ದಾರೆ. ಇದರಲ್ಲಿ ಗಂಡಸರು, ಹೆಂಗಸರು ಎಂಬ ಭೇದಭಾವವಿಲ್ಲ. ಹಿರಿಯರು–ಕಿರಿಯರು ಎಂಬುದಿಲ್ಲ. ಎಲ್ಲರೂ ಸ್ವಾರ್ಥದ ಪರಾಕಾಷ್ಠೆಯಲ್ಲಿಯೆ ಬದುಕಿತ್ತಿರುವವರೆ. ತಮ್ಮ ಒಡಹುಟ್ಟಿದವರಿಗೆ ಒಂದಿನಿತು ಸೋಲದೆ ತನಗೆ ಬರಬೇಕಾದ್ದನ್ನು ಪಡೆದು ಗೆಲುವಿನ ನಗೆ ಬೀರುತ್ತಾರೆ. ಸಂಬಂಧಗಳು ಸೋತರೂ, ಸಂಬಂಧಿಗಳು ಸತ್ತರೂ ಪರವಾಗಿಲ್ಲ, ತಮ್ಮ ಸ್ವಾರ್ಥ, ಹಠ ಗೆಲ್ಲಬೇಕು ಅಷ್ಟೆ, ತಾವು ಬದುಕಬೇಕು ಅಷ್ಟೆ

ಹಿಂದೆ ಮದುವೆ ಮಾಡುವುದು ಸುಲಭವಾಗಿತ್ತು, ಆದರೆ ವಿಚ್ಛೇದನ ಪಡೆಯುವುದು ಕಷ್ಟವಾಗಿತ್ತು. ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ಸಮಾಜ ಏನೆನ್ನುತ್ತದೆ ಎಂಬ ನೈತಿಕ ಭಯದಿಂದ ಗಂಡ ಹೆಂಡತಿ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿದ್ದರು. ಹಾಗೆಯೇ ಹಿಂದೆ ವಿವಾಹ ಸಂಬಂಧಗಳು ಏರ್ಪಾಡಾಗಲು ಮನೆತನ ಎಂಬುದು ಹೆಚ್ಚು ಮನ್ನಣೆ ಪಡೆಯುತ್ತಿತ್ತು. ಉತ್ತಮ ಮನೆತನದ ಹುಡುಗನಾಗಲಿ ಅಥವಾ ಹುಡುಗಿಯಾಗಲಿ ಸಂಸ್ಕಾರಯುತ ಕುಟುಂಬ ಎಂದು ಸಂಬಂಧ ಮಾಡಲು ಮನೆಯ ಹಿರಿಯರು ಮುಂದಾಗುತ್ತಿದ್ದರು. ಇಂದು ವಿವಾಹ ಸಂಬಂಧ ಏರ್ಪಾಡಾಗಲು ಮನೆತನಕ್ಕಿಂತ ಸಿರಿತನ ಹೆಚ್ಚು ಗಣನೆಗೆ ಬರುತ್ತದೆ. ಹುಡುಗ ಶಿಕ್ಷಣ ಪೂರೈಸಿ, ಕೈತುಂಬ ಸಂಬಳ ಬರುವ ಕೆಲಸಕ್ಕೆ ಹೋಗುತ್ತಿದ್ದರೂ, ಆರ್ಥಿಕ ಭದ್ರತೆ ಹೆಸರಿನಲ್ಲಿ ಹುಡುಗನ ಹೆಸರಿನಲ್ಲಿ ಸೈಟು, ಮನೆ ಇದೆಯೇ? ಊರಿನಲ್ಲಿ ಜಮೀನು ಇದೆಯೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಇಬ್ಬರು ಮೂವರು ಮಕ್ಕಳಿದ್ದರೆ ಆಸ್ತಿ ಹಂಚಿಕೆಯಾಗುತ್ತದೆ ಎಂಬ ಕಾರಣಕ್ಕೆ ಒಂದೇ ಹುಡುಗಿ ಇರುವ ಅಥವಾ ಒಬ್ಬನೇ ಹುಡುಗನಿರುವ ಮನೆಯ ಸಂಬಂಧ ಮಾಡಲು ಆಸಕ್ತಿ ತೋರುತ್ತಾರೆ. ಹುಡುಗಿಯು ಹುಡುಗನೊಂದಿಗೆ ಮಾತುಕತೆ ಆದ ಮೇಲೆಯೇ ವಿವಾಹಕ್ಕೆ ಒಪ್ಪಿಗೆ ಸೂಚಿಸಲಾಗುತ್ತದೆ. ವಿವಾಹಪೂರ್ವದಲ್ಲಿಯೇ ತಮ್ಮ ಕುಟುಂಬದ ಭವಿಷ್ಯದ ಬಗ್ಗೆ ಚರ್ಚಿಸುವುದು ಒಂದೊಳ್ಳೆ ಸಂಪ್ರದಾಯ ಎನ್ನಬಹುದು. ಪರಸ್ಪರ ತಮ್ಮ ಅಭಿರುಚಿ, ಆಸಕ್ತಿ, ಕನಸುಗಳ ಕುರಿತು ಒಂದು ಸ್ಪಷ್ಟತೆ ಇರುವುದು ಒಳ್ಳೆಯದೆ.

ಹೃದಯವಂತಿಕೆಗಿಂತ ಬುದ್ಧಿವಂತಿಕೆಗೆ ಇಂದು ಹೆಚ್ಚು ಮನ್ನಣೆ ದೊರಕುತ್ತಿರುವುದು ವಿಪರ್ಯಾಸ. ಶಿಕ್ಷಣ ಹಾಗೂ ಹಣ ಎಷ್ಟೇ ಇದ್ದರೂ ಸಂಬಂಧಗಳು ಬಹುಕಾಲ ಉಳಿಯುತ್ತವೆ ಎಂಬ ಗ್ಯಾರೆಂಟಿ ಇಲ್ಲ. ಎಷ್ಟೋ ಸಂಬಂಧಗಳು ವಿವಾಹವಾದ ಒಂದು ವರ್ಷವೂ ಉಳಿಯದೇ ಇರುವುದು ದುರಂತ. ಹಿಂದೆ ಮದುವೆಯಾದ ಒಂದು ವರ್ಷಕ್ಕೆ ಏನು ಗುಡ್ ನ್ಯೂಸ್ ಇಲ್ಲವೇ ಎಂದು ಹೊಸ ಬಾಳಿಗೆ ಅಡಿ ಇಟ್ಟ ಜೋಡಿಯ ತಾಯಿತಂದೆಯರನ್ನು ಸಂಬಂಧಿಕರು ಕೇಳುತ್ತಿದ್ದರು, ಈ ಕಾಲಘಟ್ಟದಲ್ಲಿ ಒಂದು ಮದುವೆಯಾಗಿ ಒಂದು ವರ್ಷವಾದ ಮೇಲೆ ಏನು ಬ್ಯಾಡ್ ನ್ಯೂಸ್ ಇಲ್ಲವೇ (ಅಂದರೆ ಡೈವೋರ್ಸ್ ಆಗುವ ಸಂಭವ) ಎಂದು ಕೇಳುವಂತಾಗಿದೆ. ಮಗು ವಾದ ಮೇಲೆ ವಿಚ್ಛೇದನ ಸಮಸ್ಯೆಯಾಗುತ್ತದೆ ಎಂಬ ಕಾರಣಕ್ಕೆ ಕೆಲವು ವರ್ಷಗಳ ಕಾಲ ಮಕ್ಕಳನ್ನು ಮಾಡಿಕೊಳ್ಳದೇ ಇರುವುದನ್ನು ಕಾಣಬಹುದು. ಸಂಬಂಧಗಳು ಸಹ ಇದರಿಂದ ಹೊರತಾಗಿಲ್ಲ. ಶಿಕ್ಷಿತ ಸಮಾಜದಲ್ಲಿ ನಡೆಯುತ್ತಿರುವ ಬೆಳವಣಿಗೆ ಎಂಥವರನ್ನು ಬೆಚ್ಚಿಬೀಳಿಸುತ್ತಿದೆ. ಬೆಂಗಳೂರಿನಲ್ಲಿ ನೆಲೆಸಿರುವ ಸ್ನೇಹಿತರೊಬ್ಬರು ಬೆಂಗಳೂರಿನಲ್ಲಿ ಮದುವೆ ಒಪ್ಪಂದಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಹೇಳಿ ದಾಗ ಕೇಳಿದವರೆಲ್ಲಾ ಹುಬ್ಬೇರಿಸಿದರು, ಹೀಗೂ ಉಂಟೇ ಎಂದು ಆಶ್ಚರ್ಯಪಟ್ಟರು. ವ್ಯಾಪಾರ, ವ್ಯವಹಾರಗಳಲ್ಲಿ ಲಿಖಿತ ಒಡಂಬಡಿಕೆ ಇರುವುದು ವಾಡಿಕೆ. ಆದರೆ ಮದುವೆ ಎಂಬ ಪವಿತ್ರ ಕಾರ್ಯಕ್ಕೂ ಲಿಖಿತ ಒಪ್ಪಂದ ಏರ್ಪಡುತ್ತಿರುವುದು ನಾಗರಿಕ ಪ್ರಪಂಚ ತಲೆತಗ್ಗಿಸಬೇಕಾದ ಸಂಗತಿ.

ವಿವಾಹ ಒಪ್ಪಂದ ಏರ್ಪಡುವ ಸಂದರ್ಭದಲ್ಲಿಯೇ ಭವಿಷ್ಯದಲ್ಲಿ ಅಕಸ್ಮಾತ್ ವಿವಾಹ ವಿಚ್ಛೇದನ ಏರ್ಪಟ್ಟಲ್ಲಿ ಹುಡುಗಿ ಮನೆಯವರು ಹುಡುಗನ ಮನೆಯವರಿಂದ ಪರಿಹಾರದ ರೂಪದಲ್ಲಿ ಏನನ್ನು ಕೇಳಬೇಕು, ಏನನ್ನು ಕೇಳಬಾರದು ಎಂಬ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಒಪ್ಪಂದ ಪತ್ರಕ್ಕೆ ಪರಸ್ಪರ ಸಹಿ ಹಾಕುವ ಹೊಸ ಸಂಪ್ರದಾಯ ಶುರುವಾಗಿರುವುದು ನಾಗರಿಕ ಪ್ರಪಂಚದ ವಿಡಂಭನೆ ಎನ್ನಬಹುದು. ಒಪ್ಪಂದ ಶಾಸ್ತ್ರ ಎಂಬ ಶುಭ ಕಾರ್ಯದಂದೇ ವಿಚ್ಛೇದನದ ಕುರಿತಾಗಿಯೂ ಒಪ್ಪಂದ ಏರ್ಪಡುತ್ತದೆ ಎಂದರೆ ಸಂಬಂಧಗಳಿಗೆ ಅರ್ಥವೇ ಇಲ್ಲ ಎನಿಸುತ್ತದೆ. ಇಂತಹ ಹೊಸ ವ್ಯವಸ್ಥೆಗಳು ಜಾರಿಗೆ ಬರಲು ಅನೇಕ ಕಾರಣಗಳಿರುತ್ತವೆ. ಎಷ್ಟೋ ಸಂಬಂಧಗಳು ಹಳಸಿದ ಮೇಲೆ ವಿಚ್ಛೇದನದ ಹೆಸರಿನಲ್ಲಿ ಕೋಟಿ ಕೋಟಿ ಪರಿಹಾರ ಕೋರುವುದು, ಆಸ್ತಿಯಲ್ಲಿ ಪಾಲು ಕೇಳುವುದು ಸಾಮಾನ್ಯವಾಗಿಬಿಟ್ಟಿದೆ. ಹೆಣ್ಣು ಹೆತ್ತ ಕೆಲವು ಹಿರಿಯರೇ ತಮ್ಮ ಆಣತಿಯಂತೆ ನಡೆಯದ ಅಳಿಯನಿಂದ ಮಗಳಿಗೆ ತರಾತುರಿಯಲ್ಲಿ ವಿಚ್ಛೇದನ ಕೊಡಿಸಲು ಮುಂದಾಗುತ್ತಾರೆ. ಮಗಳಿಗೆ ತುಸು ತೊಂದರೆಯಾದರೂ ಅದನ್ನೇ ದೊಡ್ಡದಾಗಿ ಬಿಂಬಿಸಿ ದೊಡ್ಡ ದೂರಿನ ಪಟ್ಟಿಯನ್ನೇ ನೀಡುತ್ತಾರೆ. ಮಗಳ ಮೇಲಿನ ಮಮತೆಯಿಂದ ವರದಕ್ಷಿಣೆ ಕಿರುಕುಳದ ಕೇಸ್ ದಾಖಲಿಸಿ ಬೀಗರ ಮನೆಯವರನ್ನು ಹೈರಾಣ ಮಾಡುತ್ತಾರೆ. ಇದರಲ್ಲಿ ಅನೇಕ ಹುಡುಗನ ಮನೆಯವರ ಕಡೆಯವರದ್ದು ಸಹ ತಪ್ಪುಗಳು ಇರುತ್ತವೆ, ಅದನ್ನೂ ಸಹ ಅಲ್ಲಗಳೆಯುವಂತಿಲ್ಲ. ಸೊಸೆ ತಮ್ಮ ಮಾತು ಕೇಳಲಿಲ್ಲ ಎಂಬ ಕಾರಣಕ್ಕೆ ಸಾಫ್ಟ್ ಆಗಿ ಶೋಷಣೆ ಮಾಡಲು ಪ್ರಾರಂಭಿಸಿರುತ್ತಾರೆ. ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬಹುದಾದ ಸಣ್ಣ ಕಾರಣಗಳಿಗೆ ಕೋರ್ಟಿಗೆ ಅಲೆದು ಬಗೆಹರಿಸಿಕೊಳ್ಳಲು ಪ್ರಯತ್ನಿಸುವುದು ದುರದೃಷ್ಟಕರ.

ಎಲ್ಲರ ಬಳಿ ಹಣ, ಅಂತಸ್ತು ಎಲ್ಲವೂ ಇದ್ದು, ಸ್ವಾರ್ಥದಿಂದ ದೊಡ್ಡ ದೊಡ್ಡ ಸೌಧಗಳನ್ನೇ ನಿರ್ಮಿಸಿರುತ್ತಾರೆ. ಆದರೆ ಅದೇ ಸಮಯದಲ್ಲಿ ಪವಿತ್ರವಾದ ಸಂಬಂಧಗಳಿಗೆ ಸಮಾಧಿಯನ್ನು ಕಟ್ಟುತ್ತಿದ್ದಾರೆ. ಕೇವಲ ಗಂಡ ಹೆಂಡತಿಯ ಬದುಕಿಗೆ ಮಾತ್ರ ಹೇಳುತ್ತಿಲ್ಲ, ಒಡಹುಟ್ಟಿದವರು, ಹೆತ್ತವರೊಂದಿಗೂ ಉತ್ತಮ ಬಾಂಧವ್ಯವನ್ನು ವೃದ್ಧಿಸಿಕೊಳ್ಳದೇ, ಸ್ವಾರ್ಥ ಮನೋಭಾವದಿಂದಲೇ ಚಿಂತಿಸಿ, ಜಾಣ್ಮೆಯಿಂದ ಆರೋಗ್ಯಕರ ಅಂತರ ಕಾಪಾಡಿಕೊಳ್ಳುತ್ತಿರುವುದು ವಿಪರ್ಯಾಸದ ಸಂಗತಿ. ಜೀವನ ಎಂದರೆ ಕೆಲವರು ಸಿನೆಮಾ–ಧಾರಾವಾಹಿಗಳ ಕಥೆಗಳೆಂದು ಭಾವಿಸಿದಂತಿದೆ. ಸಿನೆಮಾ ಕಥೆಗಳು ಮೂರು ಗಂಟೆಗಳಲ್ಲಿ ಮುಗಿದರೆ, ಧಾರಾವಾಹಿಯ ಕಥೆಗಳು ಕೆಲವು ದಿನಗಳ ಎಪಿಸೋಡ್‌ಗಳ ನಂತರ ಮುಗಿಯುತ್ತವೆ. ಆದರೆ ಬದುಕು ಕೆಲವು ದಿನಗಳಲ್ಲಿ ಮುಗಿಯುವ ಕಥೆಯಲ್ಲ, ಅದು ವಾಸ್ತವ. ಹೊಂದಾಣಿಕೆಯೇ ನಿಜವಾದ ಪರಿಹಾರ.

ಪ್ರತಿಷ್ಠೆಯ ಪರಮಾವಧಿಯಿಂದ ಇಂದು ಸಂಬಂಧಗಳು ನಲುಗುತ್ತಿವೆ. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎನ್ನುವಂತೆ ಇಂದು ಹತ್ತಾರು ವರ್ಷಗಳ ಸಂಬಂಧಕ್ಕೆ ಯಾವುದೋ ಒಂದು ತಪ್ಪು ಗ್ರಹಿಕೆಯಿಂದ ತಿಲಾಂಜಲಿ ಹೇಳಿಬಿಡುವುದು ಸಾಮಾನ್ಯವಾಗಿದೆ. ಹಿಂದೆ ಸಂಬಂಧಗಳನ್ನು ಉಳಿಸಿಕೊಳ್ಳಲು ಯಾವುದೇ ತ್ಯಾಗ ಮಾಡಲು ಸಿದ್ಧವಾಗಿರುತ್ತಿದ್ದರು, ಇಂದು ಪ್ರತಿಷ್ಠೆಗೋಸ್ಕರ ಸಂಬಂಧಗಳಿಂದ ಕಳಚಿಕೊಳ್ಳಲು ಯಾವುದೇ ತ್ಯಾಗಕ್ಕೂ ಬೇಕಾದರೂ ಸಿದ್ಧರಾಗಿರುತ್ತಾರೆ.

ಯಾರಿಂದಲೂ ನಮಗೆ ಏನು ಆಗಬೇಕಿಲ್ಲ ಎಂಬ ಮಾತು ಅತಿಯಾಗಿ ಕೇಳಿಬರುತ್ತಿದೆ. ಇದು ಹಣದ ಸಹಾಯಕ್ಕೆ ಮಾತ್ರ ಸೀಮಿತವಾಗಿ ಹೇಳುವ ಮಾತಾಗಿದೆ. ಮನುಷ್ಯ ಸಂಘಜೀವಿ. ಮನುಷ್ಯ ಸುಖ, ಶಾಂತಿ, ನೆಮ್ಮದಿ, ಸಾರ್ಥಕತೆಯಿಂದ ಬದುಕಬೇಕಾದರೆ ಸಂಬಂಧಗಳು ಮುಖ್ಯವಾಗುತ್ತದೆ. ಕಷ್ಟಸುಖಗಳಲ್ಲಿ ಭಾಗಿಯಾಗಲು ಸಂಬಂಧಿಕರ ಅಗತ್ಯವಿರುತ್ತದೆ. ಸಾವುನೋವಿಗೆ ಸ್ಪಂದಿಸುವವರು ಸಂಬಂಧಿಕರೆ. 'ಶರಣರ ಬಾಳನ್ನು ಮರಣದಲ್ಲಿ ಕಾಣು ಎಂಬ ಮಾತಿಗೆ ಇಂಬು ಕೊಡುವಂತೆ ಕೆಲವು ಸ್ವಾರ್ಥ ಶ್ರೀಮಂತರ ಮನೆಯಲ್ಲಿ ಯಾರಾದರೂ ನಿಧನ ಹೊಂದಿದಾಗ ಮೂರು ಮತ್ತೊಂದು ಜನ ಸೇರುವುದನ್ನು ಕಾಣಬಹುದು. ಹಣದಲ್ಲಿ ಶ್ರೀಮಂತಿಕೆ ಇರುವಷ್ಟೇ ಸಂಬಂಧದಲ್ಲೂ ಶ್ರೀಮಂತಿಕೆ ಕಂಡುಕೊಳ್ಳುವುದು ಮಾನವಧರ್ಮ ಆಗಬೇಕು.

ಹೂರಣ: ಪ್ರಜ್ಞಾವಂತರು ಸಂಬಂಧಗಳಿಗೆ ಸೌಧ ಕಟ್ಟಬೇಕು, ಸ್ವಾರ್ಥಕ್ಕೆ ಸಮಾಧಿ ಕಟ್ಟಬೇಕು !

ಆರೋಗ್ಯ ಸೇವೆಗೆ ಅನಾರೋಗ್ಯ...

ಮೈಸೂರು ಜಿಲ್ಲೆಯಲ್ಲಿ 37ರ ಪೈಕಿ ಕೇವಲ 9 ಆಂಬ್ಯುಲೆನ್ಸ್ ವಾಹನಗಳ ಸೇವೆ

ಮೈಸೂರು,ಸೆ.28(ಆರ್‌ಕೆ, ಬಿಸಿಟಿ)– ಕರ್ನಾಟಕದ ಬಡ ಮತ್ತು ಗ್ರಾಮೀಣ ಸಮುದಾಯಗಳಿಗೆ ಒಂದು ಕಾಲದಲ್ಲಿ ಜೀವನಾಡಿಯಾಗಿದ್ದ 108 ಆರೋಗ್ಯ ಕವಚ ಆಂಬ್ಯುಲೆನ್ಸ್ ಸೇವೆಯು ಈಗ ಅಳಿವಿನ ಅಂಚಿನಲ್ಲಿದೆ. ರಾಜ್ಯ ಸರ್ಕಾರ ಹಾಗೂ ತುರ್ತು ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆ (ಇಎಂಆರ್‌ಐ) ನಡುವಿನ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮೂಲಕ 2008ರಲ್ಲಿ ಪ್ರಾರಂಭವಾದ ಈ ಸೇವೆಯು, ವ್ಯಕ್ತಿಯ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಲೆಕ್ಕಿಸದೆ ರಾಜ್ಯದ ಪ್ರತಿಯೊಂದು ಮೂಲೆಗೂ ಉಚಿತವಾಗಿ 24/7 ತುರ್ತು ವೈದ್ಯಕೀಯ ನೆರವು ನೀಡುವ ಉದ್ದೇಶ ಹೊಂದಿತ್ತು.

ಆರಂಭದಲ್ಲಿ ಕರ್ನಾಟಕಾದ್ಯಂತ ಈ ಯೋಜನೆಯಡಿ ಕಾರ್ಯನಿರ್ವಹಿಸಲು 1,900 ಆಂಬ್ಯುಲೆನ್ಸ್‌ಗಳನ್ನು ಮಂಜೂರು ಮಾಡಲಾಗಿತ್ತು. ಈ ವಾಹನಗಳನ್ನು ನಿರ್ವಹಿಸುವುದು, ರಿಪೇರಿ, ಚಾಲಕರು ಹಾಗೂ ಸಿಬ್ಬಂದಿ ವೇತನವನ್ನು ಪಾವತಿಸುವುದು ಮತ್ತು ತುರ್ತು ಕರೆ ಬಂದಾಗಲೆಲ್ಲಾ ತ್ವರಿತವಾಗಿ ಸ್ಪಂದಿಸಲು ಇಎಂಆರ್‌ಐಗೆ ಜವಾಬ್ದಾರಿ ವಹಿಸಲಾಗಿತ್ತು. ಆದಾಗ್ಯೂ ಕಳೆದ ಆರು ತಿಂಗಳಿಂದೀಚೆಗೆ ಸಂಸ್ಥೆಯು ವಾಹನಗಳ ರಿಪೇರಿ ಮಾಡಿಸದ ಕಾರಣ ಈ ಸೇವೆಯು ಕುಂಠಿತವಾಗಿದೆ.

ಪರಿಣಾಮ ಮೈಸೂರು ನಗರ ಸೇರಿದಂತೆ ಜಿಲ್ಲಾದ್ಯಂತ ಈಗ ಶೇ.60ಕ್ಕೂ ಹೆಚ್ಚು ಆಂಬ್ಯುಲೆನ್ಸ್‌ಗಳು ಗ್ಯಾರೇಜ್‌ಗಳು, ಸರ್ಕಾರಿ ಆಸ್ಪತ್ರೆಗಳ ಆವರಣಗಳಲ್ಲಿ ನಿಷ್ಕ್ರಿಯವಾಗಿ ನಿಂತಿವೆ. ಕಳಪೆ ನಿರ್ವಹಣೆ ಮತ್ತು ಬೇಜವಾಬ್ದಾರಿತನದಿಂದಾಗಿ ಜನಸಾಮಾನ್ಯರು ಹಾಗೂ ಬಡವರ ಸೇವೆಗೆ ಜೀವನಾಡಿಯಾಗಬೇಕಾಗಿದ್ದ ಆಂಬ್ಯುಲೆನ್ಸ್‌ಗಳು ಕಾರ್ಯ ಸ್ಥಗಿತಗೊಂಡಿವೆ. ಅದರಿಂದಾಗಿ ಮೈಸೂರು ಜಿಲ್ಲೆಯಲ್ಲಿ ಆರೋಗ್ಯ ಸೇವೆ ಆತಂಕಕಾರಿಯಾಗಿದೆ. ಜಿಲ್ಲೆಗೆ 37 ಆಂಬ್ಯುಲೆನ್ಸ್‌ಗಳನ್ನು ಹಂಚಿಕೆ ಮಾಡಲಾಗಿತ್ತಾದರೂ ಪ್ರಸ್ತುತ 9 ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಉಳಿದ ವಾಹನಗಳು ಕೆಟ್ಟು ನಿಂತಿವೆ, ಕೆಲವು ಬಿಡಿ ಭಾಗಗಳಿಗಾಗಿ ಕಾಯುತ್ತಿದ್ದರೆ, ಮತ್ತೆ ಕೆಲವು ದುರಸ್ತಿ ಮಾಡಲಾಗದ ಸ್ಥಿತಿಗೆ ತಲುಪಿವೆ. ಇದರಿಂದಾಗಿ ಕಳೆದ ನಾಲ್ಕೈದು ತಿಂಗಳುಗಳಿಂದ ತುರ್ತು ವೈದ್ಯಕೀಯ ಸೇವೆ ಕುಂಠಿತಗೊಂಡಿದೆ. ಗ್ರಾಮೀಣ ಭಾಗದ ಮತ್ತು ಕಡಿಮೆ ಆದಾಯದ ಸಮುದಾಯಗಳು ತುರ್ತು ಆರೋಗ್ಯ ಸಮಸ್ಯೆಯ ಸಂದರ್ಭಗಳಲ್ಲಿ ಸಕಾಲಿಕ ಸಹಾಯವಿಲ್ಲದೆ ಪರದಾಡುವಂತಾಗಿದೆ.




108 ತುರ್ತು ಸೇವೆ ಆಂಬ್ಯುಲೆನ್ಸ್‌ಗಳು ದೂರದ ಗ್ರಾಮೀಣ ಪ್ರದೇಶಗಳಿಗೂ ನಿಯಮಿತವಾಗಿ ಪ್ರತಿಕ್ರಿಯಿಸಿ, ರೋಗಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಅಥವಾ ಅಗತ್ಯವಿದ್ದಾಗ, ಸುಧಾರಿತ ಚಿಕಿತ್ಸೆಗಾಗಿ ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಿಗೆ ಕರೆದೊಯ್ಯುತ್ತವೆ. ಬಹುತೇಕ ವಾಹನಗಳು ಈಗ ಸೇವೆಯಿಂದ ಹೊರಗುಳಿದಿರುವುದರಿಂದ, ಖಾಸಗಿ ಆಂಬ್ಯುಲೆನ್ಸ್ ನಿರ್ವಾಹಕರು ಈ ಅವಕಾಶವನ್ನು ಬಳಸಿಕೊಂಡು, ಸಾರ್ವಜನಿಕರಿಂದ ಹೆಚ್ಚಿನ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಈ ಖಾಸಗಿ ಆಂಬ್ಯುಲೆನ್ಸ್‌ಗಳು ಕೆ.ಆರ್.ಆಸ್ಪತ್ರೆ, ಶವಾಗಾರದ ಆವರಣ, ಕೆಲವು ಆಸ್ಪತ್ರೆಗಳ ಬಳಿ ನಿಂತಿದ್ದು 108 ಆಂಬ್ಯುಲೆನ್ಸ್ ಕೊರತೆಯನ್ನು ಬಳಸಿಕೊಂಡು ಅದರ ಚಾಲಕರು ರೋಗಿಗಳಿಂದ ದುಬಾರಿ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಇದರಿಂದ ಬಡ ಕುಟುಂಬಗಳ ಪರಿಸ್ಥಿತಿ ಹೇಳತೀರದಾಗಿದೆ. 108 ಆರೋಗ್ಯ ಕವಚ ಆಂಬ್ಯುಲೆನ್ಸ್ ಸೇವೆಯನ್ನು ಕರ್ನಾಟಕದಲ್ಲಿ 2008ರ ನವೆಂಬರ್ 1, ರಂದು ಅಂದಿನ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಆರಂಭಿಸಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಶ್ರದ್ಧಾಂಜಲಿಗೂ ತಿಲಾಂಜಲಿ: 108 ಆಂಬ್ಯುಲೆನ್ಸ್ ಸಮಸ್ಯೆ ಜೊತೆಗೆ ಇದೀಗ ಮೈಸೂರಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೃತಪಟ್ಟವ್ಯಕ್ತಿಗಳ ದೇಹಗಳನ್ನು ಅವರ ಸ್ವಂತ ಗ್ರಾಮಗಳಿಗೆ ಉಚಿತವಾಗಿ ಸಾಗಿಸಲು ಪ್ರಾರಂಭಿಸಿದ ಶ್ರದ್ಧಾಂಜಲಿ ವಾಹನಕ್ಕೂ ಇದೀಗ ಗರ ಬಡಿದಿದೆ. ಈ ವಾಹನವು ಕಳೆದ ಹಲವು ತಿಂಗಳಿಂದ ರಿಪೇರಿಗಾಗಿ ಗ್ಯಾರೇಜ್‌ನಲ್ಲಿ ನಿಂತಿರುವುದರಿಂದ ದುಃಖಿತ ಕುಟುಂಬಗಳು ಮೃತದೇಹಗಳನ್ನು ಸಾಗಿಸಲು ಖಾಸಗಿ ಚಾಲಕರಿಗೆ ಸಾವಿರಾರು ರೂಪಾಯಿಗಳನ್ನು ಪಾವತಿಸಬೇಕಾಗಿದೆ. ವಿಪರ್ಯಾಸವೆಂದರೆ, ಮೃತದೇಹವನ್ನು ಸ್ಥಳಾಂತರಿಸುವುದು ಈಗ ಗ್ರಾಮೀಣ ಭಾಗಗಳಿಂದ ರೋಗಿಯನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸುವುದಕ್ಕಿಂತಲೂ ಹೆಚ್ಚು ದುಬಾರಿಯಾಗಿದೆ.

ಆಂಬ್ಯುಲೆನ್ಸ್‌ಗಳ ರಿಪೇರಿ ಈಗ ಆರೋಗ್ಯ ಇಲಾಖೆ ಹೆಗಲಿಗೆ

ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ

ಮೈಸೂರು, ಸೆ.28 (ಆರ್‌ಕೆ,ಬಿಸಿಟಿ)– ಆಂಬ್ಯುಲೆನ್ಸ್



ಡಾ.ಕುಮಾರಸ್ವಾಮಿ

ಕೊರತೆ ಕುರಿತಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, 108 ಆರೋಗ್ಯ ಕವಚ ಆಂಬ್ಯುಲೆನ್ಸ್ ಸೇವೆಯನ್ನು ಆರೋಗ್ಯ ಇಲಾಖೆ ನೇರ ನಿರ್ವಹಣೆಗೆ ಒಳಪಡಿಸುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಅನುಮೋದಿಸಿದ್ದು, ಈ ಸಂಬಂಧ ಜೂನ್ 12ರಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಇದು ಖಾಸಗಿ ನಿರ್ವಾಹಕರ ಮೇಲಿನ ಅವಲಂಬನೆಯನ್ನು ನಿಯಂತ್ರಿಸಲಿದೆ ಎಂದು ಹೇಳಿದರು.

ಮೈಸೂರಿನಲ್ಲಿರುವ 108 ಆಂಬ್ಯುಲೆನ್ಸ್‌ಗಳಲ್ಲಿ ಹೆಚ್ಚಿನವು ಪ್ರಸ್ತುತ ಸೇವೆಯಲ್ಲಿಲ್ಲ. ಹುಣಸೂರು ರಸ್ತೆಯಲ್ಲಿರುವ ಶೋ ರೂಂ ಒಂದರಲ್ಲಿ ದುರಸ್ತಿಗಾಗಿ ನಾವು ಈಗಾಗಲೇ 16 ವಾಹನಗಳನ್ನು ಕಳುಹಿಸಿದ್ದೇವೆ. ಅವುಗಳನ್ನು ತಕ್ಷಣ ರಿಪೇರಿ ಮಾಡಿಸಿ ರೋಗಿಗಳ ಸೇವೆಗೆ ಬಳಸಿಕೊಳ್ಳಲಾಗುವುದು. ಅದಕ್ಕೆ ತಗಲುವ ವೆಚ್ಚ ಭರಿಸಲಾಗುವುದೆಂದು ಸರ್ಕಾರ ಭರವಸೆ ನೀಡಿರುವುದರಿಂದ ಮುಂದೆ ಈ ಸಮಸ್ಯೆ ಬರದಂತೆ ಕ್ರಮ ವಹಿಸುತ್ತೇವೆ ಎಂದು ಡಿಹೆಚ್‌ಓ ಡಾ.ಕುಮಾರಸ್ವಾಮಿ ತಿಳಿಸಿದರು.

ಆಂಬ್ಯುಲೆನ್ಸ್‌ಗಳು ರಿಪೇರಿಯಲ್ಲಿದ್ದ ಕಾರಣ ಇಲಾಖೆಯ ಎರಡು ರಕ್ತ ನಿಧಿ ವಾಹನಗಳನ್ನು ಹಾಗೂ ಖಾಸಗಿಯವರಿಂದ ಕೆಲವು ವಾಹನಗಳನ್ನು ಬಾಡಿಗೆಗೆ ಪಡೆದು ರೋಗಿಗಳನ್ನು ಕರೆದೊಯ್ಯಲು ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದ್ದೆವು. ಆದಾಗ್ಯೂ ಕೆಲವೆಡೆ ಗ್ರಾಮಾಂತರ ಪ್ರದೇಶಗಳಲ್ಲಿ ಸಕಾಲಿಕ ಸೇವೆ ಲಭ್ಯವಾಗುತ್ತಿಲ್ಲವೆಂಬುದು ನಮ್ಮ ಗಮನಕ್ಕೆ ಬಂದಿರುವುದರಿಂದ ಮುಂದೆ ಯಾವುದೇ ತೊಂದರೆಯಾಗದಂತೆ ಎಚ್ಚರವಹಿಸುತ್ತೇವೆ ಎಂದು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾವಾ ಕಲಾ ಜಾತ್ರೆಯಲ್ಲಿ ಬಣ್ಣದ ಚಿತ್ರಲೋಕ ಅನಾವರಣ



ಕಾವಾ ಕಾಲೇಜು ಆವರಣದಲ್ಲಿ ಮೊದಲ ಬಾರಿಗೆ ಆಯೋಜಿಸಿದ್ದ 'ಕಲಾ ಜಾತ್ರೆ'ಯನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು.

ಮೈಸೂರು, ಸೆ.28(ಎಂಕೆ)– ಕಲಾವಿದನ ಕಲ್ಪನೆಗೆ ಬಣ್ಣದ ರಂಗು... ಕುಂಚದಲ್ಲಿ ಅರಳಿದ ಇತಿಹಾಸ, ಸಂಸ್ಕೃತಿ, ಗ್ರಾಮೀಣ ಸೊಗಡು, ಪ್ರಕೃತಿ ಸೊಬಗಿನ ಕಲಾಲೋಕ...!

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕಾವಾ(ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು) ಕಾಲೇಜು ಆವರಣದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ವತಿಯಿಂದ ಮೊಟ್ಟ ಮೊದಲ ಬಾರಿಗೆ ಆಯೋಜಿಸಿದ್ದ 'ಕಲಾ ಜಾತ್ರೆ'ಯಲ್ಲಿ ಬಣ್ಣದ ಚಿತ್ರಲೋಕವನ್ನೇ ಅನಾವರಣಗೊಳಿಸಲಾಗಿತ್ತು.

ಸುಮಾರು 85 ಮಳಿಗೆಗಳ 'ಕಲಾ ಜಾತ್ರೆ'ಯಲ್ಲಿ ಕಾವಿ ಕಲೆ, ಕಿನ್ನಾಳ ಮತ್ತು ಮಧುಬನಿ ಚಿತ್ರಕಲೆ, ಚಾರ್ಕೋಲ್ ಪೆನ್ಸಿಲ್ ಡ್ರಾಯಿಂಗ್ ಮತ್ತು ಸ್ಕೆಚಿಂಗ್, ಸ್ಪರ್ಶ ಅಥವಾ ದೃಷ್ಟಿಗೋಚರವಾಗಿ ಸಂವೇದನೆ ಉಂಟು ಮಾಡುವ ಟೆಕ್ಸ್ಚರ್ ಆರ್ಟ್, ಅಮಿಗುರುಮಿ ಚಿತ್ರಕಲೆ, ಹವ್ಯಾಸಿ ಚಿತ್ರಕಲಾವಿದರಿಂದ ಮೂಡಿದ ವಾಟರ್ ಪೇಟಿಂಗ್ ಚಿತ್ರಪಟಗಳು, ಅಕ್ರಿಲಿಕ್ ಚಿತ್ರಕಲೆ, ಲಿಪನ್ ಆರ್ಟ್, ಜಾನಪದ ಚಿತ್ರಕಲೆ, ಮನಮೋಹಕ ಕಲಾಕೃತಿಗಳು ಕಣ್ಮನ ಸೆಳೆದವು.

ಒಣ ಎಲೆ ಮತ್ತು ಹೂವಿನಿಂದ ರಚಿಸಿರುವ ಚಿತ್ರಕಲೆ, ಮನುಷ್ಯ ತನ್ನ ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಕುರಿತು ಚಿತ್ರಿಸಿರುವ ಕಲಾಕೃತಿಗಳು, ಮಕ್ಕಳ ಕ್ಯಾನ್ವಾಸ್ ಚಿತ್ರ, ಪೋಟ್ರೇಟ್ ಚಿತ್ರಗಳು, ಮಕ್ಕಳ ಆಟಿಕೆಗಳು, ಕೈಯಿಂದಲೇ ತಯಾರಿಸಿದ ಬೊಂಬೆಗಳು, ಪಿಂಗಾಣಿ ಪದಾರ್ಥಗಳು, ಮರದಿಂದ ವಿನ್ಯಾಸಗೊಳಿಸಿದ ಕಲಾಕೃತಿಗಳು ಜೊತೆಗೆ ಸ್ಥಳದಲ್ಲಿಯೇ ನಾನಾ ಚಿತ್ರಗಳನ್ನು ಚಿತ್ರಿಸಿದ ಪಟಾಣಿಗಳು, ಯುವಕ–ಯುವತಿಯರು ಕಲಾ ಲೋಕದಲ್ಲಿ ವಿಹರಿಸಿದರು. ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬರು ತಲೆ ಮೇಲೆ ಬುಟ್ಟಿ ಹೊತ್ತಿದ್ದ ಮಾದರಿಯಲ್ಲಿದ್ದ ಬೊಂಬೆಯ ಬುಟ್ಟಿಯೊಳಗಿನಿಂದ ಮಕ್ಕಳ ಆಟಿಕೆಗಳನ್ನು ವಿತರಿಸುವ ಮೂಲಕ ಶಾಸಕ ತನ್ವೀರ್ ಸೇಠ್, 'ಕಲಾ ಜಾತ್ರೆ'ಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಯಂತ್ರೋಪಕರಣಗಳ ಅತಿಯಾದ ಬಳಕೆಯಿಂದ ನಮ್ಮಲ್ಲಿರುವ ಅನೇಕ ಕಲೆ, ಸಂಸ್ಕೃತಿಗಳು ನಾಶಗೊಳ್ಳುತ್ತಿದೆ. ಮಕ್ಕಳು ಆಟೋಟ, ವ್ಯಾಯಾಮದಂತಹ ದೈಹಿಕ ಚಟುವಟಿಕೆಗಳಿಂದ ವಂಚಿತರಾಗಿದ್ದು, ಮೊಬೈಲ್‌ನಲ್ಲಿ ಮುಳುಗಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಲೆಯ ಅರಿವು ಮೂಡಿಸಿ: ಕಲೆ ಮೇಲೆ ಅಭಿಮಾನವಿದ್ದಾಗ ಮಾತ್ರ ಸಮಾಜದಲ್ಲಿ ಬದುಕಲು ಸಾಧ್ಯ. ನಿಜವಾದ ಕಲೆ ಮತ್ತು ಸಂಸ್ಕೃತಿ ಜೀವನದ ಕಷ್ಟ ಸುಖ ಮತ್ತು ಬದುಕಿನ ಏಳು ಬೀಳುಗಳನ್ನು ತಿಳಿಸಿಕೊಡುವುದರೊಂದಿಗೆ ಸರಿಪಡಿಸಿಕೊಳ್ಳಲು ಅವಕಾಶ ನೀಡಲಿದೆ. ಆದ್ದರಿಂದ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಕಲೆಯ ಅರಿವನ್ನು ಮೂಡಿಸಿ ಎಂದರು.

ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಪ್ರಾದೇಶಿಕ ನಿರ್ದೇಶಕ ಪ್ರೊ.ಡಿ.ಮಹೇಂದ್ರ, ಮುಂಬೈನ ಅಂತಾರಾಷ್ಟ್ರೀಯ ಅನಿಮೇಷನ್ ಕಲಾವಿದ ವೈಭವ್ ಕುಮರೇಶ್, ಶಿಲ್ಪಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ವೆಂಕಟಾಚಲಪತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಎಂ.ಸಿ.ರಮೇಶ್, ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಉಪ ವಿಶೇಷಾಧಿಕಾರಿ ಎ.ದೇವರಾಜು, ಕಾರ್ಯಾಧ್ಯಕ್ಷರಾದ ನಿರ್ಮಲಾ ಎಸ್.ಮಠಪತಿ, ಸಮಿತಿ ಉಪಾಧ್ಯಕ್ಷರಾದ ಭಾಸ್ಕರ್, ರಾಜೇಶ್, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಮಂಜು ಪ್ರಸಾದ್, ಕಾರ್ಯದರ್ಶಿ ಸೂರ್ಯ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಮನೋವೈದ್ಯರೂ ಆದ ಕಲಾವಿದೆ ಡಾ.ಮೇಘ ಸದಾಶಿವ್ ಚಿತ್ರಿಸಿರುವ ಆಕರ್ಷಕ 'ಚಾಮುಂಡೇಶ್ವರಿ' ಚಿತ್ರಪಟ.

ಬಹುಮಾನ ವಿತರಣೆ, ಅಭಿನಂದನೆ...

ಇದೇ ವೇಳೆ ರಾಷ್ಟ್ರೀಯ ಕರಕುಶಲ ವಸ್ತು, ಲಲಿತಕಲಾ ಪ್ರದರ್ಶನ ಹಾಗೂ ಸ್ಥಳದಲ್ಲೇ ಚಿತ್ರ ಬಿಡಿಸುವ ಮತ್ತು ಜೇಡಿ ಮಣ್ಣಿನ ಕಲಾಕೃತಿ ರಚನಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹಾಗೂ ಟೆರಾಕೋಟಾ ಭಿತ್ತಿ ಶಿಲ್ಪಕಲೆ ಅನಾವರಣಗೊಳಿಸಿದ ಕಲಾವಿದರಿಗೆ ಬಹುಮಾನ ವಿತರಿಸಿ, ಸ್ಮರಣಿಕೆ ನೀಡಿ ಅಭಿನಂದನೆ ಸಲ್ಲಿಸಲಾಯಿತು.



'ಕಲಾ ಜಾತ್ರೆ' ವೀಕ್ಷಣೆಗೆ ತಂಡೋಪ ತಂಡವಾಗಿ ಆಗಮಿಸಿದ ಕಲಾಭಿಮಾನಿಗಳು.

ಪುಸ್ತಕ ಮೇಳದಲ್ಲಿ ನಾಲ್ಕು ಕೃತಿಗಳ ಬಿಡುಗಡೆ



ದಸರಾ ಕನ್ನಡ ಪುಸ್ತಕ ಮೇಳದಲ್ಲಿ ಭಾನುವಾರ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಸೆ.28(ಎಂಕೆ)– ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಪುಸ್ತಕ ಮೇಳ ಉಪಸಮಿತಿ ವತಿಯಿಂದ ಆಯೋಜಿಸಿರುವ ದಸರಾ ಕನ್ನಡ ಪುಸ್ತಕ ಮೇಳದಲ್ಲಿ 4 ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಲೇಖಕರಾದ ಅಶೋಕ ಪಿ.ಮಣಿ ರಚಿತ 'ಅಮೃತ ಸಿಂಚನ', ಪ್ರಮೋದ ಕರಣಂ ರಚಿತ 'ಹುಟ್ಟು ಸಾವು ಎರಡರ ನಡುವೆ', ಜ್ಯೋತಿ ಬದಾಮಿ ರಚಿತ 'ಕುಂಬಳಕಾಯಿ ಕಳ್ಳ ಅಂದ್ರೆ...!', ಕೆ.ಎಲ್.ವಿನೋದ್ ರಚಿತ 'ತುಪಾಕಿಯ ಪಿಸುಮಾತು' ಕೃತಿ ಬಿಡುಗಡೆ ಮಾಡಲಾಯಿತು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅಧ್ಯಕ್ಷತೆ ವಹಿಸಿದ್ದರು. ಉಪಸಮಿತಿ ಸದಸ್ಯರಾದ ಕವಯತ್ರಿ ಸುಚಿತ್ರ ಹೆಗಡೆ, ರಾಜಶೇಖರ ಕದಂಬ, ಡಾ.ಸಿ.ಡಿ.ಪರಶುರಾಮ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಸಾಮಾಜಿಕ ಜಾಲತಾಣದಲ್ಲಿ ದಸರಾ ಆನೆಗಳ ಎಐ ವಿಡಿಯೋ ವೈರಲ್

ಅರಣ್ಯಾಧಿಕಾರಿಗಳು, ಮಾವುತರು, ಕಾವಾಡಿಗರ ಬೇಸರ

ಮೈಸೂರು,ಸೆ.28(ಎಂಟಿವೈ)–ಜಂಬೂಸವಾರಿಗೆ ಕೇವಲ ಮೂರು ದಿನವಷ್ಟೆ ಇರುವುದರಿಂದ ದಸರಾ ಗಜಪಡೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಕೆಲ ಎಐ ವಿಡಿಯೋಗಳು ವೈರಲ್ ಆಗುತ್ತಿರುವುದರಿಂದ ಗಜಪಡೆಯ ಮಾವುತರು, ಕಾವಾಡಿಗಳು ಹಾಗು ಅರಣ್ಯ ಇಲಾಖೆಯ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದ್ದು, ಗಜಪಡೆಯ ವಿರುದ್ಧದ ವಿಡಿಯೋಗಳಿಂದ ಆಗುವ ವಿವಾದ ಭವಿಷ್ಯದಲ್ಲಿ ಆನೆಗಳಿಲ್ಲದೆ ದಸರಾ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕಾಡಿನಿಂದ ನಾಡಿಗೆ ಕರೆತಂದು ಸತತ ಎರಡು ತಿಂಗಳು ಮೈಸೂರಲ್ಲಿ ವಿವಿಧ ಹಂತದ ತರಬೇತಿ ನೀಡಿ ಜಂಬೂಸವಾರಿಗೆ ಆನೆಗಳನ್ನು ಸಜ್ಜುಗೊಳಿಸಲು ಅರಣ್ಯ ಇಲಾಖೆ, ಮಾವುತರು, ಕಾವಾಡಿಗಳು ಸಾಕಷ್ಟು ಸವಾಲು ಎದುರಿಸಬೇಕಾಗುತ್ತದೆ. ಅರಣ್ಯ ಪ್ರದೇಶದ ವಾತಾವರಣಕ್ಕೆ ಹೊಂದಿಕೊಂಡಿರುವ ಆನೆಗಳನ್ನು ಮೈಸೂರಿನ ಜನಸಂದಣಿ, ವಾಹನ ಸಂದಣಿಯ ನಡುವೆ ಯಶಸ್ವಿಯಾಗಿ ಸಾಗುವಂತೆ ಆನೆಗಳನ್ನು ಪಳಗಿಸಲು ಸಾಕಷ್ಟು ಪರಿಶ್ರಮ ಪಡೆಬೇಕಾಗುತ್ತದೆ. ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಹಾಗೂ ಅರಮನೆಗೆ ವಾಪಸ್ಸಾಗುವ ವೇಳೆ ಸಾರ್ವಜನಿಕರ ಸುರಕ್ಷತೆಯೊಂದಿಗೆ ಆನೆಗಳ ರಕ್ಷಣೆಯ ಜವಾಬ್ದಾರಿಯೂ ಅರಣ್ಯ ಇಲಾಖೆ ಮುಂದೆ ಇರುತ್ತದೆ.

ಆದರೆ, ಆನೆಗಳಿಗೆ ಸಂಬಂಧಿಸಿದ ಕೆಲ ಎಐ ವಿಡಿಯೋ ತುಣುಕುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡುತ್ತಿರುವುದು ಅರಣ್ಯ ಇಲಾಖೆ ಮಾತ್ರವಲ್ಲದೆ, ಗಜಪಡೆಯ ಮಾವುತರು, ಕಾವಾಡಿಗಳ ಆತ್ಮಸ್ಥೈರ್ಯ ಕುಗ್ಗಿಸುವಂತಾಗುತ್ತಿದೆ. ಪಟ್ಟದ ಆನೆ ಶ್ರೀಕಂಠ ಅರಮನೆಗೆ ಹೋಗುತ್ತಿದ್ದಾಗ ಧ್ವನಿವರ್ಧಕ ಶಬ್ದ ಹಾಗೂ ಬಣ್ಣದ ಲೈಟ್‌ಗಳ ಬೆಳಕಿನಿಂದ ವಿಚಲಿತಗೊಂಡು ಪಕ್ಕಕ್ಕೆ ಸರಿದಿತ್ತು. ಅದನ್ನು ಎಐ ಮೂಲಕ ಆನೆ ಓಡಿ ಹೋಗುತ್ತಿದೆ ಎಂದು ಬಿಂಬಿಸಲಾಗಿದೆ. ಇಂತಹ ಬೆಳವಣಿಗೆಗಳು ಭವಿಷ್ಯದಲ್ಲಿ ದಸರಾ ಮಹೋತ್ಸವದಲ್ಲಿ ಗಜಪಡೆಯನ್ನು ಕರೆತರಲು ಸಾಧ್ಯವಾಗದ ಬೆಳವಣಿಗೆಗೆ ಕಾರಣವಾಗಬಹುದು. ಈ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಮಾಡುವವರು ಜವಾಬ್ದಾರಿಯಿಂದ ವರ್ತಿಸಬೇಕು. ವಿವಾದಗಳು ಹೀಗೆ ಮುಂದುವರೆಸಿದರೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವುದು ಮರೀಚಿಕೆಯಾಗಬಹುದು ಎಂದು ಅರಣ್ಯಾಧಿಕಾರಿಗಳು ವಿಷಾದ ವ್ಯಕ್ತಪಡಿಸಿದ್ದಾರೆ.

ಮಾವುತ, ಕಾವಾಡಿಗಳಿಗೂ ಸಂಕಷ್ಟ

ಆನೆಗಳಿಲ್ಲದೆ ದಸರಾ ಮಹೋತ್ಸವಕ್ಕೆ ಕಳೆಯಿಲ್ಲ. ಆನೆಗಳಿಗೆ ವಿರುದ್ಧವಾದ ವಿಡಿಯೋಗಳಿಂದ ಮಾವುತರು, ಕಾವಾಡಿಗಳಿಗೂ ಸಂಕಷ್ಟ ಉಂಟಾಗುತ್ತದೆ. ಪ್ರಾಣ ಲೆಕ್ಕಿಸದೆ ಆನೆಗಳನ್ನು ಪಳಗಿಸಿ ಜಂಬೂಸವಾರಿ ಮೆರವಣಿಗೆಯಲ್ಲಿ ಆನೆಗಳನ್ನು ಕರೆದೊಯ್ಯುವ ಸವಾಲು ಮಾವುತರು, ಕಾವಾಡಿಗಳದ್ದಾಗಿದೆ. ಇದಕ್ಕೆ ಜನ ಪ್ರೋತ್ಸಾಹ ನೀಡಿ, ಬೆಂಬಲಿಸಬೇಕು. ಅದನ್ನು ಹೊರತುಪಡಿಸಿ ವಿವಾದ ಸೃಷ್ಟಿಸಬಾರದು ಎಂದು ಮಾವುತರು ಬೇಸರ ವ್ಯಕ್ತಪಡಿಸಿದ್ದಾರೆ.

ಜಾತಿಗಣತಿ ಕಾರ್ಯ ಪರಿಶೀಲಿಸಿದ ಡಿಸಿ



ಜಾತಿಗಣತಿ ಸಮೀಕ್ಷೆಯನ್ನು ಡಿಸಿ ಜಿ.ಲಕ್ಷ್ಮಿಕಾಂತ್‌ರೆಡ್ಡಿ ಪರಿಶೀಲಿಸಿದರು.

ಮೈಸೂರು, ಸೆ.28(ಎಂಕೆ)– ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ನಡೆಸುತ್ತಿರುವ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಸ್ಥಳಕ್ಕೆ ಭಾನುವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಪರಿಶೀಲನೆ ನಡೆಸಿದರು.

ಮೈಸೂರು ವರುಣಾ ವಿಧಾನ ಸಭಾ ಕ್ಷೇತ್ರದ ವಾಜಮಂಗಲ ಗ್ರಾಪಂ ವ್ಯಾಪ್ತಿಯ ವಾಜಮಂಗಲ, ಭುಗತಹಳ್ಳಿ ಸೇರಿದಂತೆ ಅಕ್ಕ–ಪಕ್ಕದ ಗ್ರಾಮಗಳಲ್ಲಿ ನಡೆಯುತ್ತಿದ್ದ ಸಮೀಕ್ಷಾ ಸ್ಥಳಕ್ಕೆ ಭೇಟಿ ನೀಡಿದ ಅವರು, ಗಣತಿದಾರರು ಮನೆ–ಮನೆಗೆ ತೆರಳಿ ನಿಖರವಾಗಿ ಮಾಹಿತಿ ದಾಖಲಿಸುತ್ತಿರುವುದನ್ನು ಗಮನಿಸಿದರು.

ಹಾಗೆಯೇ ಸಮೀಕ್ಷೆಯ ವೇಳೆ ಎದುರಾಗುವ ಸಮಸ್ಯೆಗಳ ಕುರಿತು ಗಣತಿದಾರರೊಂದಿಗೆ ಚರ್ಚಿಸಿ, ಸಮೀಕ್ಷಾ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕೆಂದು ಸೂಚಿಸಿದರು. ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ತಹಶೀಲ್ದಾರ್ ಮಹೇಶ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ಮೈಸೂರು ಗ್ರಾಮಾಂತರ ಬಿಇಓ ಪ್ರಕಾಶ್ ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು: ನಂಜನಗೂಡು ತಾಲೂಕಿನ ಹೋಬಳಿ ಮಟ್ಟದಲ್ಲಿ ಸ್ವಯಂಪ್ರೇರಿತ ಕಾನೂನು ಸ್ವಯಂ ಸೇವಕರಾಗಿ ಕಾನೂನು ಸೇವಾ ಪ್ರಾಧಿಕಾರಗಳ ನಿಯಮ ನಿಬಂಧನೆಗೊಳಪಟ್ಟು ಕಾರ್ಯನಿರ್ವಹಿಸಲು ಪುರುಷ, ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವ್ಯಕ್ತಿಗತ ವಿವರ ಹಾಗೂ ಭಾವಚಿತ್ರ ಲಗತ್ತಿಸಬೇಕು. ಕನಿಷ್ಠ ಎಸ್‌ಎಸ್‌ಎಲ್‌ಸಿ ತೇರ್ಗಡೆ ಮತ್ತು ಮೇಲ್ಪಟ್ಟು ವಿದ್ಯಾರ್ಹತೆ ಹೊಂದಿರಬೇಕು. ಅರ್ಜಿಯನ್ನು ನಂಜನಗೂಡು ನ್ಯಾಯಾಲಯ ಆವರಣದ ತಾಲೂಕು ಕಾನೂನು ಸೇವಾ ಸಮಿತಿಯ ಗೌರವಾನ್ವಿತ ಸದಸ್ಯ ಕಾರ್ಯದರ್ಶಿಗಳ ಹತ್ತಿರ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 4 ಕೊನೆಯ ದಿನ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಲಿಬಾಲ್ ಪಂದ್ಯಾವಳಿ: ಜಿಲ್ಲಾ ಮಟ್ಟಕ್ಕೆ ಆಯ್ಕೆ



ಚಾಮುಂಡಿ ಅಂತರ ವಲಯದ 17 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದ ವಾಲಿಬಾಲ್ ಸ್ಪರ್ಧೆಯಲ್ಲಿ ಬೃಂದಾವನ ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವೇಳೆ ದೈಹಿಕ ಶಿಕ್ಷಣ ಪರಿವೀಕ್ಷಕ ನಾಗೇಶ್, ದೈಹಿಕ ಶಿಕ್ಷಣ ಶಿಕ್ಷಕ ವೇಣುಗೋಪಾಲ್, ಚಿಂತಾಮಣಿ, ತಂಡದ ನಾಯಕಿ ರಾಜೇಶ್ವರಿ, ಶೀತಲ್, ಲಿಖಿತ, ಧನುಶ್ರೀ, ಬೇಬಿ, ತೇಜಸ್ವಿನಿ, ತೇಜಸ್ವಿನಿ ಇನ್ನಿತರಿದ್ದರು.

ಕರೂರು ಕಾಲ್ತುಳಿತ ಪ್ರಕರಣ: ಸಿಬಿಐ ತನಿಖೆ ಕೋರಿ ಮದ್ರಾಸ್ ಹೈಕೋರ್ಟ್‌ಗೆ ಟಿವಿಕೆ

ಚೆನ್ನೈ: ಸೆ.27ರಂದು ಕರೂರಿನಲ್ಲಿ ತಮ್ಮ ಪಕ್ಷ ನಡೆಸಿದ ರ್‍ಯಾಲಿ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 40 ಮಂದಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಅಥವಾ ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸುವಂತೆ ಒತ್ತಾಯಿಸಿ ಟಿವಿಕೆ ಪಕ್ಷವು ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದೆ.



ಟಿವಿಕೆ ವಕೀಲರ ವಿಭಾಗದ ಅಧ್ಯಕ್ಷ ಅರಿವಳಗನ್ ನೇತೃತ್ವದ ವಕೀಲರ ತಂಡವು ಇಲ್ಲಿನ ಗ್ರೀನ್‌ವೇಸ್ ರಸ್ತೆಯಲ್ಲಿರುವ ನ್ಯಾಯಮೂರ್ತಿ ಎಂ.ದಂಡಪಾಣಿ ಅವರ ನಿವಾಸಕ್ಕೆ ತೆರಳಿ ಈ ವಿಷಯವನ್ನು ಪ್ರಸ್ತಾಪಿಸಿತು. ಟಿವಿಕೆ ಪಕ್ಷದ ಸದಸ್ಯ ನಿರ್ಮಲ್‌ಕುಮಾರ್ ಪ್ರಕಾರ, ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠದ ಮುಂದೆ ಅರ್ಜಿ ಸಲ್ಲಿಸುವಂತೆ ನ್ಯಾಯಮೂರ್ತಿಗಳು ವಕೀಲರಿಗೆ ಸೂಚಿಸಿದರು. ಈ ಅರ್ಜಿ ಕುರಿತಾದ ವಿಚಾರಣೆ ಸೋಮವಾರ ಮಧ್ಯಾಹ್ನ 2:15 ಕ್ಕೆ ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಶನಿವಾರ ಕರೂರಿನಲ್ಲಿ ನಡೆದ ವಿಜಯ್ ಅವರ ಟಿವಿಕೆ ಪಕ್ಷದ ರ್‍ಯಾಲಿ ವೇಳೆ ಕಾಲ್ತುಳಿತ ಸಂಭವಿಸಿ 40 ಮಂದಿ ಮೃತಪಟ್ಟಿದ್ದರು.

ದಸರಾ ಗೊಂಬೆ ಪ್ರದರ್ಶನ...



ಮೈಸೂರಿನ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ದಸರಾ ಹಬ್ಬದ ಪ್ರಯುಕ್ತ ಗೊಂಬೆಗಳ ಪ್ರದರ್ಶನ ಆಯೋಜಿಸಲಾಗಿದೆ. ಶಾಲಾ ಆಡಳಿತಾಧಿಕಾರಿ ಶ್ರೀಮತಿ ಕಾಂತಿ ನಾಯಕ್, ಶ್ರೀಮತಿ ವಿಜಯಲಕ್ಷ್ಮಿ, ಸಹ ಶಿಕ್ಷಕಿಯರನ್ನು ಚಿತ್ರದಲ್ಲಿ ಕಾಣಬಹುದು.

ಕಲೆಯಿಂದ ಮೊಬೈಲ್‌ನತ್ತ ಯುವಕರ ಚಿತ್ತ: ಶಾಸಕ ತನ್ವೀರ್ ಸೇಠ್ ವಿಷಾದ



ರಾಷ್ಟ್ರೀಯ ಕರಕುಶಲ ಮತ್ತು ಚಿತ್ರಕಲಾ ಪ್ರದರ್ಶನ ಮತ್ತು ಸ್ಪರ್ಧಾ ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡಿರುವ ಚಿತ್ರಕಲೆಗಳನ್ನು ಶಾಸಕ ತನ್ವೀರ್ ಸೇಠ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸೇರಿದಂತೆ ಇನ್ನಿತರರು ವೀಕ್ಷಣೆ ಮಾಡಿದರು.

ಮೈಸೂರು,ಸೆ.28(ಎಸ್‌ಪಿಎನ್)– ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಯ ಬಳುವಳಿಯಾಗಿರುವ ಕಲೆಗಳಿಂದ ಹಿಮ್ಮುಖರಾಗುತ್ತಿರುವ ಯುವಕರು, ಮೊಬೈಲ್ ವ್ಯಸನಕ್ಕೆ ದಾಸರಾಗುತ್ತಿರುವುದಕ್ಕೆ ಎಂದು ಶಾಸಕ ತನ್ವೀರ್‌ಸೇಠ್ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ಸಿದ್ಧಾರ್ಥ ನಗರದಲ್ಲಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜ(ಕಾವಾ)ನಲ್ಲಿ ಲಲಿತ ಕಲೆ ಮತ್ತು ಕರಕುಶಲ ಕಲೆ ಸಮಿತಿಯಿಂದ ಆಯೋಜಿಸಿರುವ ರಾಷ್ಟ್ರೀಯ ಕರಕುಶಲ ಮತ್ತು ಚಿತ್ರಕಲಾ ಪ್ರದರ್ಶನ, ಸ್ಪರ್ಧಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದಸರಾದ ನೈಜ ಅರ್ಥವೇ ಕಲೆ, ಸಂಸ್ಕೃತಿ ಆಗಿದ್ದು, ಅದನ್ನು ಉಳಿಸಿಕೊಂಡು ಹೋಗುವುದು ನಮ್ಮ ಕರ್ತವ್ಯ. ದಸರಾ ಮಹೋತ್ಸವದಲ್ಲಿ ಹೊಸ ಸ್ಪರ್ಧೆಗಳನ್ನು ಆಯೋಜಿಸಿ ಪ್ರಸ್ತುತ ಕಾಲಮಾನದಲ್ಲಿ ಕಲೆ–ಸಂಸ್ಕೃತಿಯನ್ನು ಜೀವಂತವಾಗಿರಿಸುವ ಕಾರ್ಯ ಮಾಡಬೇಕು. ಮುಂದಿನ ದಿನಗಳಲ್ಲಿ ಕಾವಾ ಸಂಸ್ಥೆ ವಿಶ್ವವಿದ್ಯಾನಿಲಯ ಸ್ಥಾನಮಾನ ಹೊಂದಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಇತ್ತೀಚಿನ ಎಲ್ಲಾ ಕ್ಷೇತ್ರಗಳಲ್ಲೂ ಮಾನವ ಸಂಪನ್ಮೂಲ ಕಡಿಮೆಯಾಗಿ, ಯಂತ್ರೋಪಕರಣ ಅವಲಂಬನೆ ಹೆಚ್ಚಾಗುತ್ತಿದೆ. ಆದ್ದರಿಂದ ಯುವಕರು, ಸಂಸ್ಥೆಗಳು ಕಲೆಯ ಸಂಪ್ರದಾಯಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ವಿಸ್ತಾರ ಮಾಡುವ ಕೆಲಸ ಮಾಡಬೇಕು ಎಂದು ಅಭಿಪ್ರಾಯಿಸಿದರು.

ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಮಾತನಾಡಿದರು. ಈ ವೇಳೆ ತೊಗಲು ಗೊಂಬೆ ಭಿತ್ತಿ ಚಿತ್ರಕಲೆಗಳನ್ನು ಅನಾವರಣಗೊಳಿಸಿದ ಕಲಾವಿದರನ್ನು ಸನ್ಮಾನಿಸಲಾಯಿತು. ಹಾಗೂ 1ರಿಂದ 10ನೇ ತರಗತಿಯ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಮತ್ತು 5ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಜೇಡಿಮಣ್ಣಿನ ಶಿಲ್ಪಕಲೆ ಆಯೋಜಿಸಲಾಗಿತ್ತು. ಆವರಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕರಕುಶಲ ಮತ್ತು ಲಲಿತ ಕಲಾ 10 ಮಳಿಗೆಗಳನ್ನು ಉದ್ಘಾಟಿಸಲಾಯಿತು. ಈ ವೇಳೆ ಇಂದಿರಾ ಗಾಂಧಿ ಆರ್ಟ್ ಕಾಲೇಜಿನ ಮುಖ್ಯಸ್ಥ ವಿಜಯ್‌ಕುಮಾರ್, ಸಮಿತಿ ಅಧ್ಯಕ್ಷ ರಘುರಾಜೇ ಅರಸು, ಕಾವಾ ಕಾಲೇಜಿನ ಡೀನ್ ದೇವರಾಜು, ಪಾ.ಸ. ಕುಮಾರ್ ಹಾಗೂ ಇತರೆ ಸಮಿತಿ ಸದಸ್ಯರಿದ್ದರು.

ದೇಶ - ವಿದೇಶ

ಮಾಜಿ ಪ್ರೇಯಸಿಯ ಖಾಸಗಿ ಚಿತ್ರಗಳ ಹರಿಬಿಟ್ಟ ಯುವಕನ ಬಂಧನ

ಪಣಜಿ: ಮಾಜಿ ಪ್ರೇಯಸಿಯ ಖಾಸಗಿ ಫೋಟೋಗಳನ್ನು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಹಂಚಿಕೊಂಡ ಆರೋಪದ ಮೇಲೆ 23 ವರ್ಷದ ಯುವಕನನ್ನು ಬಂಧಿಸಿರುವುದಾಗಿ ಗೋವಾ ಪೊಲೀಸರು ತಿಳಿಸಿದ್ದಾರೆ. ಆರೋಪಿಯನ್ನು ಮೊಹಮದ್ ಸಾಧಿಮ್ ಎಂದು ಗುರುತಿಸಲಾಗಿದೆ. ಯುವತಿಯೊಬ್ಬರು ನೀಡಿದ ದೂರಿನ ಮೇರೆಗೆ ಆತನನ್ನು ಬಂಧಿಸಲಾಗಿದೆ. ದೂರು ನೀಡಿದ ಯುವತಿಯು ಉತ್ತರ ಗೋವಾ ನಿವಾಸಿಯಾದ ಸಾಧಿಮ್ ಜೊತೆಗಿನ ಸಂಬಂಧವನ್ನು ಇತ್ತೀಚೆಗೆ ಮುರಿದುಕೊಂಡಿದ್ದರು. ಇದರಿಂದ ಸಿಟ್ಟಾದ ಆರೋಪಿ, ಯುವತಿಯ ಹೆಸರಿನಲ್ಲಿ ನಕಲಿ ಖಾತೆಗಳನ್ನು ತೆರೆದು, ಆಕೆಯ ಸ್ನೇಹಿತರೊಂದಿಗೆ ಖಾಸಗಿ ಚಿತ್ರಗಳನ್ನು ಹಂಚಿಕೊಂಡಿದ್ದ. ಸಮಗ್ರ ತನಿಖೆ ಮತ್ತು ತಾಂತ್ರಿಕ ಅಂಶಗಳ ವಿಶ್ಲೇಷಣೆ ನಂತರ ಆರೋಪಿಯನ್ನು ಪತ್ತೆ ಮಾಡಲಾಗಿದೆ. ಮಾರ್ಗೌ ಮತ್ತು ಪಣಜಿಯಲ್ಲಿ ಶೋಧ ನಡೆಸಿ ಆತನನ್ನು ಬಂಧಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.



ಬಾಂಗ್ಲಾದೇಶದಲ್ಲಿ ದುರ್ಗಾ ಪೂಜೆ ಆರಂಭ

ಢಾಕಾ: ಬಾಂಗ್ಲಾದೇಶದಲ್ಲಿರುವ ಹಿಂದೂ ಸಮುದಾಯದವರು ಭಾನುವಾರ ದುರ್ಗಾ ಪೂಜೆ ಆರಂಭಿಸಿದ್ದು, ಉತ್ಸವದ ಮೊದಲ ದಿನವಾದ ಮಹಾ ಷಷ್ಠಿ ದಿನದಂದು ದುರ್ಗಾ ದೇವಿಯ ಮುಖವನ್ನು ಅನಾವರಣಗೊಳಿಸುವ ಹಾಗೂ ಸ್ವಾಗತಿಸುವ ಸಂದರ್ಭದಲ್ಲಿ ಢಾಕಾದಲ್ಲಿರುವ ಢಾಕೇಶ್ವರಿ ರಾಷ್ಟ್ರೀಯ ದೇವಾಲಯ ಡೋಲು, ಘೋಷಣೆಗಳು, ಶಂಖನಾದ ಮತ್ತು ಘಂಟೆಗಳ ಶಬ್ದದಿಂದ ತುಂಬಿ ಹೋಯಿತು. ಈ ವರ್ಷದ ಉತ್ಸವವನ್ನು ಸಂಭ್ರಮದಿಂದ ಆಚರಿಸುವ ನಿರೀಕ್ಷೆಯಲ್ಲಿದ್ದೇವೆ. ಸರ್ಕಾರ ನೀಡುತ್ತಿರುವ ಸಹಕಾರ ಮತ್ತು ಭದ್ರತೆಗಾಗಿ ಮಾಡಿರುವ ವ್ಯವಸ್ಥೆಗಳ ಬಗ್ಗೆ ಸಂತಸವಿದೆ ಎಂದು ಬಾಂಗ್ಲಾದೇಶ ಪೂಜಾ ಆಚರಣೆ ಮಂಡಳಿ ಅಧ್ಯಕ್ಷ ಬಸುದೇವ್‌ಧಾರ್ ಹೇಳಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಬಾರಿ ದೇಶಾದ್ಯಂತ ಪೂಜಾ ಮಂಟಪಗಳ ಸಂಖ್ಯೆ ಹೆಚ್ಚಾಗಿದೆ. ಈ ವರ್ಷ ಸುಮಾರು 33,350 ಮಂಟಪಗಳಲ್ಲಿ ಪೂಜಾ ಕೈಂಕರ್ಯಗಳು ನಡೆಯಲಿವೆ.



20 ರೂ.ಗೆ ಕೇವಲ 4 ಪಾನಿಪುರಿ: ರಸ್ತೆಯಲ್ಲಿ ಕುಳಿತು ಮಹಿಳೆ ಪ್ರತಿಭಟನೆ

ವಡೋದರ: ಗುಜರಾತ್‌ನ ವಡೋದರದಲ್ಲಿ ಒಬ್ಬ ಮಹಿಳೆ ತಾನು ಕೊಟ್ಟ ಹಣಕ್ಕೆ ತಕ್ಕಷ್ಟು ಪಾನಿಪುರಿ ಕೊಟ್ಟಿಲ್ಲವೆಂದು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ. ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೋ ಹರಿದಾಡುತ್ತಿದೆ.



ನಡುರಸ್ತೆಯಲ್ಲಿ ಕುಳಿತಿರುವ ಮಹಿಳೆ, ಅಳುತ್ತಾ ನಾನು ಕೊಟ್ಟ ಹಣಕ್ಕೆ ಸರಿಯಾದಷ್ಟು ಪಾನಿಪುರಿ ನೀಡಿಲ್ಲ ಎಂದು ಪ್ರತಿಭಟನೆ ನಡೆಸುತ್ತಿದ್ದಾರೆ. ಮಹಿಳೆ 20 ರೂ. ಕೊಟ್ಟು ಒಂದು ಪ್ಲೇಟ್ ಪಾನಿಪುರಿ ಖರೀದಿಸಿದ್ದು, ಅಂಗಡಿಯಾತ 6 ಪಾನಿಪುರಿ ಕೊಡುವ ಬದಲು ಕೇವಲ 4 ಅನ್ನು ನೀಡಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ. ಪಾನಿಪುರಿ ಮಾರುವವನ ಮೋಸದಿಂದ ಹತಾಶೆಗೊಂಡ ಮಹಿಳೆ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿದ್ದಾರೆ. ಬೈಕರ್‌ಗಳು ಈ ಮಹಿಳೆಯ ವಿಡಿಯೋ ಚಿತ್ರೀಕರಿಸಿದ್ದಾರೆ. ಬಳಿಕ, ಮಧ್ಯಪ್ರವೇಶಿಸಿದ ವಡೋದರ ಪೊಲೀಸರು ಸಮಸ್ಯೆ ಬಗೆಹರಿಸಿದ್ದಾರೆ ಎಂದು ಸಾಗರ್ ಪಟೋಲಿಯಾ ಎಂಬವರು ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಮಹಿಳೆ ಬಳಿ ಬಂದು ಪೊಲೀಸರು ಸಮಸ್ಯೆ ಬಗೆಹರಿಸುತ್ತಿರುವುದನ್ನು ವಿಡಿಯೋದಲ್ಲಿ ಕಾಣಬಹುದಾಗಿದೆ.


ಲಂಚ ಪ್ರಕರಣ: ಚೀನಾದ ಮಾಜಿ ಕೃಷಿ ಸಚಿವ ಟ್ಯಾಂಗ್ ರೆಂಜಿಯಾನ್‌ಗೆ ಮರಣದಂಡನೆ

ಶೆನ್‌ಜೆನ್ (ಚೀನಾ): ಲಂಚ ಪ್ರಕರಣಕ್ಕೆ ಸಂಬಂಧಿಸಿ ಚೀನಾದ ಮಾಜಿ ಕೃಷಿ ಮತ್ತು ಗ್ರಾಮೀಣ ವ್ಯವಹಾರಗಳ ಸಚಿವ ಟ್ಯಾಂಗ್ ರೆಂಜಿಯಾನ್ ಅವರಿಗೆ ಜಿಲಿನ್ ಪ್ರಾಂತ್ಯದ ನ್ಯಾಯಾಲಯವೊಂದು ಭಾನುವಾರ ಮರಣದಂಡನೆ ವಿಧಿಸಿದೆ ಎಂದು ಸರ್ಕಾರಿ ಸುದ್ದಿ ಸಂಸ್ಥೆ ಕ್ಸಿನ್ಹುವಾ ವರದಿ ಮಾಡಿದೆ. 2007ರಿಂದ 2024ರವರೆಗೆ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದ ಟ್ಯಾಂಗ್ ಅವರು ಲಂಚದ ರೂಪದಲ್ಲಿ ಅಪಾರ ಪ್ರಮಾಣದ ನಗದು, ಆಸ್ತಿಯನ್ನು ಪಡೆದಿದ್ದಾರೆ ಎಂದು ಕ್ಸಿನ್ಹುವಾ ತಿಳಿಸಿದೆ. ಚೀನಾದ ಕಮ್ಯುನಿಸ್ಟ್ ಪಕ್ಷವು ಟ್ಯಾಂಗ್ ಅವರನ್ನು 2024ರ ನವೆಂಬರ್‌ನಲ್ಲಿ ಪಕ್ಷದಿಂದ ಉಚ್ಚಾಟನೆ ಮಾಡಿತ್ತು. ಕೃಷಿ ಸಚಿವರಾಗಿ ನೇಮಕ ವಾಗುವುದಕ್ಕೂ ಮುನ್ನ ಟ್ಯಾಂಗ್ ಅವರು 2017ರಿಂದ 2020ರವರೆಗೆ ಚೀನಾದ ಗನ್ಸು ಪ್ರಾಂತ್ಯದ ಗವರ್ನರ್ ಆಗಿದ್ದರು. ಭ್ರಷ್ಟಾಚಾರವು ಚೀನಾದ ಕಮ್ಯುನಿಸ್ಟ್ ಪಕ್ಷಕ್ಕೆ ದೊಡ್ಡ ಬೆದರಿಕೆಯಾಗಿದೆ. ಇದು ಇನ್ನೂ ಹೆಚ್ಚುತ್ತಲೇ ಇದೆ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಕೆಲವು ತಿಂಗಳ ಹಿಂದೆ ಹೇಳಿದ್ದರು.



ಕಾಣೆಯಾಗಿದ್ದ ಶಬರಿಮಲೆಯ ಸ್ವರ್ಣಲೇಪಿತ ಪೀಠ ಪತ್ತೆ

ಪಥನಂತಿಟ್ಟ: ಶಬರಿಮಲೆ ದೇವಾಲಯದ ದ್ವಾರಪಾಲಕ ಮೂರ್ತಿಯ ಪೀಠವನ್ನು ತಿರುವಾಂಕೂರು ದೇವಸ್ವಂ ಬೋರ್ಡ್‌ನ ವಿಜಿಲೆನ್ಸ್ ವಿಭಾಗವು ತಿರುವನಂತಪುರದಲ್ಲಿ ವಶಕ್ಕೆ ಪಡೆದಿದೆ. ಪೀಠವನ್ನು ಕೊಡುಗೆಯಾಗಿ ನೀಡಿದವರ ಸಂಬಂಧಿಕರ ಮನೆಯಿಂದ ಅದನ್ನು ಪತ್ತೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಟಿಡಿಬಿ ವಿಜಿಲೆನ್ಸ್ ಮತ್ತು ಪೊಲೀಸ್ ಅಧೀಕ್ಷಕ ಸುನಿಲ್‌ಕುಮಾರ್ ನೇತೃತ್ವದ ತಂಡವು ಪೀಠವನ್ನು ಕೊಡುಗೆಯಾಗಿದ್ದ ನೀಡಿದ್ದ ವೆಂಜರ್‌ಮೂಡ್‌ನ ಉನ್ನಿಕೃಷ್ಣನ್ ಪೊಟ್ಟಿ ಅವರ ಸಂಬಂಧಿಕರ ಮನೆಯಲ್ಲಿ ಶನಿವಾರ ಪತ್ತೆ ಮಾಡಿತ್ತು. ಚಿನ್ನದ ಹೊದಿಕೆಯ ತಾಮ್ರದ ದ್ವಾರಪಾಲಕ ಪೀಠದ ತೂಕದಲ್ಲಿ ಇಳಿಕೆ ಆಗಿರುವುದನ್ನು ಗಮನಿಸಿದ್ದ ಕೇರಳ ಹೈಕೋರ್ಟ್, ಅದರ ಬಗ್ಗೆ ತನಿಖೆ ಮಾಡುವಂತೆ ಇತ್ತೀಚೆಗೆ ಆದೇಶಿಸಿತ್ತು. ಇದರ ನಂತರ ಪೀಠ ಕಾಣೆಯಾಗಿತ್ತು. ಅಲ್ಲದೆ, 2019ರಲ್ಲಿ ದ್ವಾರಪಾಲಕರ ಫಲಕವನ್ನು ಲೋಹಲೇಪನಕ್ಕೆಂದು ತೆಗೆದುಕೊಂಡು ಹೋದಾಗ ತಾನು ಚಿನ್ನಲೇಪಿತ ಪೀಠವನ್ನು ದೇವಾಲಯಕ್ಕೆ ಕೊಡುಗೆಯಾಗಿ ನೀಡಿದ್ದಾಗಿ ಪೊಟ್ಟಿ ಹೇಳಿದ್ದರು.



ಮೈಸೂರು ಮಿತ್ರ

ಸೋಮವಾರ 29 ಸೆಪ್ಟೆಂಬರ್ 2025

ನದಿಗೆ ನಮನ ಸಲ್ಲಿಸುವುದು ಅನಾದಿಕಾಲದಿಂದಲೂ ಬಂದಿರುವ ವಾಡಿಕೆ

ರಾಮಕೃಷ್ಣಾಶ್ರಮದ ಮುಕ್ತಿದಾನಂದ ಸ್ವಾಮೀಜಿ ಅಭಿಮತ

ಕೆಆರ್‌ಎಸ್, ಸೆ.28– ನದಿಗಳಿಗೆ ನಮನ ಸಲ್ಲಿಸುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ವಾಡಿಕೆ. ಪ್ರಕೃತಿಯನ್ನು ಪೂಜಿಸಿ ಆರಾಧಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ. ಅದೇ ರೀತಿ ಕಾವೇರಿ ಸನ್ನಿಧಿಯಲ್ಲಿ ನಮನ ಸಲ್ಲಿಸುವ ಕಾರ್ಯವನ್ನು ಸರ್ಕಾರ ಹಮ್ಮಿಕೊಂಡಿದೆ ಎಂದು ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಸ್ವಾಮೀಜಿ ಪ್ರಶಂಸಿಸಿದರು..



ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಭಾನುವಾರ ಮುಕ್ತಿದಾನಂದ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇತರರು ಪಾಲ್ಗೊಂಡಿದ್ದರು.

ಐತಿಹಾಸಿಕ ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಮಾತನಾಡಿ, ನಮಗೆ ಅನ್ನ ಕೊಡುವ ಮಾತೆಗೆ ಶ್ರದ್ಧೆಯಿಂದ ನಮಿಸಿ ಅವಳ ಕೃಪೆಗೆ ಪಾತ್ರರಾಗುವ ಅವಕಾಶ ಸಿಕ್ಕಿದೆ. ಇದೊಂದು ಪವಿತ್ರ ಕಾರ್ಯ ಕಾವೇರಿ ಆರತಿ ದಸರಾ ಹಬ್ಬದ ಮುಖ್ಯ ಅಂಗವಾಗಬೇಕೆಂಬ ಡಿ.ಕೆ.ಶಿವಕುಮಾರ್ ಅವರ ಅಭಿಲಾಷೆಯಂತೆ ಕಾವೇರಿ ಆರತಿಯನ್ನು ಆಯೋಜಿಸಲಾಗಿದೆ. ದಕ್ಷಿಣ ಕರ್ನಾಟಕದ ಜೀವನದಿ, ಕೋಟ್ಯಂತರ ಜನರ ದಾಹ ನೀಗಿಸುವ ರೈತರ ಬಾಳು ಬೆಳಗುವ ಈ ಜೀವನದಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ ಮಾತನಾಡಿ, ಕಾವೇರಿ ಆರತಿಯನ್ನು ಕೆಲವರು ವಿರೋಧಿಸಿ ಕೋರ್ಟ್‌ಗೆ ಹೋಗಿದ್ದಾರೆ. ಮುಂದಿನ ದಿನಗಳಲ್ಲಿ ವಿರೋಧಿಸುವವರು ಕೂಡ ಮನಸ್ಸು ಬದಲಿಸಲಿದ್ದಾರೆ. ಕಾವೇರಿ ಆರತಿಗೆ ಎಲ್ಲರೂ ಪ್ರೀತಿಯಿಂದ ಬೆರೆಯೋಣ, ಅನುಬಂಧ ಬೆಸೆಯೋಣ ಎಂದು ಹೇಳಿದರು. ಗಂಗೆಯನ್ನು ಸಂತೃಪ್ತಿಗೊಳಿಸಲು ಉತ್ತರದಲ್ಲಿ ಗಂಗಾ ಆರತಿ ಮಾಡುತ್ತಿರುವಂತೆ ಕರ್ನಾಟಕದ ಜೀವನದಿ ಕಾವೇರಿಗೆ ನಮಿಸಿ ವಂದಿಸಬೇಕು. ಎಂದರು.

ಕುಡಿಯುವ ನೀರು, ವ್ಯವಸಾಯಕ್ಕೆ ಉಪಯೋಗಿಸುವ ಕಾವೇರಿ, ತಮಿಳು ನಾಡಿನ ಜನರು ಬದುಕನ್ನು ಕಟ್ಟಿಕೊಳ್ಳಲು ನೆರವಾಗಿದ್ದಾಳೆ. ಪ್ರಕೃತಿಗೆ ನಮನ ಸಲ್ಲಿಸುವ ದೃಷ್ಟಿಯಿಂದ ಕಾವೇರಿ ಆರತಿ ಆಯೋಜಿಸಲಾಗಿದೆ. ಸದ್ಯ ಈ ವಿಚಾರ ಕೋರ್ಟ್‌ನಲ್ಲಿ ಇರುವುದರಿಂದ ಸಾಂಕೇತಿಕವಾಗಿ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾದ್ ಮನೋಹರ್, ಜಿಲ್ಲಾಧಿಕಾರಿ ಡಾ.ಕುಮಾರ್, ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.

ಜನಪ್ರವಾಹ: ಕಾವೇರಿ ಆರತಿ ಕಾರ್ಯಕ್ರಮದ ಮೂರನೇ ದಿನವೂ ಜನಸಾಗರವೇ ಹರಿದುಬಂದಿತ್ತು. ಕೃಷ್ಣರಾಜಸಾಗರದಲ್ಲಿ ಹರಿದು ಬಂದ ಜನಪ್ರವಾಹ "ಕಾವೇರಿ ಆರತಿ" ಕಾರ್ಯಕ್ರಮದ ಯಶಸ್ಸಿನ ಸೂಚಕವಾಗಿತ್ತು.

ಕೆಆರ್‌ಎಸ್‌ಗೆ ಹರಿದು ಬರುತ್ತಿರುವ ಜನಸಾಗರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮ "ಕಾವೇರಿ ಆರತಿ" ಮೇಲಿನ ನಂಬಿಕೆ, ವಿಶ್ವಾಸಕ್ಕೆ ಸಾಕ್ಷಿಯಾಗಿತ್ತು. ಮಂಡ್ಯ, ಮೈಸೂರು ಜಿಲ್ಲೆಯಿಂದ ಮಾತ್ರವಲ್ಲದೆ ರಾಜ್ಯ, ದೇಶದ ನಾನಾ ಭಾಗಗಳಿಂದ ಆಗಮಿಸಿ ಕಾವೇರಿ ಆರತಿಯನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.


ಕಾವೇರಿ ಆರತಿಯಂತಹ ಧಾರ್ಮಿಕ ಆಚರಣೆ ಜೊತೆಗೆ ಮಂಡ್ಯದ ಸೊಗಡನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು, ಖ್ಯಾತ ಕಲಾವಿದರ ಗಾಯನ ಕಾವೇರಿ ಆರತಿ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತಂದುಕೊಟ್ಟಿವೆ. ಕಾವೇರಿ ಆರತಿ ಪೂಜಾ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಲೇಸರ್ ಶೋ, ಖ್ಯಾತ ಗಾಯಕಿ ಎಂ.ಡಿ.ಪಲ್ಲವಿ, ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್‌ರವರಿಂದ ಗಾನಸುಧೆ ಕಾರ್ಯಕ್ರಮ ನಡೆಯಿತು.



ಭಾನುವಾರ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಆರತಿ ಎತ್ತುವ ಮೂಲಕ ಕಾವೇರಿ ಮಾತೆಗೆ ನಮಿಸಿದರು.

ಕಾವೇರಿ ಆರತಿ ಜತೆಗೆ ಸಾಹಸ ಹಾಗೂ ಜಲ ಕ್ರೀಡೆ: ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ

ಮಂಡ್ಯ, ಸೆ.28– ಈ ಬಾರಿಯ ದಸರಾದಲ್ಲಿ ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗಿರುವ ಕಾವೇರಿ ಆರತಿ ಕಾರ್ಯಕ್ರಮ, ಈಗ ಸಾಹಸ ಹಾಗೂ ಜಲ ಕ್ರೀಡೆಗಳನ್ನು ಒಳಗೊಂಡು ಪ್ರವಾಸೋದ್ಯಮಕ್ಕೆ ಹೊಸ ಹೊನಲು ತಂದಿದೆ.



ಗಂಗಾರತಿ ಮಾದರಿಯಲ್ಲಿ ತಾಯಿ ಕಾವೇರಿಗೆ ಸಲ್ಲಿಸುವ ಧಾರ್ಮಿಕ ಆರತಿ ಸಮಾರಂಭದ ಜೊತೆಗೆ, ರಾಫ್ಟಿಂಗ್ ಸೇರಿದಂತೆ ಹಲವಾರು ಜಲ ಕ್ರೀಡೆಗಳು ಪ್ರವಾಸಿಗರಿಂದ ಅಪಾರ ಪ್ರತಿಕ್ರಿಯೆ ಪಡೆಯುತ್ತಿವೆ. ಸಾಹಸ ಕ್ರೀಡೆಗಳು ಯುವಕರಿಗೆ ಹೊಸ ಉತ್ಸಾಹ ನೀಡುತ್ತಿದರೆ, ಜಲಕ್ರೀಡೆಗಳು ಕುಟುಂಬ ಸಮೇತರಾಗಿ ಬರುವವರಿಗೆ ವಿಶೇಷ ಅನುಭವ ನೀಡುತ್ತಿವೆ.

ಕೆಆರ್‌ಎಸ್‌ನಲ್ಲಿ ನಡೆಯುತ್ತಿರುವ ಜಲಕ್ರೀಡೆಗಳಿಗೆ ಪ್ರವಾಸಿಗರಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಸಾಹಸ, ಮನರಂಜನೆ ಮತ್ತು ಸಂಸ್ಕೃತಿಯ ಸಂಯೋಜನೆ ಯಿಂದ ಕೆಆರ್‌ಎಸ್ ಪ್ರವಾಸೋದ್ಯಮದ ಹೊಸ ಅಧ್ಯಾಯವನ್ನು ಬರೆಯುತ್ತಿದೆ ಎಂದು ಕಾವೇರಿ ಸಮಿತಿ ಅಧ್ಯಕ್ಷರಾದ ಡಾ. ರಾಮ ಪ್ರಸಾತ್ ಮನೋಹರ್ ತಿಳಿಸಿದರು.

ಮಕ್ಕಳಿಗಾಗಿ ಸುಮಾರು 80 ಆಟಗಳನ್ನು ಪರಿಚಯಿಸಲಾಗಿದ್ದು, ಎಲ್ಲ ವಯಸ್ಸಿನ ಪ್ರವಾಸಿಗರು ತಮ್ಮ ರುಚಿಗೆ ತಕ್ಕ ಅನುಭವ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ. ಹೀಗಾಗಿ ಪ್ರವಾಸಿಗರು ಹಾಗೂ ರಾಜ್ಯದಜನ ಈ ವಾರಾಂತ್ಯದಲ್ಲಿ ಕೆಆರ್‌ಎಸ್‌ಗೆ ಆಗಮಿಸಿ ನೂತನ ರೀತಿಯ ಈ ಆಕರ್ಷಕ ಕಾರ್ಯಕ್ರಮ ವನ್ನು ಕಣ್ತುಂಬಿಕೊಳ್ಳಬೇಕು ಅವರು ಕರೆ ನೀಡಿದ್ದಾರೆ.

ಕಾವೇರಿ ಆರತಿಗೆ ಅಮೆರಿಕ ಕನ್ನಡತಿ 5 ಲಕ್ಷ ರೂ. ಸಮರ್ಪಣೆ



ಮಂಡ್ಯ, ಸೆ.28– ಐತಿಹಾಸಿಕ ಕಾವೇರಿ ಆರತಿ ಕಾರ್ಯಕ್ರಮ ಕೇವಲ ರಾಜ್ಯ, ದೇಶದಲ್ಲಿ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ ಸಾಕಷ್ಟು ಪ್ರಶಂಸೆಗೆ ಪಾತ್ರವಾಗಿದೆ. ಅಮೆರಿಕದ ಫೀನಿಕ್ಸ್‌ನಲ್ಲಿ ನೆಲೆಸಿರುವ ಬೆಂಗಳೂರು ಮೂಲದ ಜ್ಯೋತಿ ಮತ್ತು ವಿಕಾಸ್ ದಂಪತಿಗಳು ಕಾವೇರಿ ಆರತಿ ಕಾರ್ಯಕ್ರಮವನ್ನು ಮೆಚ್ಚಿ ಕೊಂಡಾಡಿದ್ದಾರೆ.

ಅನಿವಾಸಿ ಭಾರತೀಯರಾದ ಜ್ಯೋತಿ ವಿಕಾಸ್ ಕಾವೇರಿ ಆರತಿ ಬಗ್ಗೆ ಮಾತನಾಡಿ, ಭಾರತದ ಪವಿತ್ರ ನದಿಗಳಲ್ಲಿ ಒಂದಾದ ಕಾವೇರಿ ನದಿಗೆ ಆರತಿಯಂತಹ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಐದು ಲಕ್ಷ ರೂ.ಗಳನ್ನು ಸಮರ್ಪಣೆ ಮಾಡಿದ್ದಾರೆ. ತಾನು ಬೆಂಗಳೂರಿನವಾಗಿದ್ದು, ಸೆ.26ರಿಂದ ಕೆಆರ್‌ಎಸ್‌ನಲ್ಲಿ ಆರಂಭವಾಗಿರುವ ಐತಿಹಾಸಿಕ ಕಾವೇರಿ ಆರತಿ ಕಾರ್ಯಕ್ರಮ ಸಾಮಾಜಿಕ ಮಾಧ್ಯಮದಲ್ಲಿ ವೀಕ್ಷಿಸಿ ಭಾವುಕರಾಗಿದ್ದೇವೆ ಎಂದಿದ್ದಾರೆ.

ಅಮೆರಿಕಾದಲ್ಲಿ ನೆಲೆಸಿದ್ದರೂ ನಾವು ಕುಡಿದು ಬೆಳೆದಿರುವುದು ಕಾವೇರಿ ನೀರೇ. ಕಾವೇರಿ ತಾಯಿ ಕೋಟ್ಯಂತರ ಜನರ ದಾಹ ನೀಗಿ ಸಿದ್ದು ರೈತರ ಬದುಕಿಗೆ ಆಸರೆಯಾಗಿದ್ದಾಳೆ. ಜೀವನದ ಅವಿಭಾಜ್ಯ ಅಂಗವಾಗಿದ್ದಾಳೆ. ಕನ್ನಡ ನಾಡಿನ ಜನತೆ ಕಾವೇರಿಯನ್ನು ಮರೆಯಲು ಸಾಧ್ಯವಿಲ್ಲ. ಇಂತಹ ಜೀವನದಿಗೆ ವಂದಿಸಿ, ನಮಿಸುವ ಕಾರ್ಯಕ್ಕೆ ಮುನ್ನುಡಿ ಬರೆದಿರುವ ಸರ್ಕಾರಕ್ಕೆ ಎಲ್ಲಾ ಅನಿವಾಸಿ ಕನ್ನಡಿಗರ ಪರವಾಗಿ ಅಭಿನಂದಿಸುವುದಾಗಿ ಹೇಳಿದ್ದಾರೆ

ಕಾವೇರಿಯನ್ನು ಪೂಜಿಸುವುದರಿಂದ ಮಾನವ ಕುಲ ಮಾತ್ರವಲ್ಲದೆ ಸಕಲ ಜೀವಸಂಕುಲಕ್ಕೂ ಸನ್ಮಂಗಳ ಉಂಟಾಗಲಿದೆ. ಆದ್ದರಿಂದ ಕಾವೇರಿ ಆರತಿಯನ್ನು ಕೇವಲ ದಸರಾಗೆ ಮಾತ್ರ ಸೀಮಿತಗೊಳಿಸದೆ ವರ್ಷ ಪೂರ್ತಿ ಆಚರಣೆ ಮಾಡಬೇಕು. ಕಾವೇರಿ ಆರತಿ ಕಾರ್ಯಕ್ರಮ ಪುಣ್ಯದ ಕಾರ್ಯ. ಕರ್ನಾಟಕಕ್ಕೆ ಬಂದಾಗ ಕಾವೇರಿ ತಾಯಿಗೆ ಪೂಜೆ ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.

ಬೈಕ್‌ಗಳ ಡಿಕ್ಕಿ: ಸೆಸ್ಕಾಂ ಎಂಜಿನಿಯರ್ ಸಾವು

ಪಾಂಡವಪುರ, ಸೆ.28–ಬೈಕ್‌ನಲ್ಲಿ ಮನೆಗೆ ಬರುತ್ತಿದ್ದ ಸೆಸ್ಕ್ ಎಂಜಿನಿಯರ್‌ಗೆ ಹಿಂಬದಿಯಿಂದ ವೇಗವಾಗಿ ಬಂದ ಇನ್ನೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ಎಂಜಿನಿಯರ್ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದ ಐಓಸಿ ಪೆಟ್ರೋಲ್ ಬಂಕ್ ಬಳಿ ಭಾನುವಾರ ಮಧ್ಯಾಹ್ನ ನಡೆದಿದೆ.



ಕಿರಣ್ ಕುಮಾರ್

ತಾಲೂಕಿನ ಹರಳಹಳ್ಳಿ ಗ್ರಾಮದ ಬಸವೇಗೌಡರ ಪುತ್ರ ಎ.ಬಿ.ಕಿರಣ್ ಕುಮಾರ್ (47) ಮೃತ ವ್ಯಕ್ತಿ. ಪಾಂಡವಪುರ ತಾಲೂಕಿನ ಮಾಣಿಕ್ಯನಹಳ್ಳಿ ಸೆಸ್ಕ್ ಶಾಖಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರು ಮಧ್ಯಾಹ್ನ ಮನೆಯಿಂದ ಪಟ್ಟಣಕ್ಕೆ ಬರುತ್ತಿದ್ದಾಗ ಮೈಸೂರು ಕಡೆಯಿಂದ ವೇಗವಾಗಿ ಬಂದ ಬೈಕ್ ಪೆಟ್ರೋಲ್ ಬಂಕ್ ಮುಂಭಾಗ ಡಿಕ್ಕಿ ಹೊಡೆದಿದೆ. ಅಪಘಾತವಾದ ಕೂಡಲೇ ಹಿಂಬದಿಯಿಂದ ಡಿಕ್ಕಿ ಹೊಡೆದ ಬೈಕ್ ಸವಾರ ಪರಾರಿಯಾಗಿದ್ದಾನೆ.

ಪ್ರಗತಿಪರ ರೈತ ಶಿವರಾಮೇಗೌಡ ಜಮೀನಿಗೆ ವಿದೇಶಿ ಕೃಷಿ ಅಧಿಕಾರಿಗಳ ಭೇಟಿ

ಮದ್ದೂರು, ಸೆ.28– ತಾಲೂಕಿನ ಆತಗೂರು ಹೋಬಳಿಯ ಮಲ್ಲನಕುಪ್ಪೆ ಗ್ರಾಮದ ಪ್ರಗತಿಪರ ರೈತರೊಬ್ಬರ ಜಮೀನಿಗೆ ವಿವಿಧ ದೇಶಗಳ ಕೃಷಿ ಅಧಿಕಾರಿಗಳು ಭೇಟಿ ನೀಡಿದ್ದರು

ತಾಲೂಕಿನ ಮಲ್ಲನಕುಪ್ಪೆ ಗ್ರಾಮದ ಶಿವರಾಮೇಗೌಡರ ಜಮೀನಿಗೆ ಈಜಿಪ್ಟ್, ಇಥಿಯೋಪಿಯಾ, ಫಿಲಿಫೈನ್ಸ್, ನೈಜೀರಿಯಾ, ಘಾನ, ಟರ್ಕಿ, ಇಂಡೋನೇಷ್ಯಾ ಹಾಗೂ ಕೀನ್ಯಾ ದೇಶದ ಕೃಷಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಹಿಪ್ಪುನೇರಳೆ ತೋಟ, ಸಾಕಾಣಿಕೆ ಮನೆ ಇನ್ನಿತರ ಪ್ರದೇಶಗಳನ್ನು ಪರಿಶೀಲಿಸಿ ಮಾಹಿತಿ ಪಡೆದರು.



ಪ್ರಗತಿಪರ ರೈತ ಶಿವರಾಮೇಗೌಡ ಅಳವಡಿಸಿಕೊಂಡಿರುವ ಸಾವಯವ ಸಮಗ್ರ ಕೃಷಿ ಬೇಸಾಯ ಪದ್ಧತಿ, ಕೋಳಿ ಸಾಕಾಣಿಕೆ, ಹಿಪ್ಪುನೇರಳೆ ತೋಟ, ಶ್ರೀಗಂಧ, ಕುರಿ, ಮೇಕೆ ಸಾಕಾಣಿಕೆ, ಜೇನು ಸಾಕಾಣಿಕೆ, ಮೀನು ಹಾಗೂ ರೇಷ್ಮೆ ಸಾಕಾಣಿಕೆ ಮನೆಗಳಿಗೂ ಭೇಟಿ ನೀಡಿ ಅದನ್ನು ಅಳವಡಿಸಿಕೊಂಡಿರುವ ಜತೆಗೆ ಬೆಳೆಯಿಂದ ಸಿಗುತ್ತಿರುವ ಆದಾಯ ಮತ್ತು ನಷ್ಟದ ಬಗ್ಗೆ ಸ್ಥಳದಲ್ಲಿದ್ದ ರೇಷ್ಮೆ ಇಲಾಖೆಯ ವಿಜ್ಞಾನಿ ಡಾ.ಶಿವಕುಮಾರ್‌ರವರಿಂದ ಮಾಹಿತಿ ಸಂಗ್ರಹಿಸಿದರು.

ಈಗಾಗಲೇ ಮೇಲಧಿಕಾರಿಗಳು ರೈತರ ತೋಟಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆಂದು ರೇಷ್ಮೆ ಇಲಾಖೆಯ ಡಾ.ಶಿವಕುಮಾರ್ ತಿಳಿಸಿದರು.


ಅ.2ರಂದು ಮಂಡ್ಯ ದಸರಾಗೆ ಚಾಲನೆ

ಮಂಡ್ಯ, ಸೆ.28– ಪ್ರತಿ ವರ್ಷದಂತೆ ಈ ಬಾರಿಯೂ ಮಂಡ್ಯ ಯೂತ್ ಗ್ರೂಪ್ ವತಿಯಿಂದ ಅನಿಲ್ ಆನಂದ್ ಡ್ರೀಮ್ ವರ್ಕ್ಸ್ ಸಹಯೋಗದೊಂದಿಗೆ ಹನ್ನೊಂದನೇ ಬಾರಿಗೆ ಅ.2ರ ವಿಜಯದಶಮಿ ದಿನದಂದು ಮಂಡ್ಯ ದಸರಾ ನಡೆಸಲಾಗುವುದು ಎಂದು ಗ್ರೂಪ್ ಅಧ್ಯಕ್ಷ ಡಾ. ಅನಿಲ್ ಆನಂದ್ ತಿಳಿಸಿದ್ದಾರೆ.


ಆಸಕ್ತ ತಂಡಗಳು 8073229050 ರಕ್ಷಿತ್‌ರನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ಪತ್ರಿಕಾ ಹೇಳಿಕೆ ತಿಳಿಸಿದೆ

ಒಂದನೇ ಪುಟದಿಂದ

ಆಗಸದಲ್ಲಿ ಆಕೃತಿಗಳ ಅಲಂಕಾರ









ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಭಾನುವಾರ ರಾತ್ರಿ ನಡೆದ ಡ್ರೋನ್ ಪ್ರದರ್ಶನದಲ್ಲಿ ಕಂಡುಬಂದ ಅದ್ಭುತ ಚಿತ್ತಾರಗಳು.

ಇದರೊಂದಿಗೆ 2,983 ಡ್ರೋನ್‌ಗಳನ್ನು ಬಳಸಿ ರಾಷ್ಟ್ರೀಯ ಪ್ರಾಣಿ ಹುಲಿಯ ಕಲಾಕೃತಿ ರಚಿಸಿ ಗಿನ್ನಿಸ್ ವಿಶ್ವದಾಖಲೆ ಸಹ ನಿರ್ಮಿಸಲಾಯಿತು. ಆರಂಭದಲ್ಲಿ ನಕ್ಷತ್ರಗಳನ್ನು ನಾಚಿಸುವಂತೆ ಗೋಲ್ಡನ್ ಕಲರ್‌ನಲ್ಲಿ ಪ್ರತ್ಯಕ್ಷವಾದ ಸಾವಿರಾರು ಡ್ರೋನ್‌ಗಳು, ಸೌರಮಂಡಲದ ಚಿತ್ತಾರ ಮೂಡಿಸಿ ಪುಳಕವಿಟ್ಟವು. ಕೆಲವೇ ಕ್ಷಣದಲ್ಲಿ ಮತ್ತೊಂದು ಚಿತ್ತಾರ ಮೂಡಿಸಲು ಸಜ್ಜಾಗುತ್ತಿದ್ದ ಡ್ರೋನ್‌ಗಳನ್ನು ಕೌತುಕದಿಂದ ಕಣ್ಣಿನ ರೆಪ್ಪೆ ಬಡಿಯದಂತೆ ನೋಡುತ್ತಿದ್ದಂತೆ ಭಾರತೀಯ ಸೇನೆಯ ಸೈನಿಕ ಬಂದೂಕು ಹಿಡಿದು ಎದುರಾಳಿ ಹಿಮ್ಮೆಟ್ಟಿಸು ವಂತಹ ಭಂಗಿಯ ಕಲಾಕೃತಿ ಅನಾವರಣಗೊಂಡಿತು.

ಅಂತೆಯೇ ನವಿಲು, ಹುಲಿ (ಗಿನ್ನಿಸ್ ದಾಖಲೆ ಕಲಾಕೃತಿ), ಡಾಲ್ಫಿನ್, ಹದ್ದು, ಐದು ಎಡೆ ಸರ್ಪದ ಮೇಲೆ ನಿಂತಿರುವ ಶ್ರೀಕೃಷ್ಣ, ಕಾವೇರಿ ಮಾತೆ ದೃಶ್ಯಗಳು ಡ್ರೋನ್‌ಗಳಲ್ಲಿ ಮೂಡಿಸಿದ ಕರಾಮತ್ತಿಗೆ ಪ್ರೇಕ್ಷಕರು ರೋಮಾಂಚನಗೊಂಡರು. ಅಲ್ಲದೆ, ಆಗಸದಲ್ಲಿ ಜಂಬೂ ಸವಾರಿ ಮೆರವಣಿಗೆಯೂ ನಡೆಯಿತು! ತಾಯಿ ಚಾಮುಂಡೇಶ್ವರಿ ಮೂರ್ತಿ ಇರುವ ಚಿನ್ನದ ಅಂಬಾರಿ ಹೊತ್ತ ಆನೆ ಸೆಲ್ಯೂಟ್ ಮಾಡುವ ಚಿತ್ರ ಅನಾವರಣಗೊಂಡು ಪ್ರೇಕ್ಷಕರಲ್ಲಿ ಭಕ್ತಿಭಾವ ಮೂಡಿಸಿತು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಸಂಕೇತಿಸುವ ಚಿತ್ರಗಳು ಕರ್ನಾಟಕದ ಭೂಪಟದ ಹಿನ್ನೆಲೆಯಲ್ಲಿ ಮೂಡಿ ಬಂತು. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾವಚಿತ್ರಗಳು ಅನಾವರಣಗೊಂಡಿದ್ದು ಪ್ರೇಕ್ಷಕರ ಗಮನ ಸೆಳೆಯಿತು. ಕುಳಿತಿರುವ ಸಿಂಹದ ಮೇಲೆ ತಾಯಿ ಚಾಮುಂಡೇಶ್ವರಿ ಆಸೀನಳಾಗಿರುವ ದೃಶ್ಯ ಪ್ರದರ್ಶನದೊಂದಿಗೆ ಪ್ರದರ್ಶನಕ್ಕೆ ತೆರೆಬಿದ್ದಿತು. ಈ ವೇಳೆ ಜನ ಎದ್ದು ನಿಂತು ನಮಸ್ಕರಿಸುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು.

ರಾತ್ರಿ ಸುಮಾರು 8.45ಕ್ಕೆ ಆರಂಭವಾದ ಡ್ರೋನ್ ಪ್ರದರ್ಶನ, 9.08ರವರೆಗೆ ನಡೆಯುವ ಮೂಲಕ ಸುಮಾರು 25 ನಿಮಿಷ ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿತು. ಜಿಲ್ಲಾಡಳಿತ ಈ ಮೊದಲೇ ಪ್ರಕಟಣೆಯಲ್ಲಿ ತಿಳಿಸಿದಂತೆ ಪಾಸ್ ಇದ್ದವರಿಗೆ ಮಾತ್ರವೇ ಮೈದಾನದ ಒಳಾಂಗಣಕ್ಕೆ ಪ್ರವೇಶ ಕಲ್ಪಿಸಲಾಗಿತ್ತು. ಮೈದಾನದ ಹೊರ ಭಾಗದಲ್ಲೂ ಜನರ ಗುಂಪು ಪ್ರದರ್ಶನ ವೀಕ್ಷಿಸುತ್ತಿದ್ದ ದೃಶ್ಯ ಕಂಡು ಬಂದಿತು. ತಮ್ಮ ಮೊಬೈಲ್‌ಗಳಲ್ಲಿ ಪ್ರದರ್ಶನವನ್ನು ಸೆರೆ ಹಿಡಿದು ಜನ ಸಂಭ್ರಮಿಸಿದರು.

ಬಾಟ್‌ಲ್ಯಾಬ್ ತಂತ್ರಜ್ಞರ ಕಾರ್ಯಾಚರಣೆ: ದೆಹಲಿ ಮೂಲದ ಬಾಟ್‌ಲ್ಯಾಬ್ ಡೈನಾಮಿಕ್ಸ್ ಸಂಸ್ಥೆಯ ತಂತಜ್ಞರ ತಂಡದಿಂದ ಈ ಅದ್ಭುತ ಡ್ರೋನ್ ಶೋ ಪ್ರದರ್ಶನ ಕಂಡಿತು. ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜು ಮೈದಾನದಿಂದ ಡ್ರೋನ್‌ಗಳ ಕಾರ್ಯಾಚರಣೆ ನಡೆಸಲಾಯಿತು. ಸೆ.29ರಂದು ಸಂಜೆ ಮತ್ತೊಂದು ಪ್ರಾಯೋಗಿಕ ಪ್ರದರ್ಶನ ಇದ್ದು, ಅ.1 ಹಾಗೂ 2ರಂದು ಮುಖ್ಯ ಪ್ರದರ್ಶನಕ್ಕೆ ತಯಾರಿ ನಡೆಸಲಾಗಿದೆ. ಎಲ್ಲಾ ಪ್ರದರ್ಶನಗಳು ಇದೇ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ನಡೆಯಲಿವೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಡ್ರೋನ್ ಪ್ರದರ್ಶನಕ್ಕೆ ಚಾಲನೆ ನೀಡಿದರು. ಶಾಸಕ ತನ್ವೀರ್‌ಸೇಠ್, ಎಂಎಲ್‌ಸಿ ಕೆ.ಶಿವಕುಮಾರ್, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್‌ಗುಪ್ತ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಎಡಿಸಿ ಡಾ.ಪಿ.ಶಿವರಾಜ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್, ಎಸ್‌ಪಿ ವಿಷ್ಣುವರ್ಧನ ಮತ್ತಿತರರಿದ್ದರು.



ಗಿನ್ನಿಸ್ ವಿಶ್ವದಾಖಲೆ ಸಂಸ್ಥೆಯಿಂದ ಪ್ರಮಾಣಪತ್ರ ನೀಡುತ್ತಿರುವುದು.


ಕುನಾಲ್ ಗಾಂಜಾವಾಲ ಹಾಡಿನ ಮೋಡಿ

ಡ್ರೋನ್ ಪ್ರದರ್ಶನ ಆರಂಭಕ್ಕೂ ಮುನ್ನ ಖ್ಯಾತ ಹಿನ್ನಲೆ ಗಾಯಕ ಕುನಾಲ್ ಗಾಂಜಾವಾಲ, ಕನ್ನಡ, ಬಾಲಿವುಡ್ ಚಿತ್ರಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಪ್ರೇಕ್ಷಕರಿಗೆ ಮೋಡಿ ಮಾಡಿದರು. ವೇದಿಕೆಗೆ ಬರುತ್ತಿದ್ದಂತೆ ಮೊದಲಿಗೆ ನೀನೇ ನೀನೇ ಮನಸೆಲ್ಲಾ ನೀನೆ... ಗಾನದೊಂದಿಗೆ ರಂಜಿಸಿದರು. ನಂತರದಲ್ಲಿ ಕನ್ನಡದ 'ಖುಷಿಯಾಗಿದೆ ಏಕೋ ನಿನ್ನಿಂದಲೆ...' ಸೇರಿದಂತೆ ಬಾಲಿವುಡ್ ಗೀತೆಗಳನ್ನೂ ಸಾದರಪಡಿಸಿ ಅಭಿಮಾನದ ಚಪ್ಪಾಳೆ ಪಡೆದರು. ಒಂದೂವರೆ ತಾಸಿಗೂ ಹೆಚ್ಚು ಕಾಲ ನಿರಂತರವಾಗಿ ಹಾಡುಗಳನ್ನು ಪ್ರಸ್ತುತಪಡಿಸಿ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿದರು.

ಪ್ರದರ್ಶನಕ್ಕಾಗಿ ಗಂಟೆಗಟ್ಟಲೆ ಕಾದ ಜನ...

ಡ್ರೋನ್ ಪ್ರದರ್ಶನ ವೀಕ್ಷಿಸಲು ತಾಸುಗಟ್ಟಲೆ ಜನ ಮೈದಾನದಲ್ಲಿ ಕಾದು ಕುಳಿತುಕೊಳ್ಳಬೇಕಾಯಿತು. ಸಂಜೆ 4 ಗಂಟೆಯಿಂದಲೇ ಪಾಸ್ ಹೊಂದಿದವರಿಗೆ ಮೈದಾನಕ್ಕೆ ಪ್ರವೇಶ ಕಲ್ಪಿಸಲಾಗಿತ್ತು. ಆಗಿನಿಂದ ಕಾದು ಕುಳಿತಿದ್ದ ಜನತೆಗೆ ರಾತ್ರಿ 7 ಗಂಟೆಗೆ ಆರಂಭವಾದ ಕುನಾಲ್ ಗಾಂಜಾವಾಲ ಸಂಗೀತ ಕಾರ್ಯಕ್ರಮ ಅದ್ಭುತ ಮನರಂಜನೆಯೇನೂ ನೀಡಿತು. ಆದರೆ ಅವರ ಕಾರ್ಯಕ್ರಮ ನಿಗದಿಯಾಗಿರುವ ಬಗ್ಗೆಯೂ ಪ್ರಚಾರ ನೀಡಿರಲಿಲ್ಲ. ಈ ಸಂಗೀತ ಕಾರ್ಯಕ್ರಮಕ್ಕೂ ಮುನ್ನವೇ ಗಂಟೆಗಟ್ಟಲೆ ಕಾದು ಕುಳಿತುಕೊಳ್ಳಬೇಕಾದ ಬಗ್ಗೆ ಸಾಕಷ್ಟು ಜನ ಬೇಸರ ಸಹ ವ್ಯಕ್ತಪಡಿಸಿದರು. ನಿಗದಿತ ಸಮಯ ರಾತ್ರಿ 7 ಗಂಟೆಗೆ ಆರಂಭವಾಗಬೇಕಿದ್ದ ಡ್ರೋನ್ ಶೋ ರಾತ್ರಿ 8.45ಕ್ಕೆ ಆರಂಭವಾಯಿತು. ಪ್ರದರ್ಶನದ ಬಳಿಕ ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ದಟ್ಟಣೆ ವ್ಯಾಪಕವಾಗಿತ್ತು.





ಭಾರತಕ್ಕೆ ಏಷ್ಯಾಕಪ್ 'ತಿಲಕ'

ಪೆವಿಲಿಯನ್ ಪರೇಡ್ ನಡೆಸಿದರು. ನಾಯಕ ಸಲ್ಮಾನ್ ಆಘ 8, ಮೊಹಮ್ಮದ್ ನವಾಜ್, ಹ್ಯಾರೀಸ್ ರೌಫ್ ತಲಾ 6 ರನ್ ಗಳಿಸಿದರು. ಭಾರತದ ಪರ ಕುಲದೀಪ್ ಯಾದವ್ 4 ವಿಕೆಟ್ ಉರುಳಿಸಿ ಯಶಸ್ವಿ ಬೌಲರ್ ಎನಿಸಿದರು. ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ ಹಾಗೂ ಬುಮ್ರಾ ತಲಾ 2 ವಿಕೆಟ್ ಉರುಳಿಸಿದರು.

ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಭಾರತ ಬ್ಯಾಟಿಂಗ್ ವೇಳೆ ಆರಂಭಿಕ ಆಘಾತ ಎದುರಿಸಿತು. ಟೂರ್ನಿಯುದ್ದಕ್ಕೂ ಅಬ್ಬರಿಸಿದ್ದ ಅಭಿಷೇಕ್ ಶರ್ಮಾ ಫೈನಲ್ ಪಂದ್ಯದಲ್ಲಿ ಕೇವಲ 5 ರನ್ ಗಳಿಸಿ ಕ್ಯಾಚ್ ನೀಡಿ ನಿರ್ಗಮಿಸಿದ್ದು, ಆಘಾತ ನೀಡಿತು. ಹೀಗಿರುವಾಗಲೇ ಕೇವಲ 1 ರನ್‌ಗೆ ನಾಯಕ ಸೂರ್ಯಕುಮಾರ್ ಯಾದವ್ ಔಟಾಗಿದ್ದು ತಂಡಕ್ಕೆ ಬರಸಿಡಿಲು ಬಡಿದಂತಾಯಿತು. ಶುಭಮನ್ ಗಿಲ್ ಕೂಡ ದೊಡ್ಡ ಹೊಡೆತಕ್ಕೆ ಮುಂದಾಗಿ 12 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಭಾರತ 4 ಓವರ್‌ಗಳಲ್ಲಿ 20 ರನ್‌ಗಳಿಗೆ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 4ನೇ ವಿಕೆಟ್‌ಗೆ ಜೊತೆಯಾದ ತಿಲಕ್ ವರ್ಮಾ ಹಾಗೂ ಸಂಜು ಸ್ಯಾಮ್ಸನ್ 57 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 1 ಸಿಕ್ಸರ್, 2 ಬೌಂಡರಿ ಒಳಗೊಂಡ 24 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. 5ನೇ ವಿಕೆಟ್‌ಗೆ ಜೊತೆಯಾದ ತಿಲಕ್ ವರ್ಮಾ ಹಾಗೂ ಶಿವಂ ದುಬೆ 64 ರನ್ ಜೊತೆಯಾಟವಾಡುವ ಮೂಲಕ ಪಂದ್ಯವನ್ನು ಪಾಕಿಸ್ತಾನದ ಕೈಯಿಂದ ಕಿತ್ತುಕೊಂಡರು. ಆದರೆ ಕೊನೆ 7 ಬಾಲ್‌ಗೆ 10 ರನ್ ಬೇಕಾಗಿತ್ತು. ಈ ವೇಳೆ ಫಹೀಮ್ ಅಶ್ರಫ್ ಕೊನೆ ಎಸೆತವನ್ನು ಸಿಕ್ಸರ್ ಹೊಡೆಯಲು ಮುಂದಾಗಿ ಶಿವ ದುಬೆ ಬೌಂಡರಿ ಲೈನ್‌ನಲ್ಲಿ ಕ್ಯಾಚ್ ನೀಡಿ ನಿರ್ಗಮಿಸಿದ್ದು, ಭಾರತೀಯರಿಗೆ ಅರೆಕ್ಷಣ ಶಾಕ್ ನೀಡಿತು.

ಕೊನೆ ಓವರ್‌ನಲ್ಲಿ 10 ರನ್ ಬೇಕಿತ್ತು. ಆಗ ತಿಲಕ್ ವರ್ಮಾಗೆ ರಿಂಕು ಸಿಂಗ್ ಜೊತೆಯಾದರು. ಲಾಸ್ಟ್ ಓವರ್‌ನ ಮೊದಲ ಬಾಲ್‌ಗೆ ತಿಲಕ್ 2 ರನ್ ಗಳಿಸಿದರು. ಮತ್ತೆ ಸಿಕ್ಸರ್ ಬಾರಿಸಿದರು. 3ನೇ ಬಾಲ್‌ಗೆ ಸಿಂಗಲ್ ಬಂದರು. 4ನೇ ಬಾಲ್‌ಗೆ ರಿಂಗ್ ಸಿಂಗ್ ಫೋರ್ ಬಾರಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. 'ಆಪರೇಷನ್ ಸಿಂಧೂರ' ದಂತಿದ್ದ ಮೈದಾನದಲ್ಲಿ ಟೀಂ ಇಂಡಿಯಾ ಕೊನೆಗೂ ಗೆದ್ದು ಬೀಗಿತು. ಅಂತಿಮವಾಗಿ ತಿಲಕ್ ವರ್ಮಾ 53 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ ಅಜೇಯ 69 ರನ್ ಗಳಿಸಿದರೇ, ಶಿವಂ ದುಬೆ 2 ಬೌಂಡರಿ, ಸಿಕ್ಸರ್ ಒಳಗೊಂಡ 33 ರನ್ ಗಳಿಸಿದರು. ಪಾಕಿಸ್ತಾನದ ಪರ ಫಹೀಮ್ ಅಶ್ರಫ್ 3, ಅಬ್ರಾರ್ ಅಹಮ್ಮದ್, ಶಹೀನ್ ಅಫ್ರಿದಿ ತಲಾ ಒಂದೊಂಡು ವಿಕೆಟ್ ಕಬಳಿಸಿದರು. ಸರಣಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿದ ಅಭಿಷೇಕ್ ಶರ್ಮಾ ಸರಣಿ ಶ್ರೇಷ್ಠ, ತಿಲಕ್ ವರ್ಮಾ ಪಂದ್ಯ ಪುರುಷ ಪ್ರಶಸ್ತಿಗೆ ಭಾಜನರಾದರು.

ವಿನ್ನರ್ಸ್	: ಭಾರತ
ರನ್ನರ್‌ಅಪ್	: ಪಾಕಿಸ್ತಾನ
ಫೈನಲ್ ಪಂದ್ಯದಲ್ಲಿ ಪಂದ್ಯಶ್ರೇಷ್ಠ	: ತಿಲಕ್ ವರ್ಮಾ
ಸರಣಿ ಶ್ರೇಷ್ಠ	: ಅಭಿಷೇಕ್ ಶರ್ಮಾ
ಟೂರ್ನಿಯಲ್ಲಿ ಅತಿ ಹೆಚ್ಚು ರನ್	: ಅಭಿಷೇಕ್ ಶರ್ಮಾ 314 ರನ್(7 ಪಂದ್ಯ)
ಅತಿ ಹೆಚ್ಚು ವಿಕೆಟ್: ಕುಲ್ದೀಪ್ ಯಾದವ್	: 17 ವಿಕೆಟ್ (7 ಪಂದ್ಯ)
ಟೂರ್ನಿಯಲ್ಲಿ ದಾಖಲಾದ ಶತಕ: ಪಥುಮ್ ನಿಸ್ಸಾಂಕ	: 1 (ಶ್ರೀಲಂಕಾ)
ಅತಿ ಹೆಚ್ಚು ಅರ್ಧಶತಕ	: ಅಭಿಷೇಕ್ ಶರ್ಮಾ (3)
ಅತಿ ಹೆಚ್ಚು ಸಿಕ್ಸ್	: ಅಭಿಷೇಕ್ ಶರ್ಮಾ (19)
ಅತಿ ಹೆಚ್ಚು ಫೋರ್ಸ್	: ಅಭಿಷೇಕ್ ಶರ್ಮಾ (31)

ಭಾರತ ತಂಡಕ್ಕೆ ಪ್ರಧಾನಿ ಮೋದಿ, ಸಿದ್ದರಾಮಯ್ಯ, ಹೆಚ್‌ಡಿಕೆ ಅಭಿನಂದನೆ

ಬೆಂಗಳೂರು: ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಜಯ ಸಾಧಿಸಿ ಏಷ್ಯಾ ಚಾಂಪಿಯನ್ ಆಗಿ ಹೊರಹೊಮ್ಮಿದ ಭಾರತ ತಂಡಕ್ಕೆ ಪ್ರಧಾನಿ ಮೋದಿ, ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಅನೇಕ ಗಣ್ಯರು ಅಭಿನಂದನೆ ತಿಳಿಸಿದ್ದಾರೆ. ಏಷ್ಯಾಕಪ್‌ನಲ್ಲಿ ಪಾಕಿಸ್ತಾನದ ವಿರುದ್ಧ ಜಯ ಗಳಿಸಿದ್ದನ್ನು ಪ್ರಧಾನಿ ನರೇಂದ್ರ ಮೋದಿ ಆಪರೇಷನ್ ಸಿಂಧೂರಕ್ಕೆ ಹೋಲಿಸಿ ಭಾರತ ತಂಡವನ್ನು ಅಭಿನಂದಿಸಿದ್ದಾರೆ. 'ಮೈದಾನದಲ್ಲಿ ಆಪರೇಷನ್ ಸಿಂಧೂರ್. ಫಲಿತಾಂಶ ಒಂದೇ: ಭಾರತಕ್ಕೆ ಜಯ. ನಮ್ಮ ಕ್ರಿಕೆಟಿಗರಿಗೆ ಅಭಿನಂದನೆಗಳು ಎಂದು ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ'

ಸಿದ್ದರಾಮಯ್ಯ: ಭಾರತ ತಂಡಕ್ಕೆ ಅದ್ಭುತ ಗೆಲುವು! ಏಷ್ಯಾ ಕಪ್ ಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಅದ್ಭುತ ಗೆಲುವು ಸಾಧಿಸಿದ್ದಕ್ಕಾಗಿ ಟೀಮ್ ಇಂಡಿಯಾಗೆ ಅಭಿನಂದನೆಗಳು. ನಿಮ್ಮ ದೃಢನಿಶ್ಚಯ ಮತ್ತು ತಂಡದ ಕೆಲಸವು ಮತ್ತೊಮ್ಮೆ 140 ಕೋಟಿ ಭಾರತೀಯರ ಉತ್ಸಾಹವನ್ನು ಹೆಚ್ಚಿಸಿದೆ. ಈ ಗೆಲುವು ನಮ್ಮ ರಾಷ್ಟ್ರದ ಅಚಲ ಹೆಮ್ಮೆಗೆ ಸಾಕ್ಷಿಯಾಗಿದೆ. ಜೈ ಹಿಂದ್ ಎಂದು ಸಿಎಂ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಪೋಸ್ಟ್ ಹಾಕಿ ಅಭಿನಂದನೆ ಸಲ್ಲಿಸಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ: 2025ರ ಏಷ್ಯಾ ಕಪ್ ಗೆದ್ದ ಟೀಮ್ ಇಂಡಿಯಾಗೆ ಹೃದಯಪೂರ್ವಕ ಅಭಿನಂದನೆಗಳು. ಈ ವಿಜಯವು ತಂಡದ ದೃಢತೆ, ಏಕತೆ ಮತ್ತು ಅದ್ಭುತ ಕ್ರೀಡಾಸ್ಫೂರ್ತಿಗೆ ನಿದರ್ಶನ. ಪ್ರತೀ ಭಾರತೀಯನಿಗೂ ಹೆಮ್ಮೆಯ ಕ್ಷಣ ಇದಾಗಿದೆ. ಈ ಗೆಲುವು ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಮತ್ತೊಂದು ಉಜ್ವಲ ಅಧ್ಯಾಯವಾಗಿದೆ. ಜೈ ಹಿಂದ್ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಸೂರ್ಯ ಬಳಗಕ್ಕೆ ಅಭಿನಂದನೆ ತಿಳಿಸಿದ್ದಾರೆ.



ಮುಗಿಲು ಮುಟ್ಟಿದ ಸಂಭ್ರಮಾಚರಣೆ

ದುಬೈನಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಸಾಂಪ್ರಾದಾಯಿಕ ಹಾಗೂ ಬದ್ಧ ಎದುರಾಳಿ ಪಾಕಿಸ್ತಾನದ ಎದುರು ಭಾರತ ಗೆಲುವು ಸಾಧಿಸಿ ಏಷ್ಯಾ ಕಪ್ ಮುಡಿಗೇರಿಸಿಕೊಳ್ಳುತ್ತಿದ್ದಂತೆ ದೇಶಾದ್ಯಂತ ಸಂಭ್ರಮ ಮುಗಿಲು ಮುಟ್ಟಿತ್ತು. ಭಾರತೀಯ ಅಭಿಮಾನಿಗಳು ರಸ್ತೆ ರಸ್ತೆಗಳಲ್ಲಿ ಪಟಾಕಿ ಸಿಡಿಸಿ ಭಾರತದ ಪರ ಜಯಘೋಷ ಮೊಳಗಿಸಿ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ಮೈಸೂರು ದಸರಾ ಮಹೋತ್ಸವ-2025

ಸಾಕುಪ್ರಾಣಿಗಳ ಸ್ಪರ್ಧೆಯಲ್ಲಿ ವಿಶಿಷ್ಟ ಗುಣಲಕ್ಷಣಗಳುಳ್ಳ ಶ್ವಾನಗಳು

• ಕೆಲವು ಸೈಲೆಂಟ್, ಕೆಲವು ವೈಲೆಂಟ್, ಕೆಲವು ಫ್ರೆಂಡ್ಲಿ, ಕೆಲವು ಆಕ್ರಮಣಕಾರಿ • ದೇಶ- ವಿದೇಶದ 650 ಶ್ವಾನಗಳು ಭಾಗಿ • ವಿಶಿಷ್ಟ ಗುಣಲಕ್ಷಣದ ಬೆಕ್ಕು, ಲವ್ ಬರ್ಡ್ಸ್ • ಉಗ್ರರನ್ನು ಸದೆ ಬಡಿಯುವ ಶ್ವಾನ ಅತ್ಯಾಕರ್ಷಕ • ತುಂಟಾಟ, ಬೆಡಗು, ಬಿನ್ನಾಣದಿಂದ ಹೆಜ್ಜೆ ಹಾಕಿದ ಮುದ್ದು ಶ್ವಾನಗಳು





ಮುದ್ದಾದ ಶ್ವಾನಗಳನ್ನು ಹಿಡಿದುಕೊಂಡು ವಿಶಿಷ್ಟ ಅನುಭವ ವ್ಯಕ್ತಪಡಿಸಿದ ಶ್ವಾನಪ್ರೇಮಿಗಳನ್ನು ಚಿತ್ರದಲ್ಲಿ ಕಾಣಬಹುದು (ಎಡಚಿತ್ರ). ಮೈಸೂರು ನಗರದ ಪೊಲೀಸ್ ಡಾಗ್ ಸ್ಕ್ವಾಡ್‌ನಲ್ಲಿರುವ ನಾಲ್ಕು ವಿವಿಧ ರೀತಿಯ ಶ್ವಾನಗಳು ಕೂಡ ಸ್ಪರ್ಧೆಯಲ್ಲಿ ಭಾಗಿಯಾಗಿ ಗಮನ ಸೆಳೆದವು (ಬಲಚಿತ್ರ).

ಮೈಸೂರು, ಸೆ.28(ಬಿಎಲ್‌ಯು)– ಕೆಲವು ಶ್ವಾನಗಳು ಸೈಲೆಂಟ್ ಆದರೆ, ಮತ್ತೆ ಕೆಲವು ಶ್ವಾನಗಳು ವೈಲೆಂಟ್, ಹಲವು ಶ್ವಾನಗಳು ಮನೆಯಲ್ಲಿ ಫ್ರೆಂಡ್ಲಿಯಾಗಿದ್ದರೆ, ಮತ್ತೆ ಹಲವು ಶ್ವಾನಗಳು ಉಗ್ರರನ್ನು ಸದೆಬಡಿಯುವ ಆಕ್ರಮಣಕಾರಿ ಗುಣ ವಿಶೇಷವಿರುವ ಶ್ವಾನಗಳಾಗಿದ್ದವು. ಒಂದಕ್ಕಿಂತ ಒಂದು ಭಿನ್ನವಾಗಿದ್ದ ಮುದ್ದು ಶ್ವಾನಗಳು ಪ್ರಾಣಿ ಪ್ರಿಯರನ್ನು ಅತ್ಯಾಕರ್ಷಿಸಿದವು

ಮೈಸೂರಿನ ಜೆ.ಕೆ.ಮೈದಾನದಲ್ಲಿ ಇಂದು ಪಶುಸಂಗೋಪನಾ ಇಲಾಖೆ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಸಾಕುಪ್ರಾಣಿಗಳ ಸ್ಪರ್ಧೆ ಮತ್ತು ಪ್ರದರ್ಶನದಲ್ಲಿ ಶ್ವಾನಗಳ ವೈಶಿಷ್ಟ್ಯತೆ ಈ ರೀತಿಯಾಗಿತ್ತು. ಸುಮಾರು 3 ಸಾವಿರಕ್ಕೂ ಹೆಚ್ಚು ಜನರು ಜೆ.ಕೆ.ಮೈದಾನದಲ್ಲಿ ಸಮಾವೇಶಗೊಂಡಿದ್ದರು.

ರೈತ ದಸರಾ ಉಪ ಸಮಿತಿ ಉಪಾಧ್ಯಕ್ಷ ಹರೀಶ್ ಮೊಗಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಉಪ ಸಮಿತಿಯ ಉಪಾಧ್ಯಕ್ಷ ಶ್ರೀನಿವಾಸ್, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಹಾಜರಿದ್ದರು.

ಇಡೀ ದಿನ ನಡೆದ ಸಾಕುಪ್ರಾಣಿಗಳ ಪ್ರದರ್ಶನದಲ್ಲಿ ದೇಶ-ವಿದೇಶಗಳ 650 ವಿವಿಧ ತಳಿಯ ಶ್ವಾನಗಳು, 50 ವಿವಿಧ ತಳಿಯ ಬೆಕ್ಕುಗಳು ಹಾಗೂ ನೂರಾರು ಲವ್ ಬರ್ಡ್ಸ್‌ಗಳು ಪ್ರದರ್ಶನದಲ್ಲಿ ಭಾಗಿಯಾಗಿ ಕಣ್ಮನ ಸೆಳೆದವು.

ಒಂದಕ್ಕಿಂತ ಒಂದು ಭಿನ್ನವಾದ ಗುಣ ಲಕ್ಷಣಗಳನ್ನು ಹೊಂದಿದ್ದವು. ಸೈಲೆಂಟ್ ಆಗಿರುವ ಶ್ವಾನಗಳು ತುಂಟಾಟವಾಡುತ್ತಾ, ಬೆಡಗು, ಬಿನ್ನಾಣದಲ್ಲಿ ಹೆಜ್ಜೆ ಹಾಕಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡವು. ಶ್ವಾನಗಳನ್ನು ತಮ್ಮ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುವ ಅದರ ಮಾಲೀಕರು ಶ್ವಾನಕ್ಕೆ ಪಿಂಕ್, ಪರ್ಪಲ್, ಬಿಳಿ ಬಣ್ಣದ ಫ್ಯಾಷನ್ ಬಟ್ಟೆಯನ್ನು ಧರಿಸಿ ಗಮನ ಸೆಳೆಯುವಂತೆ ಮಾಡಿದ್ದರು.

ಸ್ಪರ್ಧೆಗೆ ಕರೆ ತಂದಿದ್ದ ಫ್ರೆಂಚ್ ಮೂಲದ ತಳಿ ಮೈಲೊ ಎಂಬ ಶ್ವಾನ ವಿಶಿಷ್ಟವಾಗಿತ್ತು. ಇತರೆ ಶ್ವಾನಗಳಂತೆ ಮೈಲೊ ಜೊಲ್ಲು ಸುರಿಸುವುದಿಲ್ಲ ಹಾಗೂ ಕೂದಲು ಉದುರುವುದಿಲ್ಲ. ಪಂಜಾಬ್‌ನಲ್ಲಿ ಈ ನಾಯಿ ಖರೀದಿಸಿದ್ದು, ಇದರ ಬೆಲೆ ಕನಿಷ್ಠ 40 ಸಾವಿರದಿಂದ 1.5 ಲಕ್ಷ ರೂಪಾಯಿ ತನಕ ಇದೆ.

ಸೈಬಿರಿಯನ್ ಹಸ್ಕಿ ಎಂಬ ಶ್ವಾನ ಶಾಂತ ಸ್ವಭಾವದ್ದಾಗಿದ್ದರೂ ಬೇಟೆಯಾಡುವುದರಲ್ಲಿ ನಿಸ್ಸೀಮ. ಈ ಹಿಂದೆ ರಾಜರು ಕಾಡಿನಲ್ಲಿ ಬೇಟೆಯಾಡುವ ಸಂದರ್ಭದಲ್ಲಿ ಸೈಬಿರಿಯನ್ ಹಸ್ಕಿ ಶ್ವಾನವನ್ನು ಬಳಸುತ್ತಿದ್ದರು. ಇಂದಿನ ಸ್ಪರ್ಧೆಯಲ್ಲಿ ಕೂಡ ಆಕರ್ಷಿಸಿತು.

ಸ್ಪರ್ಧೆಯಲ್ಲಿ ಭಾಗಿಯಾಗಿದ್ದ ಬೆಲ್ಜಿಯಂ ಮೆಲಿನೋಯ್ಸ್ ಎಂಬ ಶ್ವಾನ ಮನೆಯಲ್ಲಿ ಕಾವಲುಗಾರನಂತೆ ಕೆಲಸ ಮಾಡುತ್ತದೆ. ಅಷ್ಟೆ ಅಲ್ಲದೆ ಪ್ರತಿಯೊಂದು ದೇಶದ ಮಿಲಿಟರಿಯಲ್ಲಿ ಇದನ್ನು ಬಳಕೆ ಮಾಡಲಾಗುತ್ತದೆ. ಭಾರತದ ಸೇನಾಪಡೆಯಲ್ಲಿ ಕೂಡ ಈ ಶ್ವಾನ ಇದ್ದು, ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರನ್ನು ಬೆನ್ನಟ್ಟಲು ಬಳಸಲಾಗುತ್ತದೆ.

ಉಗ್ರರ ವಾಸನೆಯ ಆಧಾರದ ಮೇಲೆ ಸುಮಾರು 20 ಕಿಲೋ ಮೀಟರ್ ತನಕ ವೇಗವಾಗಿ ಓಡುವ ಬೆಲ್ಜಿಯಂ ಮೆಲಿನೋಯ್ಸ್ ಭಯೋತ್ಪಾದಕರ ಮೇಲೆ ಎರಗುತ್ತದೆ. ಇದನ್ನು ಹಾರ್ಸ್ ರೈಡ್ ಡಾಗ್ ಎಂಬ ಹೆಸರಿನಿಂದ ಕೂಡ ಕರೆಯಲಾಗುತ್ತದೆ.

ಪ್ರದರ್ಶನದಲ್ಲಿ ಭಾಗಿಯಾಗಿದ್ದ ಮುಧೋಳ ಶ್ವಾನ ತುಂಬಾ ಪ್ರಖ್ಯಾತಿ ಪಡೆದಿರುವ ಕರ್ನಾಟಕದ ಶ್ವಾನವಾಗಿದೆ. ಕರ್ನಾಟಕದ ಬಾಗಲಕೋಟೆಯ ಮುಧೋಳ ಇದರ ಮೂಲ ಸ್ಥಾನ. ಈ ಹಿಂದೆ ರಾಜರು ಬೇಟೆಯಾಡುವ ಸಂದರ್ಭದಲ್ಲಿ ಇದನ್ನು ಬಳಕೆ ಮಾಡುತ್ತಿದ್ದರು. ಈಗ ಭಾರತೀಯ ಸೇನೆಯಲ್ಲಿ ಭಯೋತ್ಪಾದಕರನ್ನು ಹಿಡಿಯಲು ಮುಧೋಳವನ್ನು ಬಳಸುತ್ತಿದ್ದಾರೆ.

ವಾರ್ಕ್ ಶೇಷರ್ ಎಂಬ ಶ್ವಾನ ತುಂಬಾ ಫ್ರೆಂಡ್ಲಿಯಾಗಿದೆ. ಮಕ್ಕಳು ತುಂಬಾ ಪ್ರೀತಿಯಿಂದ ಮುದ್ದಾಡಿದರೂ ಯಾವುದೇ ರೀತಿಯಲ್ಲೂ ಆಕ್ರಮಣಕಾರಿ ಗುಣವಿಲ್ಲದ ಶಾಂತ ಸ್ವಭಾವದ ಶ್ವಾನವಾಗಿದೆ.

ಇದರ ಜೊತೆಗೆ ಶಿಡ್ಜ್ ಶ್ವಾನಗಳು ಕೂಡ ಸ್ಪರ್ಧೆಯಲ್ಲಿ ಭಾಗಿಯಾಗಿದ್ದವು. ಬೇರೆ ಶ್ವಾನಗಳನ್ನು ಸಾಕಲು ತಿಂಗಳಿಗೆ ಸಾವಿರಾರು ರೂಪಾಯಿ ಆಹಾರ ಬೇಕಿದೆ. ಒಂದೊಂದು ಬಾರಿ ಅನಾರೋಗ್ಯ ಉಂಟಾದರೆ ಔಷಧಿ ವೆಚ್ಚ ಕೂಡ ದುಬಾರಿಯಾಗಿರುತ್ತದೆ. ಆದರೆ ಈ ಶ್ವಾನಗಳು ಬೇರೆ ಶ್ವಾನಗಳಿಗಿಂತ ಭಿನ್ನವಾಗಿದ್ದು, ಅಷ್ಟಾಗಿ ನಿರ್ವಹಣೆ ಇರುವುದಿಲ್ಲ.

ಪೂಡ್ಲಿ, ರಾಜಾ ಪೊಲಿಯಂ, ಪಿಟ್‌ಬುಲ್, ಕಾಕರ್ ಸ್ಪ್ಯಾನಿಯಲ್, ಕೊಕ್ಕೋಪೊ, ಫ್ರೆಂಚ್ ಬುಲ್‌ಡಾಗ್, ಓಲ್ಡ್ ಶೀಪ್‌ಡಾಗ್, ಐರಿಸ್ ಸೆಟ್ಟರ್ ಬೀಗಲ್, ಡಚ್ ಶೆಪರ್ಡ್, ಚೌಚೌ, ಬಾರ್ಡರ್ ಕೋಲಿ, ಬರ್ಮಿನ್ ಮೌಂಟೇನ್ ಡಾಗ್, ಲಾಸ್ ಅಪ್ಸೋ ಶ್ವಾನಗಳು ಪ್ರದರ್ಶನ ಹಾಗೂ ಸ್ಪರ್ಧೆಯಲ್ಲಿ ಭಾಗಿಯಾಗಿದ್ದವು.

ಜರ್ಮನ್ ಶೆಪರ್ಡ್, ಡಾಬರ್‌ಮನ್, ಡಾಬರ್‌ಮನ್ ಪಿನ್ಷರ್, ಲ್ಯಾಬ್ರೋಡಾಲ್, ಬಾಕ್ಸರ್, ಗಾರ್ಡಿಂಗ್, ಗ್ರೇಟ್ ಡೆನ್, ಸೆನ್ ಬರ್ನಾಡ್, ಡಾರಾ ಅರ್ಜೆಟೇನಾ ಸೇರಿದಂತೆ ಕೆಲವು ಶ್ವಾನಗಳನ್ನು ಭಾರತೀಯ ಸೇನೆಯಲ್ಲಿ ಬಳಸಲಾಗುತ್ತದೆ. ಉಗ್ರರ ವಾಸನೆ ಆಧಾರದ ಮೇಲೆ ಭಯೋತ್ಪಾದಕರಿರುವ ಸ್ಥಳಕ್ಕೆ ವೇಗವಾಗಿ ಹೋಗುತ್ತವೆ.

ಮನೆಯ ಕಾವಲಿಗೆ ಕೆಲವು ಶ್ವಾನಗಳನ್ನು ಶ್ವಾನ ಪ್ರಿಯರು ಸಾಕುತ್ತಾರೆ. ಆದರೆ ಕೆಲವು ಶ್ವಾನ ಪ್ರಿಯರು ಶ್ವಾನಗಳನ್ನು ಮಾರಾಟ ಮಾಡುವ ಮೂಲ ವೃತ್ತಿ ಮಾಡಿಕೊಂಡಿದ್ದಾರೆ.

ದೇಶಾದ್ಯಂತ ನಡೆಯುವ ಹಲವು ಶ್ವಾನ ಸ್ಪರ್ಧೆಯಲ್ಲಿ ತಮ್ಮ ಶ್ವಾನವನ್ನು ಸ್ಪರ್ಧೆಗಿಡುತ್ತಾರೆ. ಹೀಗೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಶ್ವಾನಗಳು ಸರ್ಟಿಫಿಕೇಟ್ ಪಡೆಯುತ್ತವೆ. ಇಂತಹ ಶ್ವಾನಗಳ ಬೆಲೆ ದುಬಾರಿಯಾಗಿರುತ್ತದೆ. ಇವು ಜನ್ಮ ನೀಡುವ ಶ್ವಾನದ ಬೆಲೆ ಲಕ್ಷ ಮೀರುತ್ತದೆ.

ಬೆಕ್ಕು, ಲವ್ ಬರ್ಡ್ಸ್‌ಗಳ ಆಕರ್ಷಣೆ

ಸಾಕು ನಾಯಿಗಳ ಪ್ರದರ್ಶನದಲ್ಲಿ ವಿವಿಧ ತಳಿಯ ಬೆಕ್ಕುಗಳು ಸ್ಪರ್ಧೆಯಲ್ಲಿ ಭಾಗಿಯಾಗಿದ್ದವು. ನೋಡಲು ಇವು ಒಂದಕ್ಕಿಂತ ಒಂದು ಮುದ್ದಾಗಿದ್ದವು.

ಪರ್ಷಿಯನ್ ಕ್ಯಾಟ್, ಬೆಂಗಾಲಿಯನ್ ಕ್ಯಾಟ್, ಹಿಮಾಲಿಯನ್ ಕ್ಯಾಟ್, ಪಂಚ್ ಫೇಸ್ ಕ್ಯಾಟ್ ಸೇರಿದಂತೆ ವಿವಿಧ ಮಾದರಿಯ ವಿಶಿಷ್ಟ ತಳಿಯ ಬೆಕ್ಕುಗಳು ಪಾಲ್ಗೊಂಡು ಬಹುಮಾನ ಪಡೆದವು.

ಲವ್ ಬರ್ಡ್ಸ್‌ನಲ್ಲಿ ಎಕ್ಸಾಟಿಕ್ ಬರ್ಡ್ಸ್, ಆಫ್ರಿಕನ್ ಬರ್ಡ್ಸ್ ಸೇರಿದಂತೆ ಹಲವು ಪಕ್ಷಿಗಳು ಪ್ರದರ್ಶನದಲ್ಲಿ ಭಾಗಿಯಾಗಿದ್ದವು.

ಯೋಧ, ಅರ್ಜುನ, ಕೃಷ್ಣನ ದಕ್ಷತೆ ಅನಾವರಣ

ಮೈಸೂರು ನಗರದ ಪೊಲೀಸ್ ಡಾಗ್ ಸ್ಕ್ವಾಡ್‌ನಲ್ಲಿರುವ ನಾಲ್ಕು ವಿವಿಧರೀತಿಯ ಶ್ವಾನಗಳು ಕೂಡ ಸ್ಪರ್ಧೆಯಲ್ಲಿ ಭಾಗಿಯಾಗಿ ಗಮನ ಸೆಳೆದವು.

ಬೆಲ್ಜಿಯಂ ನೆಗೊಲಿಯಸ್ ಎಂಬ ತಳಿಯ ಯೋಧ ಲ್ಯಾಬ್ರೋಡಾರ್ ಮತ್ತು ಅರ್ಜುನ ತಳಿಯ ಕೃಷ್ಣ ಹಾಗೂ ಜರ್ಮನ್ ದೇಶದ ಜರ್ಮನ್ ಶೆಪರ್ಡ್‌ನ ರಶ್ಮಿ ಶ್ವಾನಗಳು ಪಾಲ್ಗೊಂಡಿದ್ದವು.

ದಕ್ಷತೆಯ ಗುಣವಿರುವ ಈ ಶ್ವಾನಗಳು ವಿಶೇಷ ಗುಣಲಕ್ಷಣವನ್ನು ಹೊಂದಿರುತ್ತವೆ ಸೆಲ್ಯೂಟ್ ಮಾಡುತ್ತವೆ, ಅಪ್ ಅಂಡ್ ಡೌನ್‌ನಲ್ಲಿ ಹೆಜ್ಜೆ ಹಾಕುತ್ತವೆ ಹಾಗೂ ಪರೇಡ್ ಮಾಡುತ್ತವೆ. ಈ ಶ್ವಾನಗಳಿಗೆ ಗೌರವ ಪೂರ್ವಕವಾಗಿ ನೆನಪಿನ ಕಾಣಿಕೆ ನೀಡಲಾಯಿತು.

ಬಹುಮಾನದ ಹೊಳೆ ಹರಿಸಿದ ಮೈಸೂರು ಶ್ವಾನಗಳು

ಮೈಸೂರು, ಸೆ.28(ವಿವಿಹೆಚ್)– ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಪ್ರಯುಕ್ತ ಮೈಸೂರಿನ ಜೆಕೆ ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ಶ್ವಾನ ಮತ್ತು ಮುದ್ದುಪ್ರಾಣಿಗಳ ಪ್ರದರ್ಶನ ಸ್ಪರ್ಧೆಯಲ್ಲಿ ಮೈಸೂರಿನ ಶ್ವಾನಗಳು ಸರಣಿಯಾಗಿ ಬಹುಮಾನ ಗೆದ್ದುಕೊಂಡವು.

ಮೈಸೂರಿನ ಜರ್ಮನ್ ಶೆಪರ್ಡ್ ಶ್ವಾನ ಮೊದಲ ಸ್ಥಾನ ಪಡೆದುಕೊಳ್ಳುವ ಮೂಲಕ ಚಾಂಪಿಯನ್ಸ್ ಆಫ್ ಚಾಂಪಿಯನ್ ಆಯಿತು. ಬಾಕ್ಸರ್ ಶ್ವಾನ ರನ್ನರ್‌ಅಪ್(ಚಾಂಪಿಯನ್) ಮತ್ತು ರಾಟ್ ವೆಲ್ಲರ್ ಶ್ವಾನ ಸ್ಪರ್ಧೆಯಲ್ಲಿ ತೃತೀಯ ಬಹುಮಾನವನ್ನು ತಮ್ಮದಾಗಿಸಿಕೊಂಡವು.

ಪ್ರತಿ ಶ್ವಾನಗಳ ನಿರ್ದಿಷ್ಟ ಗುಣಲಕ್ಷಣಗಳ ಆಧಾರದಡಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಮತ್ತು ಆರೋಗ್ಯವಂತವಾಗಿರುವ ಶ್ವಾನಗಳನ್ನು ಗುರುತಿಸಿ ಬಹುಮಾನ ನೀಡಲಾಗಿದೆ. ಇನ್ನು ನಾಲ್ಕನೇ ಬಹುಮಾನವನ್ನು ಡಾಬರ್‌ಮನ್, ಐದನೇ ಬಹುಮಾನವನ್ನು ಮಾಲ್ಟಿಸ್, ಆರನೇ ಬಹುಮಾನವನ್ನು ರಾಜ್ಯದ ದೇಸಿ ತಳಿಯಾದ ಮುಧೋಳ ಶ್ವಾನ ಪಡೆದುಕೊಂಡರೆ, ಸೈಬಿರಿಯನ್ ಹಸ್ಕಿ ತಳಿಯ ಶ್ವಾನ ಏಳನೇ ಬಹುಮಾನವನ್ನು ಪಡೆದುಕೊಂಡಿತು.

ವಿಜೇತ ಶ್ವಾನಗಳ ಮಾಲೀಕರಿಗೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಬಹುಮಾನ ವಿತರಿಸಿದರು. ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಆರ್. ಮಹದೇವ, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕರಾದ ಡಾ. ನಾಗರಾಜು, ಡಾ.ರಮೇಶ್, ಸಹಾಯಕ ನಿರ್ದೇಶಕ ಡಾ.ಪೂರ್ಣಾನಂದ, ಸಮಿತಿಯ ಉಪಾಧ್ಯಕ್ಷ ಹೊಸಹುಂಡಿ ರಘು, ಹರೀಶ್ ಮೊಗಣ್ಣ ಉಪಸ್ಥಿತರಿದ್ದರು.

ಡಾಗ್ ಶೋನಲ್ಲಿ ಆತಂಕಕಾರಿ ಘಟನೆ: ಶ್ವಾನಕ್ಕೆ ಇಂಜೆಕ್ಟ್ ಮಾಡಿ ಪೇರಿ ಕೀಳುತ್ತಿದ್ದ ವ್ಯಕ್ತಿ ಪೊಲೀಸರ ಅತಿಥಿ

ಮೈಸೂರು, ಸೆ.28(ಬಿಎಲ್‌ಯು)– ಮೈಸೂರಿನ ಜೆ.ಕೆ.ಮೈದಾನದಲ್ಲಿ ಇಂದು ನಡೆದ ಡಾಗ್ ಶೋ ವೇಳೆ ನಾಯಿಗಳಿಗೆ ಇಂಜೆಕ್ಟ್ ಮಾಡುತ್ತಿದ್ದ ಕೇರಳ ಮೂಲದ ವ್ಯಕ್ತಿಯೊಬ್ಬ ಪೊಲೀಸರ ಅತಿಥಿಯಾಗಿದ್ದಾನೆ.



ನಗರದ ದಟ್ಟಗಳ್ಳಿಯ ಶ್ವಾನದ ಮಾಲೀಕರೊಬ್ಬರು ಗ್ರೇಟ್ ಡೆನ್ ಎಂಬ ಶ್ವಾನವನ್ನು ಸ್ಪರ್ಧೆಯಲ್ಲಿ ಪ್ರದರ್ಶಿಸಿ ಬಹುಮಾನ ಹಾಗೂ ಸರ್ಟಿಫಿಕೇಟ್ ಪಡೆದಿದ್ದರು. ಸ್ಪರ್ಧೆಯ ನಂತರ ಪೆಂಡಾಲ್ ಬಳಿ ಬಂದು ನಿಂತಿರುವಾಗ ಅವರ ಅರಿವಿಗೆ ಬಾರದಂತೆ ಗ್ರೇಟ್ ಡೆನ್ ಶ್ವಾನಕ್ಕೆ ಈ ವ್ಯಕ್ತಿ ಇಂಜೆಕ್ಷನ್ ನೀಡಿದ್ದಾನೆ. ಇದನ್ನು ಸ್ಥಳೀಯರು ಗಮನಿಸಿ ಕೂಗಿದಾಗ ಆತ ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದಾನೆ. ತರುವಾಯ ಆತನನ್ನು ಹಿಡಿದು ಯಾವ ಇಂಜೆಕ್ಷನ್ ಕೊಟ್ಟಿದ್ದೀಯಾ, ಏಕೆ ಹೀಗೆ ಮಾಡಿದ್ದೀಯಾ ಎಂದು ಪ್ರಶ್ನಿಸಿದಾಗ ಆತ ತಪ್ಪಾಯಿತು ಬಿಟ್ಟು ಬಿಡಿ ಎಂದು ಗೋಗರೆದಿದ್ದಾನೆ. ನಂತರ ಆತ ನೀಡಿದ ಮಾಹಿತಿ ಮೇರೆಗೆ ಪೆಂಡಾಲ್‌ನ ಮತ್ತೊಂದು ತುದಿಗೆ ಬಂದು ನೋಡಿದಾಗ ಡಬ್ಬವೊಂದಕ್ಕೆ ಖಾಲಿ ಸಿರಿಂಜ್‌ಗಳನ್ನು ಚುಚ್ಚಿ ಸ್ಟೋರ್ ಮಾಡಿರುವುದು ಪತ್ತೆಯಾಯಿತು. ತರುವಾಯ ಆತನನ್ನು ದೇವರಾಜ ಪೊಲೀಸ್ ಠಾಣೆ ಪೊಲೀಸರಿಗೆ ಒಪ್ಪಿಸಲಾಯಿತು. ಈತ ಶ್ವಾನಕ್ಕೆ ಖಾಲಿ ಸಿರಿಂಜನ್ನು ಇಂಜೆಕ್ಟ್ ಮಾಡಿದ್ದ ಎಂದು ಮೂಲಗಳು ತಿಳಿಸಿವೆ.











ದಸರಾ 10 ಕಿಮೀ ಓಟದ ಸ್ಪರ್ಧೆಯಲ್ಲಿ ಸಾವಿರಾರು ಮಂದಿ ಭಾಗಿ



ದಸರಾ ಮಹೋತ್ಸವದ ಅಂಗವಾಗಿ ಭಾನುವಾರ ಆಯೋಜಿಸಿದ್ದ 10 ಕಿ.ಮೀ. ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಸ್ಪರ್ಧಿಗಳು.



15 ರಿಂದ 45 ವರ್ಷದೊಳಗಿನ ಮಹಿಳಾ ವಿಭಾಗದ ಓಟದ ಸ್ಪರ್ಧೆಯಲ್ಲಿ ವಿಜೇತರಾದ ಸಿ.ಪೂರ್ಣಿಮಾ ಪ್ರಥಮ, ಅಶ್ವಿನಿ ಪೊಲೀಸ್ ದ್ವಿತೀಯ, ಎಸ್.ಜಯಶ್ರೀ ತೃತೀಯ ಬಹುಮಾನ ಪಡೆದರು.



15ರಿಂದ 45 ವರ್ಷದೊಳಗಿನ ಪುರುಷರ ವಿಭಾಗದ ಓಟದ ಸ್ಪರ್ಧೆಯಲ್ಲಿ ವಿಜೇತರಾದ ಗುರುಪ್ರಸಾದ್ ರಾಕಿ ಪ್ರಥಮ, ಆರ್.ಪುರುಷೋತ್ತಮ್ ದ್ವಿತೀಯ, ಕಾರ್ತಿಕ್ ಪಾಟೀಲ್ ತೃತೀಯ ಬಹುಮಾನ ಪಡೆದರು.

ಮೈಸೂರು,ಸೆ.28(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರಲ್ಲಿ ಭಾನುವಾರ ಆಯೋಜಿಸಿದ್ದ 10 ಕಿಮೀ ಓಟದ ಸ್ಪರ್ಧೆಯಲ್ಲಿ 1700ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಗಮನ ಸೆಳೆದರೆ, ಪುರುಷರ ವಿಭಾಗದಲ್ಲಿ ಗುರುಪ್ರಸಾದ್ ರಾಕಿ, ಮಹಿಳೆಯರ ವಿಭಾಗದಲ್ಲಿ ಸಿ.ಪೂರ್ಣಿಮಾ ವೇಗದ ಓಟಗಾರರೆನಿಸಿ ಪ್ರಶಂಸೆಗೆ ಪಾತ್ರರಾದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮೈಸೂರಿನ ನಜ್ಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 10 ಕಿಮೀ ಓಟದ ಸ್ಪರ್ಧೆಯಲ್ಲಿ 15ರಿಂದ 45 ವರ್ಷದ ಹಾಗೂ 45 ವರ್ಷ ಮೇಲ್ಪಟ್ಟ ಮಹಿಳಾ ಮತ್ತು ಪುರುಷರ ಓಟಗಾರರು ಸ್ಪರ್ಧೆಯಲ್ಲಿ ಪಾಲ್ಗೊಂಡು ನಿರಾಯಾಸವಾಗಿ 10 ಕಿ.ಮೀ. ದೂರವನ್ನು ಕ್ರಮಿಸಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು.

ಚಾಮುಂಡಿವಿಹಾರ ಕ್ರೀಡಾಂಗಣದ ಬಳಿ ಓಟದ ಸ್ಪರ್ಧೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಆರ್.ಚೇತನ್ ಹಸಿರು ನಿಶಾನೆ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಆರಂಭವಾದ ಓಟದ ಸ್ಪರ್ಧೆಯಲ್ಲಿ ಭಾಗಿಯಾಗಿದ್ದ ಸ್ಪರ್ಧಿಗಳು ನಜ್ಜರ್‌ಬಾದ್ ವೃತ್ತ, ವಸಂತಮಹಲ್ ರಸ್ತೆ, ಮಿರ್ಜಾ ರಸ್ತೆ, ಹಾರ್ಡಿಂಜ್ ಸರ್ಕಲ್, ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜ ವೃತ್ತ, ಕೆ.ಆರ್. ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಹಳೆ ಜಿಲ್ಲಾಧಿಕಾರಿ ಕಚೇರಿ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ವಿನೋಬಾ ರಸ್ತೆ(ಹುಣಸೂರು ರಸ್ತೆ), ಕಲಾಮಂದಿರದ ಪಕ್ಕ ರಸ್ತೆ ಕುಕ್ಕರಹಳ್ಳಿ ಕೆರೆ ಜಂಕ್ಷನ್, ಕಾಂತರಾಜ ಅರಸ್ ರಸ್ತೆ, ಫೈರ್ ಬ್ರಿಗೇಡ್, ಏಕಲವ್ಯ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬಿ.ಎನ್. ರಸ್ತೆ, ಹಾರ್ಡಿಂಗ್ ವೃತ್ತಕ್ಕೆ ಬಂದು ಮತ್ತೆ ಮಿರ್ಜಾ ರಸ್ತೆ, ವಸಂತ್‌ಮಹಲ್ ರಸ್ತೆ ಮೂಲಕ ಚಾಮುಂಡಿವಿಹಾರ ಕ್ರೀಡಾಂಗಣ ತಲುಪಿ ಓಟದ ಸ್ಪರ್ಧೆ ಅಂತ್ಯಗೊಂಡಿತು.



45 ವರ್ಷ ಮೇಲ್ಪಟ್ಟ ಓಟದ ಸ್ಪರ್ಧೆಯಲ್ಲಿ ವಿಜೇತರಾದ ಓಟಗಾರರು.

ನಾಲ್ಕು ವಿಭಾಗದಲ್ಲಿ ನಡೆದ ಓಟದ ಸ್ಪರ್ಧೆಯಲ್ಲಿ 1700ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಎಲ್ಲರಿಗೂ ಇಲಾಖೆ ವತಿಯಿಂದ ಟಿ-ಶರ್ಟ್ ವಿತರಿಸಲಾಗಿತ್ತು. ಪ್ರಥಮ ಚಿಕಿತ್ಸೆ ನೀಡುವ ಸೌಲಭ್ಯದೊಂದಿಗೆ ಆರೋಗ್ಯ ಸಿಬ್ಬಂದಿಗಳ ತಂಡ, ಓಟದ ಮಾರ್ಗದ ಸೂಚನೆ ನೀಡಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಕ್ರೀಡಾ ದಸರಾ ಉಪಸಮಿತಿ ಕಾರ್ಯಾಧ್ಯಕ್ಷ ಜಿತೇಂದ್ರಶೆಟ್ಟಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್‌ನಾಯಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಫಲಿತಾಂಶ

ಪುರುಷರ ವಿಭಾಗ: 15ರಿಂದ 45 ವರ್ಷದೊಳಗಿನ ಪುರುಷರ ವಿಭಾಗದ ಓಟದ ಸ್ಪರ್ಧೆಯಲ್ಲಿ ಗುರುಪ್ರಸಾದ್ ರಾಕಿ ಪ್ರಥಮ(0.31:22), ಆರ್.ಪುರುಷೋತ್ತಮ್ ದ್ವಿತೀಯ(0.31:50), ಕಾರ್ತಿಕ್ ಪಾಟೀಲ್ ತೃತೀಯ(0.32:31) ಬಹುಮಾನ ಪಡೆದರು. ಪ್ರಥಮ ಬಹುಮಾನ 10 ಸಾವಿರ ರೂ, ದ್ವಿತೀಯ ಬಹುಮಾನ 7 ಸಾವಿರ ರೂ ಹಾಗೂ ತೃತೀಯ ಬಹುಮಾನ 5 ಸಾವಿರ ರೂ. ನಗದು ನೀಡಲಾಯಿತು. ಈ ವಿಭಾಗದಲ್ಲಿ 4ರಿಂದ 10 ಸ್ಥಾನ ಪಡೆದ ಅಭ್ಯರ್ಥಿಗಳಿಗೆ ತಲಾ 1 ಸಾವಿರ ರೂ. ನಗದುಳ್ಳ ಪ್ರೋತ್ಸಾಹದಾಯಕ ಬಹುಮಾನ ನೀಡಲಾಯಿತು.

ಮಹಿಳಾ ವಿಭಾಗ: 15 ರಿಂದ 45 ವರ್ಷದೊಳಗಿನ ಮಹಿಳಾ ವಿಭಾಗದ ಓಟದ ಸ್ಪರ್ಧೆಯಲ್ಲಿ ಸಿ.ಪೂರ್ಣಿಮಾ ಪ್ರಥಮ(0.41:16), ಅಶ್ವಿನಿ ಪೊಲೀಸ್ ದ್ವಿತೀಯ(0.41:39), ಎಸ್.ಜಯಶ್ರೀ ತೃತೀಯ(0.42:57) ಬಹುಮಾನ ಪಡೆದರು. ಪ್ರಥಮ ಬಹುಮಾನ 10 ಸಾವಿರ ರೂ, ದ್ವಿತೀಯ ಬಹುಮಾನ 7 ಸಾವಿರ ರೂ ಹಾಗೂ ತೃತೀಯ ಬಹುಮಾನ 5 ಸಾವಿರ ರೂ. ನಗದು ನೀಡಲಾಯಿತು. ಈ ವಿಭಾಗದಲ್ಲಿ 4ರಿಂದ 10 ಸ್ಥಾನ ಪಡೆದ ಅಭ್ಯರ್ಥಿಗಳಿಗೆ ತಲಾ 1 ಸಾವಿರ ರೂ. ನಗದುಳ್ಳ ಪ್ರೋತ್ಸಾಹದಾಯಕ ಬಹುಮಾನ ನೀಡಲಾಯಿತು.

45 ವರ್ಷ ಮೇಲ್ಪಟ್ಟ ಪುರುಷರ ವಿಭಾಗದ ಓಟದ ಸ್ಪರ್ಧೆಯಲ್ಲಿ ಟಿ.ಹೆಚ್.ಗಣೇಶ್ ಪ್ರಥಮ(0.40:53), ಬಿ.ಪಿ.ಪೊನ್ನಪ್ಪ ದ್ವಿತೀಯ(0.46:06), ಡಾ.ಕೆ.ಆರ್.ರಾಮಕೃಷ್ಣಯ್ಯ ತೃತೀಯ(0.47:00) ಬಹುಮಾನ ಪಡೆದರೆ, 45 ವರ್ಷ ಮೇಲ್ಪಟ್ಟ ಮಹಿಳೆಯ ವಿಭಾಗದ ಓಟದ ಸ್ಪರ್ಧೆಯಲ್ಲಿ ಎಸ್.ಶ್ಯಾಮಲ ಪ್ರಥಮ(0.54:49), ಬೀನಾ ಫರ್ನಾಂಡಿಸ್ ದ್ವಿತೀಯ(0.55:48) ಹಾಗೂ ಎಸ್.ಆರ್.ಶೋಭಾ ತೃತೀಯ (0.56:39) ಬಹುಮಾನ ಪಡೆದರು. ಈ ವಿಭಾಗದ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರಥಮ ಬಹುಮಾನ 10 ಸಾವಿರ ರೂ, ದ್ವಿತೀಯ ಬಹುಮಾನ 7 ಸಾವಿರ ರೂ ಹಾಗೂ ತೃತೀಯ ಬಹುಮಾನ 5 ಸಾವಿರ ರೂ. ನಗದು ನೀಡಲಾಯಿತು.

ಮಡಿಕೇರಿ ದಸರಾ ಜನೋತ್ಸವಕ್ಕೆ ಚಾಲನೆ

ದಶ ಮಂಟಪಗಳ ಶೋಭಾಯಾತ್ರೆಗೆ ದಿನಗಣನೆ

ಮಡಿಕೇರಿ,ಸೆ.28– ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾ ಜನೋತ್ಸವಕ್ಕೆ ಕರಗ ಹೊರಡಿಸುವ ಮೂಲಕ ಚಾಲನೆ ದೊರೆತಿದ್ದು, ದಸರಾ ಮುಖ್ಯ ಆಕರ್ಷಣೆಯಾದ ದಶ ಮಂಟಪಗಳ ಶೋಭಾ ಯಾತ್ರೆಗೆ ದಿನ ಗಣನೆ ಆರಂಭವಾಗಿದೆ.

ದಶ ಮಂಟಪ ಸಮಿತಿಗಳು ಅತೀ ಉತ್ಸಾಹದಿಂದ ಮಂಟಪಗಳನ್ನು ಹೊರ ತರಲು ಸಿದ್ದತೆ ನಡೆಸುತ್ತಿದ್ದರೆ, ಈ ಉತ್ಸಾಹಕ್ಕೆ ಮಳೆ ತಣ್ಣೀರು ಎರೆಚುತ್ತಿದೆ. ಬಹುತೇಹ ಮಂಟಪ ಸಮಿತಿಗಳು ವಿಶಾಲ ರಸ್ತೆಗಳಲ್ಲಿ ಮಂಟಪ ತಯಾರಿಸುತ್ತಿದ್ದು, ಮಳೆಯಿಂದ ಸಿದ್ದತಾ ಕಾರ್ಯಗಳಿಗೆ ತೀವ್ರ ಅಡ್ಡಿ ಉಂಟಾಗುತ್ತಿದೆ. ಟ್ರ್ಯಾಕ್ಟರ್ ಸೆಟ್ಟಿಂಗ್, ಫ್ಲಾಟ್ ಫಾರ್ಮ್, ವೆಲ್ಡಿಂಗ್, ಟ್ರಾಲಿ ಅಳವಡಿಕೆ, ಲಿಫ್ಟಿಂಗ್ ಕ್ರೇನ್ ಅಳವಡಿಕೆ ಸಹಿತ ವಿವಿಧ ತಾಂತ್ರಿಕ ಕೆಲಸಗಳಿಗೆ ಮಳೆ ತೊಂದರೆ ನೀಡುತ್ತಿದೆ. ಈ ನಡುವೆಯೇ ಮಂಟಪ ಸಮಿತಿ ಸದಸ್ಯರು ಕೂಡ ಪಾದರಸ ಮಾದರಿಯಲ್ಲಿ ಶೋಭಾ ಯಾತ್ರೆಗೆ ತಮ್ಮ ಮಂಟಪಗಳನ್ನು ಸದ್ದಿಲ್ಲದೇ ತಯಾರಿಸುತ್ತಿದ್ದಾರೆ.

ಟಾರ್ಪಲ್ ಅಡಿಯಲ್ಲಿ ಮಂಟಪ: ದಶ ಮಂಟಪಗಳು ಮಳೆಯಿಂದ ರಕ್ಷಣೆ ಪಡೆಯಲು ಟಾರ್ಪಲ್‌ಗಳ ಮೊರೆ ಹೋಗಲಾಗಿದೆ. ಬೃಹತ್ ಟಾರ್ಪಲ್‌ಗಳನ್ನು ಮಂಟಪಗಳ ಮೇಲೆ ಹೊದಿಸಿಕೊಂಡು ಅದರ ಕೆಳ ಭಾಗ ಕಲಾಕೃತಿಗಳನ್ನು ಅಳವಡಿಸುವ ಕಾರ್ಯ ನಡೆಸುತ್ತಿದ್ದಾರೆ. ಈಗಾಗಲೇ ಒಂದು ಹಂತದಲ್ಲಿ ಕಲಾಕೃತಿಗಳಿಗೆ ಕಥಾ ಸಾರಾಂಶಕ್ಕೆ ಅನುಗುಣವಾಗಿ ಬಣ್ಣಗಳನ್ನು ಬಳಿಯಲಾಗಿದ್ದು, ಮಳೆಯಿಂದ ಕಲಾಕೃತಿಗಳನ್ನು ರಕ್ಷಿಸಿಕೊಳ್ಳುವುದು ಸಮಿತಿಗಳಿಗೆ ದೊಡ್ಡ ತಲೆ ನೋವಾಗಿ ಪರಿಣಮಿಸಿವೆ. ಪ್ರತಿ ಕಲಾಕೃತಿಗೂ ಕೂಲ್ ಫಯರ್, ಸ್ಟುಡಿಯೋ ಸೆಟ್ಟಿಂಗ್, ಲೈಟ್‌ಗಳನ್ನು ಇನ್ನಷ್ಟೇ ಅಳವಡಿಸಬೇಕಿದ್ದು, ಮಳೆಯಿಂದ ಈ ಕಾರ್ಯ ತಡವಾಗುತ್ತಿದೆ.

ದಶ ಮಂಟಪಗಳ ಸಿದ್ಧತೆಗೆ ಅಡ್ಡಿಯಾಗಿರುವ ಮಳೆ



ಶೋಭಾಯಾತ್ರೆಗೆ ಭರದ ಸಿದ್ದತೆ: ದಶ ಮಂಟಪ ಸಮಿತಿಗಳು ಕಳೆದ 2 ತಿಂಗಳ ಹಿಂದೆಯೇ ಪುರಾಣಗಳಿಂದ ಆಯ್ದ ಕಥಾ ಸಾರಾಂಶಗಳನ್ನು ಮಂಟಪಗಳಲ್ಲಿ ಅಳವಡಿಸಲು ಕಾರ್ಯ ಪ್ರವೃತ್ತರಾಗಿದ್ದಾರೆ. ದಶ ಮಂಟಪ ಸಮಿತಿಗಳ ಸದಸ್ಯರು ಈಗಾಗಲೇ ಶೇ.50ರಷ್ಟು ಮಂಟಪಗಳ ಸಿದ್ದತೆ ನಡೆಸಿದ್ದಾರೆ. ಹಗಲು ರಾತ್ರಿಯ ಪರಿವೇ ಇಲ್ಲದೇ ನೂರಾರು ಯುವಕರು, ಮಂಟಪ ತಂತ್ರಜ್ಞರು ಹಾಗೂ ಕಲಾಕೃತಿಗಳನ್ನು ನಿರ್ಮಿಸುವ ಕಲಾವಿದರು ತಮ್ಮ ಗೋಡೌನ್‌ಗಳಲ್ಲಿ ಶೋಭಾ ಯಾತ್ರೆಗೆ ಬೇಕಾದ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ.

ಶೋಭಾಯಾತ್ರೆಯ ಸಂದರ್ಭ ವಿವಿಧ ಮಂಟಪಗಳ ನಡುವೆ ತೀವ್ರ ಪೈಪೋಟಿ ಏರ್ಪಡುವುದು ಖಚಿತ ಎಂದು ಕಂಡು ಬರುತ್ತಿದ್ದು, ಇದರಿಂದಾಗಿ ದಸರಾ ವೀಕ್ಷಿಸಲು ಆಗಮಿಸುವ ಮಂದಿಗೆ ದೈವೀ ಲೋಕವೇ ಧರೆಗೆ ಇಳಿದು ಬಂದ ಅನುಭವವಾಗಲಿದೆ. ಮಂಟಪಗಳ ಸಿದ್ದತೆ ನೋಡಿಕೊಂಡು ಈ ಬಾರಿ ನಮ್ಮ ಮಂಟಪಕ್ಕೆ ಪ್ರಶಸ್ತಿ ಶತಃ ಸಿದ್ದ ಎಂಬುದು ದಶ ಮಂಟಪ ಸಮಿತಿಗಳ ವಾದವಾಗಿದೆ. ನಗರದ ಪೇಟೆ ಶ್ರೀರಾಮ ಮಂದಿರ, ದೇಚೂರು ಶ್ರೀ ರಾಮ ಮಂದಿರ ಮಂಟಪಗಳು ಮಾತ್ರವೇ ಸ್ಪರ್ಧೆಯಿಂದ ಹೊರಗುಳಿದಿವೆ. ಇನ್ನುಳಿದ 8 ಮಂಟಪಗಳು ಬಹುಮಾನಕ್ಕಾಗಿ ಪೈಪೋಟಿ ನಡೆಸಲಿವೆ.

ಲಕ್ಷಾಂತರ ರೂ. ವೆಚ್ಚ: ದಶ ಮಂಟಪ ಸಮಿತಿಗಳು ತಮ್ಮ ಮಂಟಪಗಳನ್ನು ಅದ್ದೂರಿಯಾಗಿ ಶೋಭಾಯಾತ್ರೆ ನಡೆಸಲು ಕನಿಷ್ಠ 10 ಲಕ್ಷದಿಂದ 50 ಲಕ್ಷ ರೂ.ಗಳವರೆಗೆ ವೆಚ್ಚ ಮಾಡುತ್ತಿವೆ. ಮಂಟಪ ಸಮಿತಿಗಳ ಹಣ, ಸಾರ್ವಜನಿಕರಿಂದ ವಂತಿಗೆ ಸಂಗ್ರಹ, ದಾನಿಗಳ ನೆರವು ಮತ್ತು ಮಂಟಪಗಳಿಗೆ ಮಡಿಕೇರಿ ದಸರಾ ಸಮಿತಿ ಒದಗಿಸುವ ಅನುದಾನಗಳು ಮಂಟಪ ಸಮಿತಿಗಳ ಹೊರೆಯನ್ನು ತುಸು ಕಡಿಮೆ ಮಾಡಲಿದೆ ಎನ್ನಲಾಗಿದೆ.

ಅ.19ರಿಂದ ಅಂತರ್ ಕೊಡವ ಕ್ರಿಕೆಟ್ ಪಂದ್ಯಾವಳಿ



ಕೊಡವ ಕ್ರಿಕೆಟ್ ಅಕಾಡೆಮಿ ಉಪಾಧ್ಯಕ್ಷ ಚೇರಂಡ ಕಿಶನ್ ಪೋಸ್ಟರ್ ಬಿಡುಗಡೆಗೊಳಿಸಿದರು.

ವಿರಾಜಪೇಟೆ,ಸೆ.28– ಕೊಡವ ಜನಾಂಗದ ಕ್ರೀಡಾ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಸಲುವಾಗಿ ಮತ್ತು ಕ್ರಿಕೆಟ್‌ನಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಕೊಡವ ಕ್ರಿಕೆಟ್ ಅಕಾಡೆಮಿ ವತಿಯಿಂದ ಅ.19 ರಿಂದ ಅಂತರ್‌ಕೊಡವ ಸಮಾಜಗಳ ನಡುವೆ ಲೆದರ್‌ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಕೀತಿಯಂಡ ಎನ್.ಕಾರ್ಯಪ್ಪ ತಿಳಿಸಿದ್ದಾರೆ.

ಕೊಡವ ಕ್ರಿಕೆಟ್ ಅಕಾಡೆಮಿ ವಿರಾಜಪೇಟೆ ವತಿಯಿಂದ ನಗರದ ವಿಕ್ಟೋರಿಯ ಕ್ಲಬ್ ಸಭಾಂಗಣದಲ್ಲಿ ಅಂತರ್ ಕೊಡವ ಸಮಾಜಗಳ ನಡುವೆ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಸಂಸ್ಥೆಯು 1996 ರಲ್ಲಿ ಸ್ಥಾಪನೆಯಾಗಿ ಅಂತರ್ ಕೊಡವ ಸಮಾಜಗಳ ನಡುವೆ ಪ್ರಥಮ ಬಾರಿಗೆ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಿಕೊಂಡು ಬರುತ್ತಿದೆ. ನಂತರದಲ್ಲಿ ರಣಜಿ, ಅಂತರ್ ಜಿಲ್ಲಾ ರಾಜ್ಯ ಮಟ್ಟ ಹಾಗೂ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಗಳನ್ನು ಗಮನದಲ್ಲಿಟ್ಟುಕೊಂಡು ಮೂರು ವರ್ಷಗಳಿಂದ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಿಕೊಂಡು ಬರುತ್ತಿದೆ ಎಂದರು.

ಕೊಡವ ಕ್ರಿಕೆಟ್ ಅಕಾಡೆಮಿ ಉಪಾಧ್ಯಕ್ಷ ಚೇರಂಡ ಕಿಶನ್ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿ, ಕೊಡವ ಕ್ರಿಕೆಟ್ ಅಕಾಡೆಮಿ ವತಿಯಿಂದ ನಡೆಸುತ್ತಿರುವ ಮೂರನೇ ವರ್ಷದ ಅಂತರ್ ಕೊಡವ ಸಮಾಜಗಳ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಗಳನ್ನು ಅ.19 ರಿಂದ 22 ರವರೆಗೆ ವಿರಾಜಪೇಟೆ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ. ಇದು ಕೊಡಗು ಜಿಲ್ಲೆಯ ಕೊಡವ ಜನಾಂಗದ ಕ್ರೀಡಾ ಪಟುಗಳಿಗೆ ಮಾತ್ರ ಸೀಮಿತವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೊಡವ ಕ್ರಿಕೆಟ್ ಅಕಾಡೆಮಿ ಕಾರ್ಯದರ್ಶಿ ಕುಪ್ಪಂಡ ದೀಲನ್ ಬೋಪಣ್ಣ, ಖಜಾಂಚಿ ಕೊಕ್ಕೆಂಗಡ ರಂಜನ್, ನಿರ್ದೇಶಕರಾದ ಪಟ್ಟಡ ಪ್ರಕಾಶ್, ಕೀತಿಯಂಡ ವಿವೇಕ್, ಮಾಚಂಗಡ ದರ್ಶನ್ ಸೋಮಣ್ಣ, ಬಾಳೆಯಡ ಪ್ರತೀಶ್ ಪೂವಯ್ಯ, ಕೊಟ್ಟಂಗಡ ಸುರಜ್ ಮಾದಪ್ಪ ಉಪಸ್ಥಿತರಿದ್ದರು.

ಮುಂದುವರೆದ ವನ್ಯಜೀವಿ–ಮಾನವ ಸಂಘರ್ಷ

ಮಡಿಕೇರಿ: ವಿರಾಜಪೇಟೆ ಸಮೀಪದ ಬೊಳ್ಳರಿಮಾಡು ಗ್ರಾಮದ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಕಳೆದ 2 ವರ್ಷಗಳಿಂದ ಈ ವ್ಯಾಪ್ತಿಯಲ್ಲಿ ವನ್ಯಜೀವಿ–ಮಾನವ ಸಂಘರ್ಷ ನಿರಂತರವಾಗಿದೆ. ಕಳೆದ 3 ತಿಂಗಳ ಹಿಂದೆ ಹುಲಿ ದಾಳಿಗೆ ಕರು ಬಲಿಯಾಗಿದ್ದರೆ, 6 ತಿಂಗಳ ಹಿಂದೆ ಹಸು ಬಲಿಯಾಗಿತ್ತು. ಇದೀಗ ಬೊಳ್ಳರಿಮಾಡು ಗ್ರಾಮದಲ್ಲಿ ಕಾಡಾನೆ ಹಾಗೂ ಹುಲಿ ಕಾಫಿ ತೋಟದಲ್ಲಿ ಪ್ರತ್ಯಕ್ಷವಾಗುತ್ತಿದ್ದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಬಿದ್ದಂಡ ಕರುಂಬಯ್ಯ ಅವರ ತೋಟದಲ್ಲಿ ಬಾಳೆ ಗಿಡ ಹಾಗೂ ಸಿ.ಸಿ ಕ್ಯಾಮರಾ, ಕಬ್ಬಿಣದ ಗೇಟ್ ಸೇರಿದಂತೆ ಕಾಫಿ ಗಿಡಗಳನ್ನು ಕಾಡಾನೆಗಳು ಧ್ವಂಸ ಮಾಡಿವೆ.

ಅಲ್ಲದೇ ಲೈನ್ ಮನೆಯ ಬಳಿಯಿದ್ದ ಇನ್ನೊಂದು ತೋಟಕ್ಕೆ ತೆರಳಿದ್ದು, ಲೈನ್ ಮನೆಯಲ್ಲಿ ವಾಸವಾಗಿದ್ದ ಕಾರ್ಮಿಕರು ಜೀವ ಭಯದಲ್ಲಿ ರಾತ್ರಿ ಕಳೆದಿದ್ದಾರೆ. ಬೆಳಗಿನ ಜಾವ ಮಾಲೀಕರು ಕಾಡಾನೆ ಧ್ವಂಸ ಮಾಡಿದ ಸ್ಥಳವನ್ನು ಪರಿಶೀಲಿಸಿದಾಗ ಹುಲಿಯ ಹೆಜ್ಜೆ ಗುರುತು ಪತ್ತೆಯಾಗಿದೆ. ಗ್ರಾಮದಲ್ಲಿ ವನ್ಯಜೀವಿಗಳ ಹಾವಳಿಯಿಂದ ಯಾವುದೇ ಕೃಷಿ ಮಾಡಲು ಸಾಧ್ಯವಾಗುತ್ತಿಲ್ಲ, ಗ್ರಾಮದಲ್ಲಿ 2 ಮರಿ ಹಾಗೂ ತಾಯಿ ಆನೆ ಭತ್ತದ ಗದ್ದೆ, ಕಾಫಿ ತೋಟಗಳಲ್ಲಿ ದಾಳಿ ಮಾಡಿ ಅಪಾರ ಪ್ರಮಾಣದ ಬೆಳೆಯನ್ನು ನಾಶ ಮಾಡುತ್ತಿದೆ. ಅರಣ್ಯ ಇಲಾಖೆ ವನ್ಯ ಪ್ರಾಣಿಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ವಿರಾಜಪೇಟೆ ವಿಭಾಗದ ಇಟಿಎಫ್, ವಿರಾಜಪೇಟೆ, ಅಮ್ಮತ್ತಿ, ಪಾಲಂಗಾಲ ವಲಯದ ಆರ್‌ಆರ್‌ಟಿ ತಂಡದ 35 ಸಿಬ್ಬಂದಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಕ್ಷಣವೇ ಕಾರ್ಯಾಚರಣೆ ನಡೆಸುವುದಾಗಿ ಅರಣ್ಯ ಇಲಾಖೆಯ ಅಧಿಕಾರಿ ಶಿವರಾಮ್ ತಿಳಿಸಿದರು.



ಕಾಡು ಪ್ರಾಣಿ ದಾಳಿಗೊಳಗಾದ ಪ್ರದೇಶ ಪರಿಶೀಲಿಸುತ್ತಿರುವುದು.

ಅನಧಿಕೃತ ಶೆಡ್‌ಗಳ ತೆರವಿಗೆ ನೋಟಿಸ್

ಮಡಿಕೇರಿ:ನಗರಸಭೆ ವ್ಯಾಪ್ತಿಯ ಸಾರಿಗೆ ಬಸ್ ಡಿಪೋ ಎದುರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ 3 ಶೆಡ್‌ಗಳ ನಿರ್ಮಾಣಕ್ಕೆ ತಾತ್ಕಾಲಿಕ ಅನುಮತಿ ಪಡೆದು ಅನಧಿಕೃತವಾಗಿ ಹೆಚ್ಚುವರಿಯಾಗಿ ನಿರ್ಮಿಸಲಾದ ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸುವಂತೆ ಸಂಬಂಧಿಸಿದವರಿಗೆ ಮಡಿಕೇರಿ ನಗರಸಭೆಯ ಪೌರಾಯುಕ್ತರು ನೋಟಿಸ್ ನೀಡಿದ್ದಾರೆ.

ಅನಧಿಕೃತ ವಾಣಿಜ್ಯ ಶೆಡ್‌ಗಳನ್ನು ನಿರ್ಮಿಸಿಕೊಂಡು ರಸ್ತೆ ಜಾಗವನ್ನು ಬಳಸಿಕೊಂಡು ನಗರಸಭೆ ಪರವಾನಿಗೆ ಇಲ್ಲದೇ ವ್ಯವಹಾರ ಮಾಡುತ್ತಿರುವುದನ್ನು ಪ್ರಶ್ನಿಸಿ ಕಾನೂನು ಕ್ರಮ ವಹಿಸಲು ಕೊಡಗು ಅಭಿವೃದ್ಧಿ ಸಮಿತಿ ಮಡಿಕೇರಿ ಸೆ.11ರಂದು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿತ್ತು. ಹೆಚ್ಚುವರಿಯಾಗಿ ನಿರ್ಮಿಸಿದ ಶೆಡ್‌ಗಳನ್ನು 7 ದಿನದ ಒಳಗೆ ತೆರವುಗೊಳಿಸುವಂತೆ ಸೂಚಿಸಲಾಗಿದೆ.

ಮಳೆ ವಾತಾವರಣದ ನಡುವೆ ಸಂಭ್ರಮದ ಮಹಿಳಾ ದಸರಾ

ಕ್ರಿಯಾಶೀಲತೆ, ಪ್ರತಿಭಾ ಅನಾವರಣಕ್ಕೆ ವೇದಿಕೆಯಾದ ಕಾರ್ಯಕ್ರಮ

ಮಡಿಕೇರಿ,ಸೆ.28– ಕಾರ್ಮೋಡಗಳು, ಆಗಿಂದಾಗ್ಗೆ ಸುರಿದ ಬಿರುಸಿನ ಮಳೆಯ ವಾತಾವರಣದ ನಡುವೆ ನಗರದ ಗಾಂಧಿ ಮೈದಾನದಲ್ಲಿ ಮಡಿಕೇರಿ ದಸರಾ ಭಾಗವಾಗಿರುವ ಮಹಿಳಾ ದಸರಾ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಮಹಿಳೆಯರಲ್ಲಿ ಕ್ರಿಯಾಶೀಲತೆಗೆ ಒತ್ತು ನೀಡಿ, ಅವರಲ್ಲಿನ ಪ್ರತಿಭಾ ಅನಾವರಣಕ್ಕೆ ಪೂರಕವಾಗಿ ಸಂಭ್ರಮದಿಂದ ನಡೆಯಿತು.

ಮಡಿಕೇರಿ ನಗರ ದಸರಾ ಸಮಿತಿ, ದಸರಾ ಸಾಂಸ್ಕೃತಿಕ ಸಮಿತಿಯ ಸಂಯುಕ್ತಾಶ್ರಯದಲ್ಲಿ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಆಯೋಜಿತ ಮಹಿಳಾ ದಸರಾ ಸಮಾರಂಭವನ್ನು ಪದ್ಮಶ್ರೀ ಐಮುಡಿಯಂಡ ರಾಣಿ ಮಾಚಯ್ಯ, ದಸರಾ ಸಮಿತಿಯ ಅಧ್ಯಕ್ಷರು ಹಾಗೂ ನಗರಸಭಾ ಅಧ್ಯಕ್ಷರೂ ಆದ ಪಿ.ಕಲಾವತಿ ಮತ್ತು ಸಮಿತಿಯ ಪದಾಧಿಕಾರಿಗಳೊಂದಿಗೆ ಶ್ರೀಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ, ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು. ದಸರಾ ಉತ್ಸವದ ಭಾಗವೇ ಆಗಿರುವ ಮಹಿಳಾ ದಸರಾ ಉತ್ಸವದಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳುವ ಮೂಲಕ ತಮ್ಮ ಪ್ರತಿಭೆಯನ್ನು ತೋರಬೇಕೆಂದು ರಾಣಿ ಮಾಚಯ್ಯ ಕರೆ ನೀಡಿದರು.

ನಿರೀಕ್ಷೆಯ ಪ್ರೋತ್ಸಾಹ ಅಗತ್ಯ: ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮಾಜಿ ಎಂಎಲ್‌ಸಿ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿ, ಐತಿಹಾಸಿಕ ಮಡಿಕೇರಿ ದಸರಾ ಉತ್ಸವ ಯಶಸ್ವಿಯಾಗಿ ನಡೆಯುವುದಕ್ಕೆ ಪೂರಕವಾಗಿ ಶಾಸಕರು ಮುತುವರ್ಜಿ ವಹಿಸಿ ಸರ್ಕಾರದಿಂದ ಅಗತ್ಯ ಅನುದಾನವನ್ನು ಒದಗಿಸಿದ್ದಾರೆ. ಹೀಗಿದ್ದೂ ದಸರಾ ಕಾರ್ಯಕ್ರಮಗಳ ವ್ಯವಸ್ಥಿತ ಆಯೋಜನೆಗೆ ಅಗತ್ಯವಾದ ಪೂರ್ವ ಭಾವಿ ಸಭೆಗಳು, ಸಿದ್ಧತೆಗಳು ನಡೆಯದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಮಹಿಳಾ ದಸರಾಕ್ಕೆ ನಿರೀಕ್ಷಿತ ಪ್ರೋತ್ಸಾಹ ದೊರಕುತ್ತಿಲ್ಲ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ದಸರಾ ಉತ್ಸವದ 'ಮಹಿಳಾ ದಸರಾ' ಈ ದಿನದ ಕಾರ್ಯಕ್ರಮಗಳಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳಬೇಕು. ಮಹಿಳೆಯರಿಗೆ ತಮ್ಮ ಪ್ರತಿಭೆಯನ್ನು ತೋರಲು ಇರುವ ವೇದಿಕೆ. ಇಂತಹ ಮಹಿಳಾ ದಸರಾ ನಿರಂತರವಾಗಿ ಮುಂದುವರೆಯಬೇಕೆನ್ನುವ ಆಶಯವನ್ನು ವ್ಯಕ್ತಪಡಿಸಿದರು.

ಸಾಮರ್ಥ್ಯವನ್ನು ಗುರುತಿಸುವ ದಿನ: ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೂಡಿಗೆ ಕ್ರೀಡಾ ಶಾಲೆಯ ನಿವೃತ್ತ ಪ್ರಾಂಶುಪಾಲರಾದ ಕುಂತಿ ಬೋಪಯ್ಯ ಮಾತನಾಡಿ, ಮಹಿಳಾ ದಸರಾ ಎನ್ನುವುದು ಮಹಿಳೆಯರ ಶಕ್ತಿ ಸಾಮರ್ಥ್ಯವನ್ನು, ಕೌಶಲ್ಯವನ್ನು ಗೌರವಿಸುವ ದಿನ ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ಮಡಿಕೇರಿ ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕುಡೆಕಲ್ ಸಂತೋಷ್ ಮಾತನಾಡಿ, ಈ ಬಾರಿ ಮಹಿಳಾ ದಸರಾ ಉತ್ಸವದ ಆಯೋಜನೆಯನ್ನು ಅತ್ಯಂತ ತರಾತುರಿಯಲ್ಲಿ, ಗೊಂದಲಗಳಿಂದ ಆಯೋಜಿಸುವಂತಾಯಿತು ಎಂದು ತಿಳಿಸಿದರು. ಸಭಾಧ್ಯಕ್ಷತೆ ವಹಿಸಿದ್ದ ನಗರಸಭಾ ಅಧ್ಯಕ್ಷೆ ಪಿ.ಕಲಾವತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಭಾರ ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ಸವಿತಾ ಸಿ.ಪಿ. ಅವರು ಮಾತನಾಡಿದರು.

ಸಾಧಕ ಮಹಿಳೆಯರಿಗೆ ಸನ್ಮಾನ: ಸಮಾರಂಭದಲ್ಲಿ ಸಾಧಕ ಮಹಿಳೆಯರಾದ ಅಂಗನವಾಡಿ ಕಾರ್ಯಕರ್ತೆಯರಾದ ಸುಜಾತ, ರೋಹಿಣಿ ಎಂ.ಎ, ಚೈತ್ರ ಪಿ.ವಿ, ಆಶಾ ಕಾರ್ಯಕರ್ತೆಯರಾದ ಚಂದ್ರಾವತಿ ಹೆಚ್.ಎಂ, ಸುರಭಿ, ಅನಿತಾ ರೈ, ಎಂ.ಸಿ. ಚೆನ್ನಮ್ಮ, ಮಡಿಕೇರಿ ನಗರಸಭಾ ಪೌರ ಕಾರ್ಮಿಕರಾದ ಕೆಂಗೇರಿ ಲಕ್ಷ್ಮಮ್ಮ, ಗಿರಿಜಮ್ಮ, ಬಿ.ಲಕ್ಷ್ಮಿ, ಕಸ್ತೂರಿ ಅವರನ್ನು ಸನ್ಮಾನಿಸಲಾಯಿತು.



ಹೆಬ್ಬಸೂರು ಶೃಂಗೇರಿ ಶಾಖ ಮಠದಲ್ಲಿ ಶರನ್ನವರಾತ್ರಿ ಪೂಜೆ

ಚಾಮರಾಜನಗರ, ಸೆ.28– ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾ ಸಂಸ್ಥಾನ ದಕ್ಷಿಣಾಮ್ನಾಯಿ ಶ್ರೀ ಶಾರದಾ ಪೀಠಂ(ಶೃಂಗೇರಿ)ನ ಹೆಬ್ಬಸೂರು ಶಾಖೆ ವತಿಯಿಂದ ಮಹಾಲಯ ಅಮಾವಾಸ್ಯೆ, ಶರನ್ನವರಾತ್ರಿ ಉತ್ಸವ ಹಾಗೂ ಶ್ರೀ ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ಆರಾಧನೆ ಪ್ರಾರಂಭವಾಗಿದ್ದು, ಅ.2ರವರೆಗೆ ನಡೆಯಲಿದೆ.

ಸೆ.21ರಂದು ಮಹಾಲಯ ಅಮಾವಾಸ್ಯೆ, ಸೆ.22ರಂದು ಅಶ್ವಯುಜ ಶುದ್ಧ ಪಾಡ್ಯ ದಿನಗಳಂದು ಮಹಾಭಿಷೇಕ ಶ್ರೀ ಚಂದ್ರಮೌಳೇಶ್ವರ ಪೂಜೆ, ಲಕ್ಷಾರ್ಚನೆ ಮಹಾ ಮಂಗಳಾರತಿ, ಅನ್ನ ಸಂತರ್ಪಣೆ, ಉಯ್ಯಾಲೋತ್ಸವ ಕಾರ್ಯಕ್ರಮಗಳು ನಡೆಯಿತು.

ಸೆ.29ರಂದು ಬೆಳಗ್ಗೆ 7.30 ಗಂಟೆಗೆ ಸರಸ್ವತಿ ಹೋಮ ಮತ್ತು ಮಹಾಗಣಪತಿ ಹೋಮ, ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಮತ್ತು ಸಂಜೆ ಭರತನಾಟ್ಯ ಕಾರ್ಯಕ್ರಮವಿರಲಿದೆ.

ಸೆ.30ರಂದು ಬೆಳಗ್ಗೆ 7.30 ದುರ್ಗಾ ಹೋಮ, ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಯೋಗ ಮಾಡಲಾಗುವುದು. ಅ.2ರಂದು ಬೆಳಗ್ಗೆ 7.30 ಕ್ಕೆ ನವಚಂಡಿಕಾ ಯಾಗ, ಮಧ್ಯಾಹ್ನ 12ಗಂಟೆಗೆ ಪೂರ್ಣಾಹುತಿ, ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ, ಸಂಜೆ 7.30ಕ್ಕೆ ಉಯ್ಯಾಲೋತ್ಸವ ನಡೆಯಲಿದೆ. ಅ.7ರಂದು ಶುದ್ಧ ಪೂರ್ಣಿಮಾ ದಿನದಂದು ಬೆಳಗ್ಗೆ 9ಗಂಟೆಯಿಂದ ಶ್ರೀರಾಮ ದೇವರಿಗೆ ವಿಶೇಷ ಪೂಜೆ ನಡೆಯಲಿದೆ.

ಮಧ್ಯಾಹ್ನ 12.30ಗಂಟೆಗೆ ಮಹಾ ಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಮಾಡಲಾಗುವುದು ಎಂದು ಶ್ರೀ ಶಾರದಾ ಪೀಠಂ ಪ್ರಕಟಣೆ ತಿಳಿಸಿದೆ.

ಪಕ್ಷ ವಿರೋಧಿ ಚಟುವಟಿಕೆ ಆರೋಪ

ಬಿಜೆಪಿಯಿಂದ 10 ಮಂದಿ ನಗರ ಸಭೆ ಸದಸ್ಯರ ಉಚ್ಚಾಟನೆ



ಶಿವಕುಮಾರ್ ನಾಗೇಂದ್ರ ಧರಣೇಶ್ ಪ್ರಕಾಶ್ ರಾಮಕೃಷ್ಣ



ನಾಸಿರ್‌ಷರೀಫ್ ಮಾನಸ ಪವಿತ್ರ ನಾಗಸುಂದ್ರಮ್ಮ ಕವಿತಾ

ಚಾಮರಾಜನಗರ: ಕೊಳ್ಳೇಗಾಲ ನಗರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳೊಂದಿಗೆ ಕೈಜೋಡಿಸಿ, ಪಕ್ಷದ ವಿಪ್ ಉಲ್ಲಂಘಿಸಿದ್ದಾರೆಂಬ ಆರೋಪಕ್ಕೊಳಗಾದ ನಗರದ ಒಬ್ಬರು ಹಾಗೂ ಕೊಳ್ಳೇಗಾಲದ 10 ಮಂದಿ ನಗರಸಭೆ ಸದಸ್ಯರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟನೆ ಮಾಡಿದೆ.

ಚಾಮರಾಜನಗರ ನಗರಸಭೆಯ ಬಿಜೆಪಿ ಸದಸ್ಯರಾದ ಮಹದೇವಯ್ಯ ಹಾಗೂ ಕೊಳ್ಳೇಗಾಲ ನಗರಸಭೆಯ ಬಿಜೆಪಿ ಸದಸ್ಯರಾದ ಜಿ.ಪಿ.ಶಿವಕುಮಾರ್, ನಾಗೇಂದ್ರ ಧರಣೇಶ್, ಪ್ರಕಾಶ್, ರಾಮಕೃಷ್ಣ, ನಾಸಿರ್ ಷರೀಫ್, ಮಾನಸ ಪ್ರಭುಸ್ವಾಮಿ, ಶ್ರೀಮತಿ ಪವಿತ್ರ ನಾಗಸುಂದ್ರಮ್ಮ ಜಗದೀಶ್, ಕವಿತಾ ಅವರನ್ನು ತತ್‌ಕ್ಷಣದಿಂದಲೇ 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಗಿದ್ದೇನು?: 2024ರ ಸೆ.9ರಂದು ನಡೆದ ಚಾಮರಾಜನಗರ ನಗರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನದ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ನಗರಸಭೆ ಸದಸ್ಯ ಮಹದೇವಯ್ಯ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಿದ್ದರು.

2024 ಸೆ.5ರಂದು ನಡೆದ ಕೊಳ್ಳೇಗಾಲ ನಗರಸಭೆ ಚುನಾವಣೆಯಲ್ಲಿಯೂ ಬಿಜೆಪಿ ಸದಸ್ಯರು ಪಕ್ಷದ ಸೂಚನೆಗೆ ವಿರುದ್ಧವಾಗಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಕಾರಣರಾಗಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ 11 ಸದಸ್ಯರ ವಿರುದ್ಧವಾಗಿ ಪಕ್ಷದ ರಾಜ್ಯದ ವರಿಷ್ಠರ ಗಮನಕ್ಕೆ ತರಲಾಗಿತ್ತು ಬಳಿಕ ಈ ಬಗ್ಗೆ ಪರಿಶೀಲಿಸಿ ಪಕ್ಷದ ರಾಜ್ಯ ಶಿಸ್ತು ಸಮಿತಿಯ ಸೂಚನೆಯ ಮೇರೆಗೆ ಎಲ್ಲಾ ಸದಸ್ಯರನ್ನು 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ ಮಾಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಇತಿಹಾಸ ಗೊತ್ತಿಲ್ಲದವರಿಂದ ದಸರಾ ಉತ್ಸವ ಸ್ಥಗಿತ

ಹಿರಿಯ ಸಾಹಿತಿ ಪ್ರೊ.ಮಹದೇವ ಶಂಕನಪುರ ಕಿಡಿ

ಚಾಮರಾಜನಗರ, ಸೆ.28– ಚಾಮರಾಜನಗರ ಜಿಲ್ಲಾ ಇತಿಹಾಸ ಗೊತ್ತಿಲ್ಲದವರು ನಿರ್ಣಾಯಕ ಸ್ಥಾನದಲ್ಲಿ ಇದ್ದುದರಿಂದ ಜಿಲ್ಲಾ ದಸರಾ ಉತ್ಸವ ಸ್ಥಗಿತಗೊಂಡಿದೆ ಎಂದು ಹಿರಿಯ ಸಾಹಿತಿ ಪ್ರೊ.ಮಹದೇವ ಶಂಕನಪುರ ಕಿಡಿಕಾರಿದರು.

ನಗರದ ರೋಟರಿ ಭವನದಲ್ಲಿ ಚಾಮರಾಜನಗರ ಜಿಲ್ಲಾ ಲೇಖಕರ ಸಂಘದಿಂದ ನಡೆದ ದಸರಾ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವ ಸರ್ಕಾರವು ಚಾಮರಾಜನಗರದಲ್ಲಿ ದಸರಾ ಆರಂಭಿಸಿತ್ತೊ, ಅವರದೇ ಸರ್ಕಾರ ದಸರಾ ನಿಲ್ಲಿಸಿ ಅಪಕೀರ್ತಿ ಹೊಂದಿದೆ. ಜನರ ತೆರಿಗೆ ಹಣದಿಂದ ಮೋಜು ಮಾಡುವ ಮಂತ್ರಿಗಳು, ಶಾಸಕರು, ಅಧಿಕಾರಿಗಳು ದಸರಾ ಉತ್ಸವವನ್ನು ಇಲ್ಲಿನ ಜನರಿಂದ ಬಲವಂತವಾಗಿ ಕಿತ್ತುಕೊಂಡಿದ್ದಾರೆ. ಒಡೆಯರ ಇತಿಹಾಸವೇ ಇಲ್ಲದ ತುಮಕೂರಿನಂತಹ ಜಿಲ್ಲೆಗಳಿಗೆ ದಸರಾ ಉತ್ಸವವನ್ನು ವರ್ಗಾಯಿಸಿದ್ದಾರೆ. ಇದು ಖಂಡನೀಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ದಸರಾ ನಡೆಸದೇ ಹೋದರೂ ಚಾಮರಾಜನಗರ ಜಿಲ್ಲಾ ಲೇಖಕರ ಸಂಘದಿಂದ ದಸರಾ ಕವಿಗೋಷ್ಠಿ ನಡೆಸುತ್ತಿರುವುದು ಸ್ವಾಗತಾರ್ಹ. ಈ ಪರಂಪರೆ ಬೆಳೆಯಲಿ. ಸರ್ಕಾರಗಳು ಬರುತ್ತವೆ, ಹೋಗುತ್ತವೆ ಇಲ್ಲಿನ ನಾಗರಿಕರು ಮಾತ್ರ ದೀರ್ಘಕಾಲ ನೆಲೆಸಿರುತ್ತಾರೆ. ಸಾಕಷ್ಟು ಸಂಖ್ಯೆಯಲ್ಲಿ ಕವಿಗಳು ಭಾಗವಹಿಸಿದ್ದೀರಿ. ಕಾವ್ಯ ಅರಿತವಾಗಲಿ, ನಮ್ಮನ್ನಾಳುವ ಜನರನ್ನು ಎಚ್ಚರಿಸಲಿ, ವೈಚಾರಿಕತೆ ಕವನದ ಕೇಂದ್ರವಾಗಲಿ ಎಂದರು.

ನಂತರ ಸಾಹಿತಿ ಮದ್ದೂರು ದೊರೆಸ್ವಾಮಿ ಮಾತನಾಡಿ, ಇಲ್ಲಿ ನಡೆಯುತ್ತಿರುವ ದಸರಾ ಕವಿಗೋಷ್ಠಿಯು ಯಾರು ವಿರುದ್ಧವೂ ಅಲ್ಲ. ಯಾರು ಪರವೂ ಅಲ್ಲ. ಜಿಲ್ಲೆಯ ಕವಿಗಳನ್ನು ಒಗ್ಗೂಡಿಸಿ ದಸರಾ ಸಂಭ್ರಮದಲ್ಲಿ ಕವಿತೆ ವಾಚಿಸುವ ಸಂದರ್ಭವಷ್ಟೇ ಎಂದರು.

ಕವಿಗೋಷ್ಠಿಯಲ್ಲಿ ಶೀಲಾ ಸತ್ಯೇಂದ್ರಸ್ವಾಮಿ, ಕಾತ್ಯಾಯಿನಿ, ಕೋಮಲಾ, ಕೃಷ್ಣಕುಮಾರ್, ಸುಂದರ ಕಲಿವೀರ, ಶಶಿಕಲಾ, ಪ್ರೇಮಾ, ಸಿದ್ದಲಿಂಗಸ್ವಾಮಿ, ಫೈರೋಜ್‌ಖಾನ್, ಮಂಜುಳಾ ಉಪಾಧ್ಯಾಯಿನಿ, ಕಾವ್ಯ ಪ್ರಸಾದ್, ಮಂಜುನಾಥ್ ಸೇರಿದಂತೆ 32 ಕವಿಗಳು ಕವಿತೆ ವಾಚನ ಮಾಡಿದರು. ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಸೋಮಶೇಖರ ಬಿಸಲ್ವಾಡಿ, ದುಂಡಮಾದಯ್ಯ, ಧನಲಕ್ಷ್ಮೀ ಇದ್ದರು.



ಹಿರಿಯ ಸಾಹಿತಿ ಪ್ರೊ.ಮಹದೇವ ಶಂಕನಪುರ ಮಾತನಾಡುತ್ತಿರುವುದು.

ಠಾಣೆಗಳಲ್ಲಿ ಎಸ್‌ಸಿ, ಎಸ್‌ಟಿ ಸಭೆ ನಡೆಸಲು ಸೂಚನೆ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡುತ್ತಿರುವುದು.

ಚಾಮರಾಜನಗರ : ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕಡ್ಡಾಯವಾಗಿ ಎಸ್‌ಸಿ, ಎಸ್‌ಟಿ ಕುಂದು–ಕೊರತೆ ಸಭೆ ನಡೆಸಿ ಕುಂದುಕೊರತೆ ಆಲಿಸಬೇಕು ಎಂದು ಇನ್‌ಸ್ಪೆಕ್ಟರ್‌ಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಸೂಚಿಸಿದ್ದಾರೆ.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಎಸ್‌ಸಿ, ಎಸ್‌ಟಿ ಮುಖಂಡರ ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪೊಲೀಸ್ ಠಾಣೆಗಳಲ್ಲಿ ಕುಂದುಕೊರತೆ ಸಭೆ ನಡೆಸಿ ಪರಿಹರಿಸಬೇಕು. ನಿರ್ಲಕ್ಷ್ಯ ಮಾಡುವಂತಿಲ್ಲ ಎಂದು ತಾಕೀತು ಮಾಡಿದರು.

ಇದೇ ವೇಳೆ ಮುಖಂಡರಾದ ಸಿ.ಕೆ. ಮಂಜುನಾಥ್ ಮಾತನಾಡಿ, ಭೋಗಾಪುರದಲ್ಲಿ ಸ್ವಜಾತಿಯವರಿಂದಲೇ ಬಹಿಷ್ಕಾರ ಹಾಕಿರುವ ಪ್ರಕರಣ ದಾಖಲಾಗಿದೆ. ಆ ಬಗ್ಗೆ ಕ್ರಮ ವಹಿಸಬೇಕು. ಸಂತೇಮರಳ್ಳಿ ಜೋಡಿ ಕೊಲೆ ಪ್ರಕರಣದ ಒಬ್ಬ ಸಂತ್ರಸ್ತರಿಗೆ ಇನ್ನು ನೌಕರಿ ನೀಡಿಲ್ಲ ಎಂದು ಪ್ರಶ್ನಿಸಿದರು.

ಮತ್ತೊಬ್ಬ ಮುಖಂಡರಾದ ಭಾನುಪ್ರಕಾಶ್ ಮಾತನಾಡಿ, ಕೆ.ಆರ್.ನಗರದಲ್ಲಿ ದೌರ್ಜನ್ಯಕ್ಕೆ ಒಳಗಾಗಿ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ 10 ತಿಂಗಳೊಳಗೆ ಸರ್ಕಾರಿ ನೌಕರಿ ನೀಡಲಾಗಿದೆ. ಜೋಡಿ ಕೊಲೆ ಪ್ರಕರಣದ ಸಂತ್ರಸ್ತರ ವಿಚಾರದಲ್ಲಿ ವಿಳಂಬ ಮಾಡಲಾಗುತ್ತಿದೆ ಎಂದು ದೂರಿದರು.

ಇದೇ ವೇಳೆ ಚಾ.ನಗರದ ಮಂಜುನಾಥ್ ಮಾತನಾಡಿ, ಮೇಲ್ವರ್ಗದ ಯುವತಿಯನ್ನು ಪ್ರೀತಿಸಿ ಮದುವೆ ಆಗಿದ್ದೇನೆ. ಆದರೆ, ಆಕೆಯ ಕುಟುಂಬದವರು ನನಗೆ ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ. ಸೂಕ್ತ ರಕ್ಷಣೆ ನೀಡಬೇಕಾದ ಜಿಲ್ಲಾ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಇನ್‌ಸ್ಪೆಕ್ಟರ್ ಸರಿಯಾಗಿ ಸ್ಪಂದಿಸುತ್ತಿಲ್ಲ. ದೂರು ನೀಡಿದರೂ ಸಂಬಂಧಿಸಿದವರನ್ನು ಬಂಧಿಸುತ್ತಿಲ್ಲ ಎಂದು ತಿಳಿಸಿದರು.

ನಂತರ ಮುಖಂಡ ನಾಗಮಲ್ಲು ಮಾತನಾಡಿ, ಭೀಮನಬೀಡು ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದೆ. ಪೊಲೀಸರಿಗೆ ದೂರು ನೀಡಿದರೆ ಮಾರಾಟ ಮಾಡುವವರನ್ನು ನೀವೇ ತೋರಿಸಿ ಎನ್ನುತ್ತಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಡಿವೈಎಸ್‌ಪಿಗಳಾದ ಧರ್ಮೇಂದ್ರ, ಸ್ನೇಹರಾಜು, ಎಸ್‌ಸಿ–ಎಸ್‌ಟಿ ಮುಖಂಡರು, ಸಬ್‌ಇನ್‌ಸ್ಪೆಕ್ಟರ್‌ಗಳು ಹಾಜರಿದ್ದರು.

ವಿಭಾಗ ಮಟ್ಟಕ್ಕೆ ಆಯ್ಕೆಯಾದ ಪ್ರೌಢಶಾಲೆ



ಮದ್ದೂರು ಗ್ರಾಮದ ಪ್ರೌಢಶಾಲೆಯ ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಯಳಂದೂರು: ತಾಲೂಕಿನ ಮದ್ದೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಚಾಮರಾಜನಗರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ 2025ನೇ ಸಾಲಿನ ಜಿಲ್ಲಾಮಟ್ಟದ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ಮದ್ದೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭವಾಗಿ 18 ವರ್ಷ ಕಳೆದಿದೆ. ಇದೇ ಮೊದಲ ಬಾರಿಗೆ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಯಲ್ಲಿ ಉತ್ತಮ ಸಾಧನೆ ಮಾಡಿರುವುದಕ್ಕೆ ಮದ್ದೂರು ಗ್ರಾಮದ ಎಲ್ಲಾ ಗ್ರಾಮಸ್ಥರು ಹಾಗೂ ಶಾಲೆ ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಸಂತಸಗೊಂಡಿದ್ದಾರೆ.

ವಿಭಾಗ ಮಟ್ಟಕ್ಕೆ ಆಯ್ಕೆಯಾದ ಸರ್ಕಾರಿ ಪ್ರೌಢಶಾಲಾ ಮದ್ದೂರು ವಿದ್ಯಾರ್ಥಿಗಳಾದ ದಿಗಂತ್, ಗೌತಮ್, ಪೃಥ್ವಿ ಶ್ರೀನಿವಾಸ್, ಜಗದೀಶ್, ಆಕಾಶ್, ಪ್ರೀತಮ್, ದೈಹಿಕ ಶಿಕ್ಷಣ ಶಿಕ್ಷಕ ಶೇಷಾದ್ರಿ ನಾಗಶಿಲ್ಪ ಹಾಗೂ ಪುಷ್ಪ ನೀಡಿದ ಮುಖ್ಯ ಶಿಕ್ಷಕಿ ಕುಮಾರಿ, ಸಹಶಿಕ್ಷಕರಿಗೆ ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜು, ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿದರು.

ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷರ ಆಯ್ಕೆ

ಚಾಮರಾಜನಗರ : ಚಾಮರಾಜನಗರ ಗ್ರಾಮಾಂತರ ಮಂಡಲ ಅಧ್ಯಕ್ಷರನ್ನಾಗಿ ಶಿವರುದ್ರಸ್ವಾಮಿ (ಕಾಡಳ್ಳಿ ಕುಮಾರ್) ನೇಮಕಗೊಳಿಸಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ಆದೇಶಿಸಿದ್ದಾರೆ.



ಪಕ್ಷದ ಹೊಣೆಗಾರಿಕೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಾ ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಸದೃಢಗೊಳಿಸಬೇಕು ಎಂದು ಗ್ರಾಮಾಂತರ ಮಂಡಲದ ನೂತನ ಅಧ್ಯಕ್ಷರಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ತಿಳಿಸಿದ್ದಾರೆ.

ಕುರುಬ ಸಮುದಾಯ ಎಸ್ಟಿಗೆ ಸೇರ್ಪಡೆ ವಿರೋಧಿಸಿ ಇಂದು ಸತ್ಯಾಗ್ರಹ

ಚಾಮರಾಜನಗರ : ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವುದನ್ನು ವಿರೋಧಿಸಿ ಸೆ.29 ರಂದು ನಗರದ ಜಿಲ್ಲಾಡಳಿತ ಭವನದ ಎದುರು ಉಪವಾಸ ಸತ್ಯಾಗ್ರಹ ಮಾಡುವುದಾಗಿ ನಾಯಕ ಸಮುದಾಯದ ಮುಖಂಡ ಅಗರರಾಜು ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಯಿಂದ ಸಂಜೆಯ ತನಕ ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದು ಹೇಳಿದರು.

ಕುರುಬರ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವುದನ್ನು ತೀವ್ರವಾಗಿ ವಿರೋಧಿಸುತ್ತೇನೆ. 1976ರ ಅಸುಪಾಸಿನಲ್ಲಿ ಎಲ್.ಜಿ.ಹಾವನೂರು ವರದಿಕೊಟ್ಟು ಎಸ್‌ಟಿಯಲ್ಲಿರುವ ಕುರುಬ ಸಮುದಾಯವನ್ನು ಮುಂದುವರೆದಿದ್ದಾರೆ ಎಂದು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡಿದರು. 50 ವರ್ಷಗಳ ನಂತರ ಮತ್ತೆ ಹಿಂದುಳಿದಿದ್ದೇವೆ ಎಂದು ಕುರುಬ ಸಮುದಾಯ ಎಸ್ಟಿ ಸೇರ್ಪಡೆ ಮಾಡುವಂತೆ ಕೇಳುವುದು ಎಷ್ಟು ಸರಿ ಎಂದರು.

ಈಗಲು ಕೂಡ ಎಸ್ಟಿ ಪಟ್ಟಿಯಲ್ಲಿ ಬೆಟ್ಟ ಕುರುಬ, ಕಾಡು ಕುರುಬ, ಜೇನು ಕುರುಬ ಸಮುದಾಯಗಳು ಇವೆ ಈಗ ಪ್ರಸ್ತುತ ಕುರುಬ ಸಮುದಾಯದ ಸ್ಥಿತಿಗತಿಗಳು, ಎಸ್ಟಿ ಸಮುದಾಯದ 50 ಜಾತಿಗಳ ಸ್ಥಿತಿಗತಿಗಳು ಏನಿದೆ ಎಂಬುವುದನ್ನು ಅರಿಯಬೇಕು. ಕುರುಬ ಸಮುದಾಯದಲ್ಲಿ ಜಮೀನ್ದಾರು ಇದ್ದಾರೆ ಎಂದರು.

ರಾಜ್ಯದಲ್ಲಿ 2 ಬಾರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾರೆ. ಕುರುಬ ಸಮುದಾಯದವರಲ್ಲಿ 100 ಕುಟುಂಬ ಸಮೀಕ್ಷೆ ಮಾಡಿದ್ದಾರೆ. ಶೇ.80 ರಷ್ಟು ಜಮೀನ್ದಾರಿದ್ದಾರೆ. ಆದರೆ ಎಸ್ಟಿಯ 50 ಸಮುದಾಯಗಳನ್ನು ತೆಗೆದು ನೋಡಿದರೆ ಶೇ.80 ಭೂರಹಿತರು ಇದ್ದಾರೆ ಎಂದರು.

ಸಿದ್ದರಾಮಯ್ಯನವರು ಮುಂದಿನ ಚುನಾವಣೆಯ ದೃಷ್ಟಿಕೋನವನ್ನಿಟ್ಟುಕೊಂಡು ಈ ಹುನ್ನಾರ ಮಾಡುತಿದ್ದಾರೆ. ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕುರುಬ ಸಮುದಾಯವನ್ನು ಎಸ್ಟಿ ಪಟ್ಟಿಗೆ ಸೇರಿಸುವಂತೆ ಶಿಫಾರಸ್ಸು ಮಾಡಿದರೆ ಅದನ್ನು ಕೇಂದ್ರ ಸರ್ಕಾರ ಮಾಡುವುದಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ವೆಂಕಟಾಛಲ ಮದ್ದೂರು, ಕರ್ನಾಟಕ ಕಾವಲುಪಡೆ ಜಿಲ್ಲಾಧ್ಯಕ್ಷ ಪರಶಿವಮೂರ್ತಿ, ದೇವರಾಜು, ನಂಜುಂಡನಾಯಕ ಅಗರ ಹಾಜರಿದ್ದರು.



ಪತ್ರಿಕಾಗೋಷ್ಠಿಯಲ್ಲಿ ನಾಯಕ ಜನಾಂಗದ ಮುಖಂಡ ಅಗರರಾಜು ಮಾತನಾಡಿದರು.

ಆಧುನಿಕ ಯುಗದಲ್ಲಿ ಪುಸ್ತಕ ಪ್ರೇಮಿಗಳ ಸಂಖ್ಯೆ ಕ್ಷೀಣ



ಶ್ರೀರಂಗಪಟ್ಟಣದಲ್ಲಿ ಭಾನುವಾರ ಶಾಸಕ ರಮೇಶ್ ಬಂಡಿಸಿದ್ದೇಗೌಡ ಬುಟ್ಟಿಯಿಂದ ಪುಸ್ತಕವನ್ನು ತೆಗೆಯುವುದರ ಮೂಲಕ ದಸರಾ ಕವಿ-ಕಾವ್ಯ ಸಂಭ್ರಮ ಪ್ರಧಾನ ಕವಿಗೋಷ್ಠಿಯನ್ನು ಉದ್ಘಾಟಿಸಿದರು.

ಶ್ರೀರಂಗಪಟ್ಟಣ, ಸೆ.28– ಆಧುನಿಕ ಯುಗದಲ್ಲಿ ಪುಸ್ತಕ ಓದುಗರ ಸಂಖ್ಯೆ ಕುಗ್ಗುತ್ತಿದ್ದು, ಆಧುನಿಕ ತಂತ್ರಜ್ಞಾನದ ಮೂಲಕ ಓದುವ ಹವ್ಯಾಸಕ್ಕೆ ಕಟ್ಟು ಬೀಳುತ್ತಿದ್ದಾರೆ ಎಂದು ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ದಸರಾ ಕವಿ–ಕಾವ್ಯ ಸಂಭ್ರಮ ಪ್ರಧಾನ ಕವಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಆಧುನಿಕ ಸಾಧನಗಳಿಂದ ಓದುವುದು ಅಷ್ಟು ಖುಷಿಯನ್ನು ನೀಡುವುದಿಲ್ಲ ಎಂದರು.

ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷೆ ಡಾ. ಮೀರಾ ಶಿವಲಿಂಗಯ್ಯ ಮಾತನಾಡಿ, ಪಾಂಡಿತ್ಯ ಹೊಂದಿರುವವರು ತಮ್ಮ ಪಾಂಡಿತ್ಯವನ್ನು ಇತರರಿಗೆ ತಿಳಿಸದೆ ಹೋದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ, ಕವಿಗಳು ತಮ್ಮ ಕವಿತೆಗಳ ಮೂಲಕ ಸಮಾಜದ ಡೊಂಕುಗಳನ್ನು ತಿದ್ದಬೇಕು, ಕವಿಗೋಷ್ಠಿಗಳಿಂದ ಸಾಹಿತ್ಯದ ನವರಸಗಳನ್ನು ಸವಿಯಬಹುದು, ಕವಿಗೋಷ್ಠಿಗಳು ನಮ್ಮ ಜ್ಞಾನವನ್ನು ವೃದ್ಧಿಸುತ್ತದೆ ಎಂದು ಅಭಿಪ್ರಾಯಪಟ್ಟರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಲಿಂಗು, ಪುರಸಭೆ ಸದಸ್ಯ ಕೃಷ್ಣಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಬಿ ಕುಮಾರ್, ಪುರಸಭೆ ಪ್ರಭಾರ ಅಧ್ಯಕ್ಷ ಎಂ.ಎಲ್. ದಿನೇಶ್, ನಿಮಿಷಾಂಬ ದೇವಾಲಯದ ಅಧ್ಯಕ್ಷ ಎಚ್.ಎನ್. ದಯಾನಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ವಿ.ನಂದೀಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಶ್ರೀನಿವಾಸ, ಶ್ರೀರಂಗಪಟ್ಟಣ ನಗರ ಘಟಕದ ಅಧ್ಯಕ್ಷ ಎಂ.ಸುರೇಶ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚಂದ್ರಲಿಂಗು, ಪುರಸಭೆ ಸದಸ್ಯ ಕೃಷ್ಣಪ್ಪ, ಮಹಾದೇವ ಸ್ವಾಮಿ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ನಿಹಾನ್ ಶೋಟಕನ್ ಕರಾಟೆ ತರಬೇತಿ ಸಂಸ್ಥೆ ವಿದ್ಯಾರ್ಥಿನಿ ಹೇಮಾ ನಾಗರಾಜ್‌ರ ಕರಾಟೆ ಪ್ರದರ್ಶನ ನೆರೆದಿದ್ದ ಸಾರ್ವಜನಿಕರ ಹುಬ್ಬೇರಿಸುವಂತಿತ್ತು. ಹೇಮಾ ನಾಗರಾಜ್ ಹಾಗೂ ಕರಾಟೆ ತರಬೇತಿದಾರ ಅಶೋಕ್ ಅವರಿಗೆ ಶ್ರೀರಂಗಪಟ್ಟಣ ಪುರಸಭೆ ಸದಸ್ಯ ಕೃಷ್ಣಣ್ಣ ಅವರು ಗೌರವ ಸಮರ್ಪಣೆ ಮಾಡಿದರು.

ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ಶಿವಲಿಂಗಯ್ಯ, ಸಹಾಯಕ ನಿರ್ದೇಶಕ ಡಾ.ಪ್ರವೀಣ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ ವೇಣು ಇನ್ನಿತರರು ಉಪಸ್ಥಿತರಿದ್ದರು.

ವರ್ಣರಂಜಿತ ಶ್ರೀರಂಗಪಟ್ಟಣ ದಸರಾಗೆ ಅದ್ದೂರಿ ತೆರೆ

ಶ್ರೀರಂಗಪಟ್ಟಣ, ಸೆ.28–ಶ್ರೀರಂಗಪಟ್ಟಣದಲ್ಲಿ ನಡೆಯುತ್ತಿದ್ದ ದಸರಾ ಮಹೋತ್ಸವವು ಭಾನುವಾರ ಅದ್ದೂರಿಯಾಗಿ ತೆರೆ ಕಂಡಿತು.

ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದ ಶ್ರೀರಂಗ ವೇದಿಕೆಯಲ್ಲಿ ನಡೆದ ಶ್ರೀರಂಗಟ್ಟಣ ದಸರಾ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ಎನ್.ಚಲುವರಾಯಸ್ವಾಮಿ, ಮೈಸೂರು ಮಹಾರಾಜರು ಪ್ರಾರಂಭಿಸಿದ ಶ್ರೀರಂಗಪಟ್ಟಣ ದಸರಾವನ್ನು ಅಂದಿನಿಂದಲೂ ಯಶಸ್ವಿಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಾರಿಯ ದಸರಾ ಉದ್ಘಾಟನೆ ಮತ್ತು ಸಾಂಸ್ಕೃತಿ ಕಾರ್ಯಕ್ರಮ ಯಶಸ್ವಿಗೊಳ್ಳಲು ಸಹಕರಿಸಿದವರಿಗೆ ಧನ್ಯವಾದ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಮಳೆ, ಬೆಳೆ ಮತ್ತು ಧಾರ್ಮಿಕ ಆಚರಣೆಗೆ ಕೊರತೆಯಿಲ್ಲ ಎಂದರೆ ತಪ್ಪಾಗುವುದಿಲ್ಲ. ಪ್ರಥಮ ಬಾರಿಗೆ ಗಂಗಾ ಆರತಿ ರೀತಿಯಲ್ಲಿ ಕಾವೇರಿ ಆರತಿಯನ್ನು ರಾಜ್ಯದಲ್ಲಿ ಪ್ರಾರಂಭಿಸಿ ಯಶಸ್ವಿಯಾಗಿ ಆಚರಿಸಲಾಗಿದೆ ಎಂದು ಹೇಳಿದರು.



ಶ್ರೀರಂಗಪಟ್ಟಣ ದಸರಾ ಯಶಸ್ಸಿಗೆ ಕಾರಣರಾದ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿಯವರನ್ನು ಜಿಲ್ಲಾಧಿಕಾರಿ ಡಾ. ಕುಮಾರ್ ಸನ್ಮಾನಿಸಿದರು.

ನಮ್ಮೆಲ್ಲರ ಭಾಗ್ಯ ದೇವತೆ ಕಾವೇರಿ ಮಾತೆಯನ್ನು ಪೂಜಿಸುವುದು ನಮ್ಮೆಲ್ಲರ ಕರ್ತವ್ಯ ಆದ್ದರಿಂದ ಕಾವೇರಿ ಆರತಿಯನ್ನು ಪ್ರಾರಂಭಿಸಲಾಗಿದೆ. ಕೆಆರ್‌ಎಸ್‌ನಲ್ಲಿ ಇನ್ನೂ ಎರಡು ದಿನಗಳ ಕಾಲ ಕಾವೇರಿ ಆರತಿ ನಡೆಯಲಿದ್ದು, ಸಾರ್ವಜನಿಕರು ಹೆಚ್ಚಾಗಿ ಆಗಮಿಸಿ ಕಣ್ತುಂಬಿಸಿಕೊಳ್ಳಿ ಎಂದರು.

ಶಾಸಕ ರಮೇಶ ಬಂಡಿಸಿದ್ದೇಗೌಡ ಮಾತನಾಡಿ, ಶ್ರೀರಂಗಪಟ್ಟಣ ದಸರಾ–2025 ಸತತ ನಾಲ್ಕು ದಿನಗಳ ಕಾಲ ಯಶಸ್ವಿಯಾಗಿ ಜರುಗಿದೆ. ಶ್ರೀರಂಗಪಟ್ಟಣ ದಸರಾ ಅಚ್ಚುಕಟ್ಟಾಗಿ ನಡೆಯಲು ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ತಿಳಿಸಿದರು.

ಪ್ರಮುಖವಾಗಿ ಊಟದ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಕೊರತೆಯೂ ಕಂಡು ಬಂದಿಲ್ಲ. ರಂಗನಾಥಸ್ವಾಮಿ ಮತ್ತು ನಿಮಿಷಾಂಬ ದೇವಸ್ಥಾನದಲ್ಲಿ ದಸರಾ ಸಮಯದಲ್ಲಿ ಊಟದ ವ್ಯವಸ್ಥೆ ಒದಗಿಸುವಲ್ಲಿ ಅಚ್ಚುಕಟ್ಟಾಗಿ ಕೆಲಸ ನಿಬಾಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷ ಸಿ.ಡಿ ಗಂಗಾಧರ, ಕಿರಂಗೂರು ಗ್ರಾಪಂ ಅಧ್ಯಕ್ಷೆ ಆರ್. ರೂಪ ಪ್ರಭಾಕರ್, ಸಣ್ಣ ಕೈಗಾರಿಕೆ ರಾಜ್ಯ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮತ್ತು ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ಪಾಂಡವಪುರ ಉಪ ವಿಭಾಗಾಧಿಕಾರಿ ಶ್ರೀನಿವಾಸ್, ಶ್ರೀರಂಗಪಟ್ಟಣ ತಹಶೀಲ್ದಾರ್ ಚೇತನ ಯಾಧವ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ದ್ವಿಚಕ್ರ ವಾಹನಕ್ಕೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ; ಮೂವರು ಯುವಕರ ದುರ್ಮರಣ

ಹಾಸನ,ಸೆ.28– ದ್ವಿಚಕ್ರ ವಾಹನ ಮತ್ತು ಸರ್ಕಾರಿ ಬಸ್ಸಿನ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಮೂವರು ಸಾವಿಗೀಡಾಗಿರುವ ಭೀಕರ ಘಟನೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಯಡೆಗೌಡನಹಳ್ಳಿ ಬಳಿ ಶನಿವಾರ ರಾತ್ರಿ ನಡೆದಿದೆ.

ಮೃತರನ್ನು ಹೊಳೆನರಸೀಪುರ ಪಟ್ಟಣದ ಹೇಮಾವತಿ ಬಡಾವಣೆಯ ತರುಣ್(19), ರೇವಂತ್(26) ಹಾಗೂ ಗಾಂಧಿನಗರ ಬಡಾವಣೆಯ ಇರ್ಫಾನ್(20) ಎಂದು ಗುರುತಿಸಲಾಗಿದೆ. ಹಾಸನದಿಂದ ಮೈಸೂರು ಕಡೆಗೆ ಹೊರಟಿದ್ದ ಸಾರಿಗೆ ಬಸ್ ಮತ್ತು ಮೈಸೂರು ಕಡೆಯಿಂದ ಬರುತ್ತಿದ್ದ ದ್ವಿಚಕ್ರ ವಾಹನ ಮಧ್ಯೆ ಡಿಕ್ಕಿ ಸಂಭವಿಸಿದೆ.

ಪರಿಣಾಮ ಸ್ಥಳದಲ್ಲಿಯೇ ಇರ್ಫಾನ್ ಸಾವಿಗೀಡಾಗಿದ್ದು, ಗಂಭೀರವಾಗಿ ಗಾಯಗೊಂಡಿದ್ದ ರೇವಂತ್ ಹಾಗೂ ತರುಣ್ ಅವರನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಇಬ್ಬರು ಕೊನೆಯುಸಿರೆಳೆದಿದ್ದಾರೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು, ಗಾಯಗೊಂಡ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲು ಮಾಡಿ, ಮೃತಪಟ್ಟ ಇರ್ಫಾನ್ ಅನ್ನು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಿದ್ದರು.

ಆಸ್ಪತ್ರೆಗೆ ದಾಖಲಾದ ಇಬ್ಬರೂ ಮೃತಪಟ್ಟ ಹಿನ್ನೆಲೆಯಲ್ಲಿ ಮರಣೋತ್ತರ ಪರೀಕ್ಷೆಗಾಗಿ ಮೂವರ ಮೃತದೇಹಗಳನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಈ ಸಂಬಂಧ ಹಳ್ಳಿಮೈಸೂರು ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಅನ್ನಭಾಗ್ಯ, ಶಕ್ತಿ ಯೋಜನೆಯಲ್ಲಿ ಬದಲಾವಣೆ ತರಲು ಚಿಂತನೆ: ಡಿ.ಕೆ.ಶಿವಕುಮಾರ್

ರಾಮನಗರ, ಸೆ.28: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳ ಪೈಕಿ ಅನ್ನಭಾಗ್ಯ ಮತ್ತು ಶಕ್ತಿ ಯೋಜನೆಗಳು ದುರುಪಯೋಗ ಆಗುತ್ತಿರುವುದು ಗಮನಕ್ಕೆ ಬಂದಿದೆ. ಇದಕ್ಕೆ ಕಡಿವಾಣ ಹಾಕಲು ಯೋಜನೆಗಳಲ್ಲಿ ಕೆಲ ಬದಲಾವಣೆ ತರಲು ಚಿಂತನೆ ಮಾಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾದರೆ, ಶಕ್ತಿ ಯೋಜನೆಯಲ್ಲಿ ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರು ಸಾರಿಗೆ ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಇಂತಹ ಕೆಲವು ಪ್ರಕರಣಗಳನ್ನು ಪರಿಶೀಲನೆ ಮಾಡುತ್ತಿದ್ದು, ಕೆಲವೊಂದು ಬದಲಾವಣೆ ತರಲು ಉದ್ದೇಶಿಸಲಾಗಿದೆ ಎಂದರು.

ಗ್ಯಾರಂಟಿ ಕಿತ್ತಾಕಲು ಬಿಜೆಪಿ ಷಡ್ಯಂತ್ರ: ಪಂಚ ಗ್ಯಾರಂಟಿ ಯೋಜನೆಗಳು ಜನರ ಬದುಕಿನ ದಿಕ್ಕನ್ನೇ ಬದಲಾಯಿಸಿದೆ. ಒಂದೆಡೆ ಪ್ರಧಾನಿ ಮೋದಿಯವರು ಹಲವು ರಾಜ್ಯಗಳಲ್ಲಿ ಗ್ಯಾರಂಟಿ ಕಾರ್ಯಕ್ರಮ ಗಳನ್ನು ಕಾಪಿ ಮಾಡುತ್ತಿದ್ದಾರೆ. ಬಿಹಾರ, ಮಹಾರಾಷ್ಟ್ರ ರಾಜ್ಯಗಳಲ್ಲಿ ಮಹಿಳೆಯರಿಗೆ ಹಣ ಕೊಡುತ್ತಿದ್ದಾರೆ. ಇಲ್ಲಿನ ಬಿಜೆಪಿ ನಾಯಕರು ತಮ್ಮ ಸರ್ಕಾರ ಬಂದರೆ ಎಲ್ಲ ವನ್ನೂ ರದ್ದು ಮಾಡುವುದಾಗಿ ಹೇಳುತ್ತಿ ದ್ದಾರೆ. ಇಂಟರ್‌ನಲ್ ಮೀಟಿಂಗ್ ಮಾಡಿ ಗ್ಯಾರಂಟಿ ಕಿತ್ತಾಕಲು ಷಡ್ಯಂತ್ರ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ನಾವು ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಕೆಲಸ ಮಾಡುತ್ತಿದ್ದೇವೆ ಎಂದರು.

ಪೌರಕಾರ್ಮಿಕರಿಗೆ ದಿನಸಿ ಕಿಟ್ ವಿತರಣೆ



ಸ್ವಚ್ಛತಾ ಕಾರ್ಯದಲ್ಲಿ ತೊಡಗಿ ಸರ್ವರ ಆರೋಗ್ಯ ರಕ್ಷಣೆ ಮಾಡುತ್ತಿರುವ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ರಾಕೇಶ್ ಪಾಪಣ್ಣ ದಿನಸಿ ಕಿಟ್ ನೀಡುವ ಮೂಲಕ ಪೌರಕಾರ್ಮಿಕರಿಗೆ ಶುಭ ಕೋರಿದರು. ಈ ವೇಳೆ ರಕ್ಷಿತ್ ಎಂ ಗೌಡ, ರವಿ, ಸ್ವಾಮಿ, ಗುರುಮೂರ್ತಿ ಉಪಸ್ಥಿತರಿದ್ದರು.

ಪುಸ್ತಕ ಬಿಡುಗಡೆ



ಮೈಸೂರು ದಸರಾ ಮಹೋತ್ಸವ ಕನ್ನಡ ಪುಸ್ತಕ ಮೇಳದಲ್ಲಿ ಲೇಖಕರಾದ ಡಾ.ನರಸಿಂಹಮೂರ್ತಿ ಹೂವಿನಹಳ್ಳಿ ಅವರ ತುಂಬಿ ಬಂದಿತ್ತ ಬೇಂದ್ರೆ ಕಾವ್ಯದ ಅಧ್ಯಯನ, ಡಾ.ರೇಣುಕಾತಾಯಿ ಸಂತಬಾ ಅವರ ದಿಲ್ ಕಶ್ ಗಜಲ್ ಕೃತಿಗಳನ್ನು ಡಾ.ಬೋರೇಗೌಡ ಚಿಕ್ಕಮರಳಿ ಬಿಡುಗಡೆ ಮಾಡಿದರು. ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಉಪಸಮಿತಿ ಸದಸ್ಯರಾದ ರಂಗಕರ್ಮಿ ರಾಜಶೇಖರ ಕದಂಬ, ಎಂ.ಚಂದ್ರಶೇಖರ್, ಸಿ.ಡಿ.ಪರಶುರಾಮ್ ಉಪಸ್ಥಿತರಿದ್ದರು.

ಅಹಿಂದ ಮಹಿಳಾ ವಿಭಾಗಕ್ಕೆ ನೇಮಕ



ಮೈಸೂರು: ಕರ್ನಾಟಕ ಅಲ್ಪಸಂಖ್ಯಾತರ ಹಿಂದುಳಿದವರ ದಲಿತರ ಒಕ್ಕೂಟ(ಅಹಿಂದ)ದ ಮೈಸೂರು ಜಿಲ್ಲಾ ಮಹಿಳಾ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿ ನಂಜನಗೂಡು ತಾಲೂಕು ನೇರಳೆ ಗ್ರಾಮದ ಶ್ರೀಮತಿ ಚಂದ್ರಮ್ಮ ಜಿ. ಅವರನ್ನು ನೇಮಕ ಮಾಡಲಾಗಿದೆ ಎಂದು ಒಕ್ಕೂಟದ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಪತ್ರಕರ್ತರ ಸಮಸ್ಯೆಗಳಿಗೆ ಬೆನ್ನೆಲುಬಾಗಿ ನಿಲ್ಲುತ್ತೇನೆ

ನೂತನ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್

ಕೆ.ಆರ್.ನಗರ, ಸೆ.28– ರಾಜ್ಯದ ಪತ್ರಕರ್ತರ ಸಮಸ್ಯೆ, ದುಃಖ ದುಮ್ಮಾನಗಳಿಗೆ ಬೆನ್ನೆಲುಬಾಗಿ ನಿಲ್ಲುತ್ತೇನೆ ಎಂದು ನೂತನ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ತಿಳಿಸಿದರು.

ಪಟ್ಟಣದಲ್ಲಿ ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಪತ್ರಕರ್ತರು ಸಂಘಟನೆ ಮೂಲಕ ಒಗ್ಗೂಡಿ ಕಾರ್ಯ ನಿರ್ವಹಿಸಬೇಕಿದೆ. ಒಗ್ಗೂಡದಿದ್ದರೆ ಪತ್ರಕರ್ತರ ಬಗ್ಗೆ ಹಾದಿ ಬೀದಿಯಲ್ಲಿ ಮಾತನಾಡುತ್ತಾರೆ. ಆದ್ದರಿಂದ ಎಲ್ಲರೂ ಪತ್ರಿಕಾ ಧರ್ಮ ಕಾಪಾಡಿಕೊಂಡು ಹೋಗಿ ಎಂದರು.

ಪತ್ರಕರ್ತರ ಅನೇಕ ಸಮಸ್ಯೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ಪಂದಿಸುವ ಕೆಲಸ ಮಾಡಿದ್ದಾರೆ. ಈ ಹಿಂದೆ ಯಾವ ಮುಖ್ಯಮಂತ್ರಿಗಳು ಕೂಡ ಪತ್ರಕರ್ತರ ಇಷ್ಟೊಂದು ಬೇಡಿಕೆ ಈಡೇರಿಸಿಲ್ಲ. ಪತ್ರಕರ್ತರಿಗೆ ಆರೋಗ್ಯ ವಿಮೆ, ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ಹಾಗೂ 15 ಸಾವಿರ ಮಾಸಾಶನ ಸೇರಿದಂತೆ ಅನೇಕ ಸವಲತ್ತುಗಳನ್ನು ಕೊಡುಗೆ ನೀಡಿದ್ದಾರೆ ಎಂದರು.

ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದಿಂದ ಉತ್ತಮವಾಗಿ ಪತ್ರಕರ್ತರ ಭವನ ನಿರ್ಮಾಣ ಮಾಡಲಾಗಿದೆ. ಪೀಠೋಪಕರಣ ಹಾಗೂ ಮೇಲ್ಛಾವಣಿ ನಿರ್ಮಿಸಲು 5 ಲಕ್ಷ ಅನುದಾನ ನೀಡುವುದಾಗಿ ಭರವಸೆ ನೀಡಿದರು.



ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಲಾಯಿತು.

ಶಾಸಕ.ಡಿ.ರವಿಶಂಕರ್ ಮಾತನಾಡಿ, ಪತ್ರಕರ್ತರು ಪ್ರಜಾಪ್ರಭುತ್ವದ 4ನೇ ಅಂಗವಾಗಿದ್ದು ಇದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಿ ಎಂದರಲ್ಲದೆ ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕೆಲಸ ಮಾಡಿ ಎಂದರು.

ತಾಲೂಕಿನ ಪತ್ರಕರ್ತರು ಕ್ಷೇತ್ರದ ಅಭಿವೃದ್ಧಿಗೆ ನನ್ನ ಜೊತೆ ಕೈಜೋಡಿಸಿ ಎಂದು ಮನವಿ ಮಾಡಿದ ಶಾಸಕರು ಪತ್ರಕರ್ತರ ಸಂಘದ ಸದಸ್ಯರ ಸಮಸ್ಯೆಗೆ ಸದಾ ಸ್ಪಂದಿಸುವೆ ಎಂದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ಪ್ರಸ್ತುತ ನೈಜ ಪತ್ರಿಕೋದ್ಯಮದ ವ್ಯವಸ್ಥೆ ಇಲ್ಲದಾಗಿದ್ದು, ಪತ್ರಕರ್ತರಲ್ಲಿ ಗುಂಪುಗಳಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಎಲ್ಲಾ ರಂಗದಲ್ಲೂ ವ್ಯವಸ್ಥೆ ಹದಗೆಟ್ಟಿದೆ. ಮಾಧ್ಯಮ ಸಂಸ್ಥೆ ವ್ಯಾಪಾರ ವಹಿವಾಟು ಕೇಂದ್ರವಾಗಿದೆ. ಹಾಗಾಗಿ ನೈಜ ಪತ್ರಿಕೋದ್ಯಮ ಇಲ್ಲವಾಗಿದೆ. ಸರ್ಕಾರ ಇಂತಹವರ ವಿರುದ್ಧ ಕಡಿವಾಣ ಹಾಕಬೇಕಿದೆ ಎಂದರು.

ಇದೇ ವೇಳೆ ಎಸ್.ಟಿ.ರವಿಕುಮಾರ್, ಎಂ.ಆರ್. ಸತ್ಯನಾರಾಯಣ್, ಎ.ಸಿ.ಪ್ರಭಾಕರ್, ಪುನೀತ್ ಹಾಗೂ ನಾಲ್ಕು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿ ನಿವೃತ್ತಗೊಂಡ ನಗರದೂತ ಪತ್ರಿಕೆ ಸಂಪಾದಕ ಕೆ.ಟಿ.ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು.

ಸಂಘದ ಅಧ್ಯಕ್ಷ ವಿನಯ್ ಅಧ್ಯಕ್ಷತೆಯಲ್ಲಿ ಸಂಘದ ಸದಸ್ಯರ ಮಕ್ಕಳಿಗೆ ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್ ಹಾಗೂ ಆಡಳಿತ ಮಂಡಳಿ ಸದಸ್ಯರು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನಾರಾಯಣ್, ಗ್ರಾಮಾಂತರ ಉಪಾಧ್ಯಕ್ಷ ಹೆಚ್.ಎಸ್.ವೆಂಕಟಪ್ಪ, ಗ್ರಾಮಾಂತರ ಕಾರ್ಯದರ್ಶಿ ದಾ.ರಾ.ಮಹೇಶ್, ಜಿಲ್ಲಾ ಸಂಘದ ನಿರ್ದೇಶಕರಾದ ರೋಜಾ ಮಹೇಶ್, ಮೋಹನ್, ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷ ಸಿ.ಸಿ.ಮಹದೇವ, ಪ್ರಧಾನ ಕಾರ್ಯದರ್ಶಿ ಮಹೇಶ್, ಪದಾಧಿಕಾರಿಗಳಾದ ಆನಂದ್, ನಾಗೇಶ್, ನಿರ್ದೇಶಕರಾದ ರಾಮಕೃಷ್ಣೇಗೌಡ, ಶಿಲ್ಪ, ಮಧು, ಎಸ್.ಯೋಗಾನಂದ್, ಮಹಮ್ಮದ್ ಸಬೀರ್, ಸದಸ್ಯರಾದ ಎಂ.ಎಸ್.ರವಿಕುಮಾರ್, ಪಂಡಿತ್ ನಾಟೀಕರ್, ಜಿ.ಕೆ.ನಾಗಣ್ಣ, ಚೈತನ್ಯ, ಪ್ರಶಾಂತ್, ವಿ.ಸಿ.ಶಿವರಾಮು, ಕೆ.ಶಂಕರ್ ಸೇರಿದಂತೆ ಇತರರಿದ್ದರು.

ತಿ.ನರಸೀಪುರದಲ್ಲಿ ಬೃಹತ್ ರಕ್ತದಾನ ಶಿಬಿರ



ರಕ್ತದಾನ ಶಿಬಿರಕ್ಕೆ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಚಾಲನೆ ನೀಡಿದರು.

ತಿ.ನರಸೀಪುರ, ಸೆ.28– ಪ್ರಧಾನಿ ಮೋದಿ ಅವರ ಹುಟ್ಟುಹಬ್ಬದ ಪ್ರಯುಕ್ತ ಸೇವಾ ಪಾಕ್ಷಿಕ ಅಡಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಬಳಿಯ ಸ್ವಾಮಿ ನರ್ಸಿಂಗ್ ಹೋಂನಲ್ಲಿ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಪ್ರಧಾನಿ ಮೋದಿಯವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಸೇವಾ ಪಾಕ್ಷಿಕ ಅಡಿ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದ್ದಾರೆ ಎಂದರು.

ಶಿಬಿರದಲ್ಲಿ ಪೂಜಿತ್ ಮೆಡಿಕಲ್ಸ್ ಕುಮಾರ್ ಸೇರಿದಂತೆ 30ಕ್ಕೂ ಹೆಚ್ಚು ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು. ಬಳಿಕ ರಕ್ತದಾನಿಗಳಿಗೆ ಸೇವಾ ಪ್ರಶಂಸಾ ಪತ್ರ ವಿತರಿಸಲಾಯಿತು.

ಈ ವೇಳೆ ಮಾಜಿ ಎಂಎಲ್‌ಸಿ ಸಿ.ರಮೇಶ್, ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಎಂ.ರೇವಣ್ಣ, ಕ್ಷೇತ್ರಾಧ್ಯಕ್ಷ ಶಿವಕುಮಾರ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ನುಗ್ಗಹಳ್ಳಿಕೊಪ್ಪಲು ಎನ್.ಎಂ.ರಾಮಚಂದ್ರ, ಸೇವಾ ಪಾಕ್ಷಿಕ ಉಸ್ತುವಾರಿ ಕಿರಣ್ ಜಯರಾಮೇಗೌಡ, ಟೌನ್ ಅಧ್ಯಕ್ಷ ಕೆ.ನಂಜುಂಡಸ್ವಾಮಿ, ಹಿಂ.ವರ್ಗಗಳ ಮೋರ್ಚಾದ ಜಿಲ್ಲಾ ಕಾರ್ಯದರ್ಶಿ ಕೆ.ಮಹದೇವಶೆಟ್ಟಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಕರೋಹಟ್ಟಿ ಮಹದೇವಯ್ಯ, ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ ಸ್ವಾಮಿ, ಎಂ.ದಾಸಯ್ಯ, ಎಂ.ಪ್ರಕಾಶ್, ಎಸ್.ರಾಜಶೇಖರ, ಸೋಮಶೇಖರಪ್ಪ, ಕಾಳೇಗೌಡ, ಸಿದ್ದಲಿಂಗ ಸ್ವಾಮಿ, ತೋಂಟೇಶ್, ದರ್ಶನ್ ಇತರರಿದ್ದರು.

ಪಿ.ಪಟ್ಟಣ ಕಸಬಾ ಪಿಎಸಿಎಸ್‌ಗೆ 20.25 ಲಕ್ಷ ಲಾಭ

ಪಿರಿಯಾಪಟ್ಟಣ, ಸೆ.28– ತಾಲೂಕಿನ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 20,25,692 ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಸಿಇಓ ಹೆಚ್.ಆರ್.ಪ್ರವೀಣ್ ತಿಳಿಸಿದರು.



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಕಾರ್ಯ ಚಟುವಟಿಕೆ ಹಾಗೂ ಆಡಿಟ್ ವರದಿ ಮಂಡಿಸಿ ಮಾತನಾಡಿದ ಅವರು, ಸಂಸ್ಥೆ 8,63,500 ರೂ. ಷೇರುಧನ ಹೊಂದಿದ್ದು, ಜಿಲ್ಲಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಐಸಿಐಸಿಐ ಬ್ಯಾಂಕ್‌ಗಳಲ್ಲಿ 29,76,28,500 ರೂ. ಉಳಿತಾಯ ಖಾತೆಯಲ್ಲಿದ್ದು, ಸಂಸ್ಥೆ ಜಿಲ್ಲಾ ಬ್ಯಾಂಕ್ ನಿಂದ ಮಧ್ಯಮಾವಧಿ, ಕೆಸಿಸಿ, ಲಿಂಕೇಜ್, ನಬಾರ್ಡ್‌ನ ಎಂಎಸ್‌ಸಿ ಸೇರಿದಂತೆ 10,86,94,565 ರೂ. ಸಾಲ ಪಡೆದಿದ್ದು, ಸಂಸ್ಥೆ ಉಳಿತಾಯ, ಸ್ವಸಹಾಯ ಸಂಘ, ಪಿಗ್ಮಿ, ಮರಣ ನಿಧಿ ಸೇರಿದಂತೆ ಒಟ್ಟು 21,21,17,917 ರೂ ಠೇವಣಿ ಹೊಂದಿದ್ದು, ಟಿಎಪಿಸಿಎಂಎಸ್ ಷೇರು ಡಿವಿಡೆಂಟ್, ಎಲ್‌ಐಸಿ ನಿಧಿ ಬಡ್ಡಿ, ಜಿಲ್ಲಾ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ, ಐಸಿಐಸಿಐ ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ ಮೇಲಿನ ಆದಾಯ 4,24,390 ರೂ. ಸೇರಿದಂತೆ ವಿವಿಧ ಮೂಲಗಳಿಂದ ಸಂಘ ಈ ಬಾರಿ 20,25,692 ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಸಂಘದ ಅಧ್ಯಕ್ಷ ಬಿ.ಆರ್.ಸತೀಶ್ ಕುಮಾರ್ ಮಾತನಾಡಿ, ಸಂಘ ರೈತರಿಗೆ ವಿವಿಧ ರೂಪದಲ್ಲಿ 7 ಕೋಟಿ ಸಾಲ ನೀಡಿದೆ. ಈ ಪೈಕಿ 1.50 ಕೋಟಿ ಸುಸ್ತಿದಾರರಿದ್ದು, ಸಾಲ ಪಡೆದ ಸದಸ್ಯರು ಸಕಾಲಕ್ಕೆ ಸಾಲ ಮರು ಪಾವತಿಸಬೇಕು. ಆ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದ ಅವರು ಮುಂದಿನ ದಿನಗಳಲ್ಲಿ ಸಂಘದ ಸದಸ್ಯರಿಗೆ ಶೇ.7ರಷ್ಟು ಡಿವಿಡೆಂಟ್ ನೀಡಲಾಗುವುದು ಎಂದು ಭರವಸೆ ನೀಡಿದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ರಾಮೇಗೌಡ, ನಿರ್ದೇಶಕರಾದ ಹೆಚ್.ಬಿ.ಸುರೇಶ್ ಹೆಚ್.ಬಿ.ರಮೇಶ್, ಪಿ.ಕೆ.ಕುಮಾರ್, ವಿ.ಆರ್.ವೆಂಕಟೇಶ್, ಕರಿನಾಯಕ, ಸೈಯದ್ ಜಮಿಲ್, ರಾಮಕೃಷ್ಣ, ಎಸ್.ಜೆ.ನಳಿನಿ, ಶೋಭಾ ಹಾಗೂ ಸಿಬ್ಬಂದಿಗಳಾದ ಜ್ಯೋತಿ, ಸಾಗರ್ ಕೆ.ಗೌಡ, ಕುಮಾರ ಸ್ವಾಮಿ, ನಾಗರಾಜು, ಮನೋಹರ್ ಇನ್ನಿತರರಿದ್ದರು.

ದೇಶದ ಅಭಿವೃದ್ಧಿಗಾಗಿ ಎನ್‌ಎಸ್‌ಎಸ್ ಸ್ಥಾಪನೆ

ಹಿರಿಯ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಚಿಕ್ಕಕೆಂಪೇಗೌಡ

ಹೆಚ್.ಡಿ.ಕೋಟೆ, ಸೆ.28– ಯುವ ಶಕ್ತಿಯನ್ನು ದೇಶದ ಅಭಿವೃದ್ಧಿಗೆ ಬಳಸಿಕೊಳ್ಳುವ ಇರಾದೆಯಿಂದಾಗಿ ಮಹಾತ್ಮ ಗಾಂಧಿಯವರು ಎನ್‌ಎಸ್‌ಎಸ್ ಸ್ಥಾಪಿಸಿದರು ಎಂದು ಹಿರಿಯ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಚಿಕ್ಕಕೆಂಪೇಗೌಡ ತಿಳಿಸಿದರು.



ಕಾರ್ಯಕ್ರಮವನ್ನು ಚಿಕ್ಕಕೆಂಪೇಗೌಡ ಉದ್ಘಾಟಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2 ಹಾಗೂ ಯೂತ್ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಬ್ರಿಟಿಷರಿಂದ ರಸ ಹಿಂಡಿದ ಕಬ್ಬಿನ ಸಿಪ್ಪೆ ಯಂತಾಗಿದ್ದ ಭಾರತವನ್ನು ಅಭಿವೃದ್ಧಿಪಡಿಸಲು ದೇಶದ ಯುವಶಕ್ತಿ ಅವಶ್ಯ ಎಂದು ಗಾಂಧೀಜಿಯವರು ಮನಗಂಡಿದ್ದರು. ಅದರಂತೆ ರಾಷ್ಟ್ರೀಯ ಸೇವಾದಳ ಸ್ಥಾಪಿಸಿ ಯಶಸ್ಸು ಕಂಡರಲ್ಲದೇ ಯುವಕರನ್ನು ರಾಷ್ಟ್ರಾಭಿವೃದ್ಧಿ ಭಾಗವಾಗಿಸಿದರು ಎಂದರು.

ಭಾರತದಲ್ಲಿ 34.5 ಲಕ್ಷ ಎನ್‌ಎಸ್‌ಎಸ್ ಶಿಬಿರಾರ್ಥಿಗಳಿದ್ದು, ದೇಶದ ಹಲವು ಗ್ರಾಮಗಳ ಅಭಿವೃದ್ಧಿಗೆ ನಾಂದಿ ಹಾಡಿದ್ದು, ಅದರಂತೆ ಹಲವು ಗ್ರಾಮಗಳು ಅಭಿವೃದ್ಧಿಯಾಗಿವೆ. ಸೇವೆ ಮೂಲಕ ಶಿಕ್ಷಣ ಕಲಿಯುವ ರೀತಿಯನ್ನು ನಾವು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಕಾಣಬಹುದಾಗಿದೆ ಎಂದರು.

ಭಾರತವು ಜಾತ್ಯಾತೀತ ರಾಷ್ಟ್ರ ಎಂದು ಹೇಳಲಾಗುತ್ತದೆ. ಆದರೆ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ಮತ್ತು ಉದ್ಯೋಗಕ್ಕೆ ನೇಮಕ ಮಾಡಬೇಕಾದರೆ ಜಾತಿ ಆಧಾರದಲ್ಲಿ ನೀಡುತ್ತಿರುವುದು ಬೇಸರದ ಸಂಗತಿ ಎಂದರು.

ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆ ವೈದ್ಯ ಡಾ.ಸೋಮಣ್ಣ ಮಾತನಾಡಿ, ಯುವ ಜನತೆ ದೇಶದ ಅಭಿವೃದ್ಧಿಗೆ ನಾಂದಿಯಾಡಬೇಕು. ಆದರೆ ಪ್ರಸ್ತುತ ಕಾಲಘಟ್ಟದಲ್ಲಿ ಮೊಬೈಲ್ ಗೀಳಿನಿಂದಾಗಿ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಿದ್ದಾರೆ ಎಂದು ಬೇಸರಿಸಿದರು.

ಕಾರ್ಯಕ್ರಮದಲ್ಲಿ ಅಬಕಾರಿ ಇಲಾಖೆ ನಿರೀಕ್ಷಕ ಶಿವರಾಜು, ಪರಿಸರ ತಜ್ಞ ದೇವದತ್ತ, ಕಾಲೇಜಿನ ಪ್ರಾಂಶುಪಾಲ ಜಿ.ಎನ್.ವೆಂಕಟೇಶ್, ಉಪನ್ಯಾಸಕರಾದ ಭೈರೇಗೌಡ, ಕಲ್ಲೇಶ್‌ಗೌಡ, ಸಿದ್ದೇಗೌಡ, ರಾಮಚಂದ್ರ, ಮಹೇಂದ್ರ, ಚನ್ನಕೇಶವ ನಾಯಕ, ಮಂಜು, ರವೀಶ, ಪ್ರಕಾಶ್ ನಾಯಕ, ರವಿ, ಮಹದೇವ, ಮಹೇಶ್, ಸೋಮಶೇಖರ್, ಸಿದ್ದರಾಜು, ಚಿಕ್ಕದೇವಿ, ಸಂಗೀತಾ, ಅವಿನಾ, ದಿಲೀಪ್, ಚಂದನ, ಶಾಂಭವಿ, ಚಿತ್ರ, ರಾಜೇಶ್ ಇದ್ದರು.

ನಾಳೆ ಮೈಲ್ಯಾಕ್ ಅಧ್ಯಕ್ಷರ ಅಧಿಕಾರ ಸ್ವೀಕಾರ



ಪಿರಿಯಾಪಟ್ಟಣ, ಸೆ.28– ಮೈಸೂರು ಪೈಯಿಂಟ್ಸ್ ಮತ್ತು ವಾರ್ನಿಷ್(ಮೈಲ್ಯಾಕ್) ನೂತನ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಹೆಚ್.ಡಿ.ಗಣೇಶ್ ಸೆ.30 ರಂದು ಬೆಳಗ್ಗೆ ಮೈಸೂರಿನ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಕುರುಬರ ಸಂಘದ ಅಧ್ಯಕ್ಷ ಗಣೇಶ್ ಅವರು ಶನಿವಾರ ಸಿಎಂ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ನಿವಾಸದಲ್ಲಿ ಭೇಟಿ ಮಾಡಿ, ತಮ್ಮನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಮೈಲಾಕ್ ಶಾಯಿಗೆ ದೇಶಾದ್ಯಂತ ಬಹು ಬೇಡಿಕೆ ಇದ್ದು ಮುಂಬರುವ ಚುನಾವಣೆ ಗಮನದಲ್ಲಿಟ್ಟುಕೊಂಡು ಉತ್ಪಾದನೆ ಮಾಡುವುದರೊಂದಿಗೆ ಗುಣಮಟ್ಟವನ್ನು ಕಾಯ್ದುಕೊಂಡು ತಮಗೆ ಸಿಕ್ಕಿರುವ ಅವಕಾಶ ಸದುಪಯೋಗಪಡಿಸಿಕೊಳ್ಳುವುದಾಗಿ ತಿಳಿಸಿದ್ದಾರೆ.

ರೈತರು ಕೃಷಿ ಜೊತೆಗೆ ಹೈನುಗಾರಿಕೆಯಲ್ಲೂ ತೊಡಗಿ

ಮೂಗೂರು, ಸೆ.28– ರೈತರು ಕೃಷಿ ಜೊತೆಗೆ ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿ ಹಾಲು ಉತ್ಪಾದಿಸುವ ಮೂಲಕ ಸಂಘದ ಬೆಳವಣಿಗೆಗೆ ಸಹಕರಿಸಬೇಕು ಎಂದು ಗ್ರಾಮದ ಹಿರಿಯ ಮುಖಂಡ ಎಂ.ಡಿ. ಬಸವರಾಜು ತಿಳಿಸಿದರು.



ಕಾರ್ಯಕ್ರಮವನ್ನು ಮುಖಂಡ ಎಂ.ಡಿ.ಬಸವರಾಜು ಉದ್ಘಾಟಿಸಿದರು.

ಮೂಗೂರಿನ ವಾಲ್ಮಿಕಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಮೂಗೂರು ಹಾಲು ಉತ್ಪಾದಕರ ಸಹಕಾರ ಸಂಘದ ಬಿಎಂಸಿ ಕೇಂದ್ರ ಮಾದರಿ ಸಂಘವಾಗಿದೆ. ಇಲ್ಲಿನ ಆಡಳಿತ ಮಂಡಳಿ ಸೇರಿದಂತೆ ಎಲ್ಲರೂ ಒಗ್ಗಟ್ಟಿನಿಂದ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದು, ಸರ್ಕಾರದಿಂದ ದೊರೆಯುವ ಅಗತ್ಯ ಅನುದಾನ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಕಾಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ಎಂ.ಎಂ.ಬಸವಣ್ಣ, ಹಾಲು ಉತ್ಪಾದಕರು ಡೇರಿಗೆ ಗುಣಮಟ್ಟದ ಹಾಲು ನೀಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಸಿಇಓ ಎಂ.ನಾಗೇಂದ್ರ ಮಾತನಾಡಿ, ಪ್ರಸ್ತುತ ಸಂಘದಲ್ಲಿ 191 ಮಂದಿ ಸದಸ್ಯರಿದ್ದು, ಉತ್ಪಾದಕರು 1,13,9006 ರೂ. ಮೌಲ್ಯದ ಹಾಲು ಸರಬರಾಜು ಮಾಡಿದ್ದಾರೆ. 9,41,081 ರೂ.ಗಳಿಗೆ ಸ್ಥಳೀಯವಾಗಿ ಹಾಲು ಮಾರಾಟವಾಗಿದೆ. ಮಾದರಿ ಹಾಲು 72,267 ರೂ. ಗಳಾಗಿದ್ದು, ಪಶು ಆಹಾರ 8,195 ರೂ.ಗಳಿಗೆ ಮಾರಾಟವಾಗಿದೆ. ಇತರ ಮೂಲಗಳು ಸೇರಿ ಒಟ್ಟು 3,0417 ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ರೈತರ ಕಲ್ಯಾಣ ಟ್ರಸ್ಟ್ ವತಿಯಿಂದ 18 ರಿಂದ 59 ವರ್ಷದ ಹಾಲು ಉತ್ಪಾದಕರು ಅಕಾಲಿಕ ಮರಣ ಹೊಂದಿದ್ದಲ್ಲಿ ಸಂಘದಿಂದ ಪರಿಹಾರವಾಗಿ 1 ಲಕ್ಷ ಹಾಗೂ 60 ವರ್ಷ ಮೇಲ್ಪಟ್ಟವರಿಗೆ 20 ಸಾವಿರ ರೂ. ಪರಿಹಾರ ನೀಡಲಾಗುವುದು. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಸದಸ್ಯರನ್ನು ಸನ್ಮಾನಿಲಾಯಿತು. ಜಿಲ್ಲಾ ಒಕ್ಕೂಟದ ನಿರ್ದೇಶಕ ಸಿ.ಓಂಪ್ರಕಾಶ್, ವಿಸ್ತರಣಾಧಿಕಾರಿ ಶೃತಿ, ಸಂಘದ ಉಪಾಧ್ಯಕ್ಷ ಮಹದೇವ ಸ್ವಾಮಿ, ನಿರ್ದೇಶಕರಾದ ಮಹದೇವನಾಯಕ, ಮಹದೇವಗೌಡ, ಮಹದೇವನಾಯಕ, ಗೌರಮ್ಮ, ಚಿಕ್ಕಮ್ಮ, ಸುಂದರಮ್ಮ, ಮಂಜುಳಾ, ಮಲ್ಲೇಶ, ಗೋವಿಂದ್‌ರಾಜ್, ಮಹದೇವಶೆಟ್ಟಿ, ಸಿದ್ದಪ್ಪ ದೇವಾನಂದ್, ಎಂ.ನಾಗರಾಜು, ಸುಂದ್ರಪ್ಪ, ಸಂಘದ ಸಿಬ್ಬಂದಿ ವರ್ಗ ಸೇರಿದಂತೆ ಗ್ರಾಮಸ್ಥರು ಇದ್ದರು.

ವಿವಿಧ ಬೇಡಿಕೆ ಈಡೇರಿಸುವಂತೆ ಪ್ರತಿಭಟನೆ

ಹುಣಸೂರು, ಸೆ.28– ಮಹಿಳೆಯರ ಮೇಲಿನ ದೌರ್ಜನ್ಯ, ಲೈಂಗಿಕ–ಮಾನಸಿಕ ಕಿರುಕುಳ, ಕೊಲೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಹಾಗೂ ಮಾಸಾಶನ ಹೆಚ್ಚಿಸುವಂತೆ ಆಗ್ರಹಿಸಿ ಮಹಿಳೋದಯ ಮಹಿಳಾ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.



ವಿವಿಧ ಬೇಡಿಕೆ ಈಡೇರಿಸುವಂತೆ ಪ್ರತಿಭಟನೆ ನಡೆಸಲಾಯಿತು.

ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಸ್ವಸಹಾಯ ಸಂಘಗಳ ತಾಲೂಕು ಒಕ್ಕೂಟದ ಕಾರ್ಯಕರ್ತೆಯರು ವಿಧವಾ ವೇತನ ಸೇರಿದಂತೆ ವಿವಿಧ ವೇತನಗಳ ಮಾಸಾಶನ ಹೆಚ್ಚಿಸಬೇಕು ಹಾಗೂ ಹೆಣ್ಣು ಮಕ್ಕಳಿಗೆ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿ ಹಕ್ಕೋತ್ತಾಯಗಳ ಮನವಿಯನ್ನು ತಹಸೀಲ್ದಾರ್ ಜೆ.ಮಂಜುನಾಥ್‌ಗೆ ಸಲ್ಲಿಸಿದರು.

ಸ್ವಸಹಾಯ ಸಂಘಗಳ ತಾಲೂಕು ಒಕ್ಕೂಟದ ಅಧ್ಯಕ್ಷೆ ರೇಣುಕಾ ಮಾತನಾಡಿ, ಸರ್ಕಾರದಿಂದ ನೀಡುತ್ತಿರುವ ವಿಧವಾ ವೇತನ, ವೃದ್ಧಾಪ್ಯ ವೇತನ, ವಿಕಲಚೇತನರ ಮಾಸಾಶನ ಸರಿಯಾದ ಸಮಯಕ್ಕೆ ಸಿಗುತ್ತಿಲ್ಲ. ಅಲ್ಲದೇ ಪ್ರಸ್ತುತ ಇರುವ ಮೊತ್ತವನ್ನು ಕನಿಷ್ಠ 2 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು. ಬೆಲೆಗಳು ಹೆಚ್ಚುತ್ತಿದ್ದು ಸರ್ಕಾರ ನೀಡುವ ಹಣದಿಂದ ಕುಟುಂಬ ನಿರ್ವಹಣೆ ಮಾಡಲು ಕಷ್ಟ ಸಾಧ್ಯವಾಗಿದೆ ಎಂದರು.

ಮಹಿಳೆಯರು, ಮಕ್ಕಳ ಮೇಲೆ ದೌರ್ಜನ್ಯ, ಹಿಂಸಾಚಾರ, ಅತ್ಯಾಚಾರ, ಲೈಂಗಿಕ ಕಿರುಕುಳ, ಹತ್ಯೆ ಮುಂತಾದ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಅತ್ಯಾಚಾರ ಆರೋಪಿಗಳಿಗೆ ತಕ್ಕ ಶಿಕ್ಷೆಯೂ ಆಗುತ್ತಿಲ್ಲ. ಆದ್ದರಿಂದ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತಹ ಕಾನೂನು ಜಾರಿಯಾಗಬೇಕು ಎಂದು ಆಗ್ರಹಿಸಿದರು.

ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ಬೇಗನೆ ಇತ್ಯರ್ಥವಾಗುವುದಿಲ್ಲ. ಕಾನೂನಿನಿಂದ ತಪ್ಪಿಸಿಕೊಳ್ಳುವುದೇ ಹೆಚ್ಚಾಗುತ್ತಿದೆ. ಆದ್ದರಿಂದ ಅಪರಾಧಿಗಳಿಗೆ ಕಠಿಣ ಶಿಕ್ಷೆ, ಶಾಶ್ವತ ಜಾಮೀನು ನಿರಾಕರಣೆ, ಜೀವಾವಧಿ ಶಿಕ್ಷೆ ನೀಡುವಂತ ಕಾನೂನುಗಳು ಜಾರಿಯಾಗಬೇಕು ಎಂದರು.

ಪ್ರತಿಭಟನೆಯಲ್ಲಿ ತಾಲೂಕು ಒಕ್ಕೂಟದ ಸದಸ್ಯರಾದ ಲತಾ, ಅಣ್ಣಮ್ಮ, ಲೂರ್ದುಮೇರಿ, ಕವಿತಾ, ಸಲ್ಮಾ, ಸುಶೀಲ, ಜಾನ್, ನೇತ್ರಾವತಿ, ಚಿತ್ರ, ನಾಣ್ಯಕುಮಾರಿ, ನಾಗಮ್ಮ, ದೇವಜಮ್ಮ, ಸವಿತಾ, ಮಂಗಳಮ್ಮ, ಜಯಮ್ಮ ಸೇರಿದಂತೆ ಸಂಘದ ಸದಸ್ಯರು ಭಾಗವಹಿಸಿದ್ದರು.

ಹನುಮಂತೋತ್ಸವಕ್ಕೆ ಸಹಕರಿಸುವಂತೆ ಮನವಿ



ಹುಣಸೂರಿನ ಅಂಜನಾದ್ರಿ ಟ್ರಸ್ಟ್ ಹಾಗೂ ಹನುಮಂತೋತ್ಸವ ಸಮಿತಿಯಿಂದ ಡಿ.4ರಂದು ನಡೆಯುವ ಹನುಮಂತೋತ್ಸವ ಮೆರವಣಿಗೆಗೆ ಸಹಕಾರ ನೀಡುವಂತೆ ಉಪ ವಿಭಾಗಾಧಿಕಾರಿ ವಿಜಯ್ ಕುಮಾರ್ ಅವರಿಗೆ ಸಮಿತಿ ಅಧ್ಯಕ್ಷ ವೆಂಕಟನಾರಾಯಣ ದಾಸ್ ಮನವಿ ಸಲ್ಲಿಸಿದರು. ಈ ವೇಳೆ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಕಾರ್ಯದರ್ಶಿ ಚಂದ್ರಮೌಳಿ ಇತರರಿದ್ದರು.

5 ಕೋಟಿ ವೆಚ್ಚದಲ್ಲಿ ಪ್ರಮುಖ ರಸ್ತೆಗಳ ಅಭಿವೃದ್ಧಿ



ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಅಧಿಕಾರಿಗಳು ಪರಿಶೀಲಿಸಿದರು.

ತಿ.ನರಸೀಪುರ, ಸೆ.28– ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 5 ಕೋಟಿ ರೂ. ವೆಚ್ಚದಲ್ಲಿ ಪಟ್ಟಣದ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿ ಪಡಿಸ ಲಾಗುತ್ತಿದೆ ಎಂದು ಪುರಸಭೆ ಕಿರಿಯ ಅಭಿಯಂತರ ಕೆ.ಆರ್.ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ನಡೆಯುತ್ತಿರುವ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಕೆ.ಸಿ.ತ್ರಿವೇಣಿ ಅವರೊಂದಿಗೆ ಪರಿಶೀಲಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ವಿಶೇಷ ಅನುದಾನಡಿ ಪಟ್ಟಣದ ವಿವಿಧ ವಾರ್ಡ್‌ಗಳ ರಸ್ತೆ ಡಾಂಬರೀಕರಣ ಕಾಮಗಾರಿಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ವಿಶೇಷ ಆಸಕ್ತಿ ವಹಿಸಿ ಹಣ ಬಿಡುಗಡೆ ಮಾಡಿಸಿದ್ದಾರೆ. ಗುಣಮಟ್ಟದ ಕಾಮಗಾರಿ ನಡೆಸುವಂತೆ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಗುತ್ತಿಗೆದಾರರು ತುರ್ತಾಗಿ ದಸರಾ ವೇಳೆಗೆ ಮುಗಿಸುವ ಉದ್ದೇಶದಿಂದ ತ್ವರಿತವಾಗಿ ಗುಣಮಟ್ಟದ ಕಾಮಗಾರಿ ಹಮ್ಮಿಕೊಂಡಿದ್ದಾರೆ. ಸಚಿವರ ಆದೇಶದ ಮೇರೆಗೆ ಪಟ್ಟಣ ಪುರಸಭೆ ವ್ಯಾಪ್ತಿಯ ಆಯಿಲ್ ಮಿಲ್ ರಸ್ತೆ, ಭಗವಾನ್ ಟಾಕೀಸ್ ರಸ್ತೆ ಪಿಆರ್‌ಎಂ ಕಾಲೇಜು ರಸ್ತೆ, ಚಿಕ್ಕಂಗಡಿ ಬೀದಿ ರಸ್ತೆ, ವಿಶ್ವಕರ್ಮ ಬೀದಿ ಹಾಗೂ ರಥದ ಬೀದಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ನಾಳೆ ಒಳಗೆ ಅಂತಿಮಗೊಳಿಸಲಾಗುವುದು ಎಂದರು.

ವಿವಿಧ ರಸ್ತೆ ಡಾಂಬರೀಕರಣಕ್ಕೆ ಬಿಡುಗಡೆಯಾಗಿರುವ ಅನುದಾನ 5 ಕೋಟಿ ರೂ.ಗಳಲ್ಲಿ ಕೆನರಾ ಬ್ಯಾಂಕ್ ಹಾಗೂ ವಿಶ್ವ ಕರ್ಮ ರಸ್ತೆಗಳ ಅಭಿವೃದ್ಧಿಗೆ 98 ಲಕ್ಷ ರೂ.ಗಳಿಗೆ ಅನುಮೋದನೆ ನೀಡಲಾಗಿದ್ದು, ತ್ವರಿತ ಕಾಮಗಾರಿಗೆ ಆದ್ಯತೆ ನೀಡಲಾಗಿದೆ ಎಂದರು.

ಪುರಸಭೆ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿದರು. ರಸ್ತೆ ಗುಣಮಟ್ಟ ನಿಯಂತ್ರಕ ಆರ್‌ಬಿಐ ರಾಘು, ಗುತ್ತಿಗೆದಾರ ಉಮೇಶ್, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಸುನೀಲ್, ಚಿನ್ನಣ್ಣ, ಆಲಗೂಡು ರಾಜು, ನಿಲಸೋಗೆ ಮಹದೇವ ಪ್ರಸಾದ್ ಸೇರಿದಂತೆ ಮತ್ತಿತರರಿದ್ದರು.

ಕುಪ್ಯ ಡೇರಿಗೆ 2.92 ಲಕ್ಷ ರೂ. ನಿವ್ವಳ ಲಾಭ

ವಾರ್ಷಿಕ ಸಭೆಯಲ್ಲಿ ಸಂಘದ ಅಧ್ಯಕ್ಷ ಕೆ.ಬಿ.ಪ್ರಭಾಕರ್

ತಿ.ನರಸೀಪುರ, ಸೆ.28– ಸಹಕಾರ ಸಂಘ ಉತ್ತಮ ಸ್ಥಿತಿಯಲ್ಲಿದ್ದು, ಸದಸ್ಯರ ಸಹಕಾರದಿಂದ ಪ್ರಸಕ್ತ ಸಾಲಿನಲ್ಲಿ 2,92,866 ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಕುಪ್ಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೆ.ಬಿ.ಪ್ರಭಾಕರ್ ತಿಳಿಸಿದರು.



ಸಭೆಯಲ್ಲಿ ಸಂಘಕ್ಕೆ ಹೆಚ್ಚು ಹಾಲು ಪೂರೈಸಿದ ರೈತರನ್ನು ಸನ್ಮಾನಿಸಲಾಯಿತು.

ತಾಲೂಕಿನ ಕುಪ್ಯ ಗ್ರಾಮದ ಡೇರಿ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆ ರೈತರ ಉಪಕಸುಬಾಗಿದ್ದು, ಕುಟುಂಬ ನಿರ್ವಹಣೆಗೆ ಬಹಳ ಉಪಯುಕ್ತವಾಗಿದೆ. ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಹಾಲು ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲನ್ನೇ ಸರಬರಾಜು ಮಾಡಬೇಕು. ಆ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸುವ ಜೊತೆಗೆ ರೈತರಾದ ನೀವು ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಗ್ರಾಮದ ಕೆಲವು ರೈತರು ರಾಸುಗಳಿಗೆ ವಿಮೆ ಮಾಡಿಸದ ಕಾರಣ ರಾಸುಗಳು ಆಕಸ್ಮಿಕ ಮರಣ ಹೊಂದಿದ ವೇಳೆ ನಷ್ಟ ಅನುಭವಿಸುತ್ತಿದ್ದಾರೆ. ಹೀಗಾಗಿ ರೈತರು ಮೈಮುಲ್ ಸಹಕಾರದೊಂದಿಗೆ ರಾಸುಗಳಿಗೆ ಕಡ್ಡಾಯವಾಗಿ ವಿಮೆ ಮಾಡಿಸಬೇಕು. ಉತ್ಪಾದಕರು ಸಂಘದಿಂದ ನೀಡಲಾಗುವ ಯಶಸ್ವಿನಿ ವಿಮೆ ಮಾಡಿಸಬೇಕು. ಸಂಘಕ್ಕೆ ನಿತ್ಯ 800 ಲೀಟರ್ ಹಾಲು ಸರಬರಾಜಾಗುತ್ತಿದ್ದು, ಇನ್ನೂ ಹೆಚ್ಚಿನ ಹಾಲು ಉತ್ಪಾದಿಸಲು ಉತ್ಪಾದಕರು ಆಸಕ್ತಿ ವಹಿಸಬೇಕೆಂದು ಮನವಿ ಮಾಡಿದರು.

ಸಂಘದ ವಾರ್ಷಿಕ ವರದಿ ಮಂಡಿಸಿ ಮಾತನಾಡಿದ ಮಾರ್ಗ ವಿಸ್ತರಣಾಧಿಕಾರಿ ಬಿ.ಎಸ್.ರಂಜಿತ, ಸಂಘವು ಪ್ರಸಕ್ತ ಸಾಲಿನಲ್ಲಿ 2,92,866 ರೂ. ಲಾಭ ಗಳಿಸಿದ್ದು, ಈ ಪೈಕಿ 1,36,226 ರೂ.ಗಳನ್ನು ಹಾಲು ಉತ್ಪಾದಕರಿಗೆ ಬೋನಸ್ ರೂಪದಲ್ಲಿ ನೀಡಲಾಗುತ್ತದೆ. 100 ರೂ. ಹಾಲು ಸರಬರಾಜು ಮಾಡಿದ ಉತ್ಪಾದಕರಿಗೆ 1.42 ರೂ.ನಂತೆ ಬೋನಸ್ ವಿತರಿಸಲಾಗುತ್ತದೆ ಎಂದರು.

ಇದೇ ವೇಳೆ ಸಭೆಯಲ್ಲಿ 230 ರೂ. ಇರುವ ಷೇರಿನ ಮೊತ್ತವನ್ನು 500 ರೂ.ಗಳಿಗೆ ಹೆಚ್ಚಿಸಲು ತೀರ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷೆ ರಾಜಮ್ಮ, ನಿರ್ದೇಶಕರಾದ ಕೆ.ಶಿವರಾಮು, ಪುಟ್ಟಸ್ವಾಮಿ, ಎಸ್.ಶಿವರಾಮು, ಚಿಕ್ಕಬಸವಯ್ಯ, ಪಿ.ಶಿವರಾಮು, ಪುಟ್ಟರಾಜು, ಡಿ.ಬಸವರಾಜು, ರಾಜೇಶ್, ಪುಟ್ಟಮಾದಮ್ಮ, ಮಸಣೇಗೌಡ, ಜಯರಾಮು, ರಾಮಲಿಂಗು, ಚಿಕ್ಕ ಮಾದು, ಸಂಘದ ಸಿಇಓ ಸಿ.ವಿಶ್ವನಾಥ, ಪ್ರದೀಪ್, ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷರಾದ ರಘು, ಗವಿ, ಮುಖಂಡ ಜಯರಾಮು ಸೇರಿದಂತೆ ಮತ್ತಿತರರಿದ್ದರು.

ಶಾಸಕರ ಅವಧಿಯಲ್ಲಿ ಅಭಿವೃದ್ಧಿ ಕುಂಠಿತ: ಆರೋಪ

ನಂಜನಗೂಡು, ಸೆ.28– ಶಾಸಕ ದರ್ಶನ್ ಅವರ ಅಧಿಕಾರವಧಿಯಲ್ಲಿ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ 2ನೇ ಹಂತದ ಅಭಿವೃದ್ಧಿ ಹಾಗೂ ಒಳಚರಂಡಿ ಅಭಿವೃದ್ಧಿ ಯೋಜನೆಗಳು ಕುಂಠಿತಗೊಂಡಿದ್ದು, ನಗರದ ಅಭಿವೃದ್ಧಿಗೆ ತೊಡಕಾಗಿದೆ ಎಂದು ನಗರ ಬಿಜೆಪಿ ಅಧ್ಯಕ್ಷ ಸಿದ್ದರಾಜು ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಸಿದ್ದರಾಜು ಮಾತನಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಶಾಸಕರಾಗಿದ್ದ ಹರ್ಷವರ್ಧನ್ ಅವರು ಶ್ರೀಕಂಠೇಶ್ವರಸ್ವಾಮಿ ದೇವಾಲಯ ಬಳಿ ಭಕ್ತರ ಅನುಕೂಲಕ್ಕಾಗಿ 100 ಕೊಠಡಿಗಳ ವಸತಿ ಗೃಹ ನಿರ್ಮಾಣಕ್ಕಾಗಿ 76 ಕೋಟಿ, ಬೆಳ್ಳಿ ರಥ ನಿರ್ಮಾಣಕ್ಕಾಗಿ 45 ಲಕ್ಷ ಅನುದಾನ ತಂದು ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನಡೆಸಿದ್ದರು. ಆದರೆ ದರ್ಶನ್ ಅವರು ದೇವಾಲಯದ ಅಭಿವೃದ್ಧಿ ಕಾಮಗಾರಿಗೆ ಬಿಡುಗಡೆಯಾಗಿದ್ದ ಅನುದಾನ ವಾಪಸ್ ಹೋಗಿದೆ ಎಂದು ಹೇಳುತ್ತಿದ್ದಾರೆ. ಹರ್ಷ ವರ್ಧನ್ ಅವಧಿಯಲ್ಲಿ ನನೆಗುದಿಗೆ ಬಿದ್ದಿದ್ದ ಒಳಚರಂಡಿ ಯೋಜನೆ ಮುಂದುವರೆದ ಕಾಮಗಾರಿಗಾಗಿ 140 ಕೋಟಿ ಅನುದಾನ ಬಿಡುಗಡೆ ಮಾಡಿಸಿದ್ದರೂ, ಇವರ ಅವಧಿಯಲ್ಲಿ ಒಳಚರಂಡಿ ಯೋಜನೆ ಪೂರ್ಣಗೊಂಡಿಲ್ಲ. ಇವರ ಎರಡೂವರೆ ವರ್ಷದ ಅಧಿಕಾರವಧಿಯಲ್ಲಿ ನಗರದ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಆಪಾದಿಸಿದರು.

ನಗರಸಭೆ ಸದಸ್ಯ ಕಪಿಲೇಶ್ ಮಾತನಾಡಿ, ಶಾಸಕ ದರ್ಶನ್ ದೇವಾಲಯದ ಆಸುಪಾಸಿನ ಲಾಡ್ಜ್ ಮಾಲೀಕರ ಒತ್ತಡದಿಂದಾಗಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ವಸತಿಗೃಹ ನಿರ್ಮಾಣ ವಿಚಾರದಲ್ಲಿ ಹಿಂದೆ ಸರಿದಿದ್ದಾರೆ. ನಗರದಲ್ಲಿ ಮಾದಕ ವಸ್ತುಗಳು ಮಾರಾಟವಾಗುತ್ತಿದ್ದು, ಯುವಕರು ಲಾಂಗು, ಮಚ್ಚು ಹಿಡಿದು ಹೊಡೆದಾಡುತ್ತಿದ್ದಾರೆ. ದೇವಾಲಯದ ಸಮೀಪ ನಿಯಮ ಬಾಹಿರವಾಗಿ 2 ಅಂತಸ್ತಿನ ಅನಧಿಕೃತ ಕಟ್ಟಡ ನಿರ್ಮಾಣ ವಾಗುತ್ತಿದೆ. ಇದರಿಂದ ದೇವಾಲಯದ ರಾಜಗೋಪುರಕ್ಕೆ ಧಕ್ಕೆಯಾಗುತ್ತದೆ. ಅಕ್ರಮ ಕಟ್ಟಡ ತಡೆಯಬೇಕಾದ ಪ್ರಾಚ್ಯ ವಸ್ತು ರಕ್ಷಣಾ ಇಲಾಖೆ ಅಧಿಕಾರಿ ಹಾಗೂ ನಗರಸಭೆ ಅಧಿಕಾರಿಗಳು ಕಟ್ಟಡ ಮಾಲೀಕರಿಂದ ಲಂಚ ಪಡೆದು ಈ ಅಕ್ರಮ ಕಟ್ಟಡ ನಿರ್ಮಾಣಕ್ಕೆ ಸಾಥ್ ನೀಡುತ್ತಿದ್ದಾರೆ. ಕಟ್ಟಡ ನಿರ್ಮಾಣ ತಡೆಯದಿದ್ದರೆ ನಗರಸಭೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದರು.

ನಗರ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಅನಂತ್ ಮಾತನಾಡಿ, ಹಿಂದಿನ ಶಾಸಕರ ಅವಧಿಯಲ್ಲಿ ನಗರೋತ್ಥಾನ ಯೋಜನೆಯಡಿ ತಂದ 13 ಕೋಟಿ ರೂ. ಅನುದಾನ ಬಳಕೆಯಾಗಿಲ್ಲ. ಇದರಿಂದಾಗಿ 2ನೇ ಅವಧಿಯ 42 ಕೋಟಿ ಅನುದಾನ ಬಿಡುಗಡೆಯಾಗಿಲ್ಲ. ನಗರಸಭೆಯಲ್ಲಿ ಬಿ–ಖಾತೆ, ಟ್ರೇಡ್ ಲೈಸೆನ್ಸ್ ಪಡೆದುಕೊಳ್ಳುವ ವಿಚಾರವಾಗಿ ಅಧಿಕಾರಿಗಳು ಮಧ್ಯವರ್ತಿಗಳನ್ನು ಇಟ್ಟುಕೊಂಡು ವ್ಯಾಪಕ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ನಗರಸಭಾ ಆಯುಕ್ತ ವಿಜಯ್ ಅವರನ್ನು ವರ್ಗಾವಣೆ ಮಾಡಬೇಕು ಎಂದ ಅವರು ನಗರಸಭೆಯಿಂದ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆಯುತ್ತಿಲ್ಲ. ನಗರಸಭೆಯ ಅನುದಾನ ಬಿಡುಗಡೆಯಲ್ಲಿ ತಾರತಮ್ಯ ನಡೆಸಲಾಗುತ್ತಿದೆ. ಕಾಂಗ್ರೆಸ್ ಸದಸ್ಯರ ವಾರ್ಡ್‌ಗಳಿಗೆ ಹೆಚ್ಚಿನ ಅನುದಾನ ನೀಡಿ ಬಿಜೆಪಿ ಸದಸ್ಯರ ವಾರ್ಡ್‌ಗಳಿಗೆ ಕಡಿಮೆ ಅನುದಾನ ನೀಡಿರುವ ಕಾರಣ ಅಭಿವೃದ್ಧಿಗೆ ಅನುದಾನದ ಕೊರತೆ ಎದುರಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಕಾರ್ಯದರ್ಶಿ ರಾಘವೇಂದ್ರ, ಸುನೀಲ್ ಕುಮಾರ್ ಉಪಸ್ಥಿತರಿದ್ದರು.

ಇಂದಿನ (ಸೆಪ್ಟೆಂಬರ್ 29) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು



ಅರಮನೆ ವೇದಿಕೆ

ಮಧ್ಯಾಹ್ನ 3.30: ದೆಹಲಿ ಕರ್ನಾಟಕ ಸಂಘ ತಂಡದಿಂದ ನೃತ್ಯ-ನಾಟಕ.
ಸಂ. 4.00 : ಗಾನಸಿರಿ ವೃಂದ, ಸುಗಮ ಸಂಗೀತ (ಎಂ.ಯಶವಂತ್‌ಕುಮಾರ್ ಮತ್ತು ತಂಡ).
ಸಂ. 5.00 : ಡಾ.ಮೈಸೂರು ಗುರುರಾಜ್ ಮತ್ತು ಬಳಗದಿಂದ ಜಾನಪದ ಗಾಯನ.
ಸಂ. 6.00 : ಮೈಸೂರಿನ ಇಸ್ಕಾನ್ ಅವರಿಂದ ಹರಿನಾಮ ಸಂಕೀರ್ತನೆ.
ರಾ. 6.45 : ಬಿದರಿ ಸಾಂಸ್ಕೃತಿಕ ವೇದಿಕೆ, ಬೀದರ್ ಇವರಿಂದ ಭಕ್ತಿ ಸಂಗೀತ (ರೇಖಾ ಸೌಧಿ ಮತ್ತು ತಾರೂಪೆ).
ಸಂ. 7.30 : ಇಂದು ನಾಗರಾಜ್ ಮತ್ತು ಲಕ್ಷ್ಮಿ ನಗರ ತಂಡದಿಂದ ಫ್ಯೂಷನ್.
ರಾ. 9.00: ಜುಗಲ್ಬಂದಿ ನೃತ್ಯ-ನಾಟಕ 'ಶಕ್ತಿ', ಹರಿ ಮತ್ತು ಚೇತನ್ ಅವರಿಂದ ಕಥಕ್ ಮತ್ತು ಅನನ್ಯ ಕಲಾನಿಕೇತನ ತಂಡದಿಂದ ಭರತನಾಟ್ಯ, ಬೆಂಗಳೂರು.

ಕಿರು ರಂಗಮಂದಿರ ವೇದಿಕೆ

ಮ. 2.00: ಸ್ಪಂದನ ಬಾಲು ಮತ್ತು ತಂಡದಿಂದ ಸುಗಮ ಸಂಗೀತ, ಬೆಂಗಳೂರು.
ಮ. 3.00 : ಸರಸೋತಿ ಯಾಗಲೊಲ್ಲೆ (ಧಾತ್ರಿ-ಸಿರಿಗೆ) ನಾಟಕ.
ಸಂ. 7.00 : ಯಕ್ಷರಂಗ, ಮೈಸೂರು (ಡಿ.ತಿಪ್ಪಣ್ಣ) ಅವರಿಂದ ಚಂದ್ರಹಾಸ ನಾಟಕ ಪ್ರದರ್ಶನ.

ಪುರಭವನ ವೇದಿಕೆ

ಬೆ. 10.30 : ಬೆಂಗಳೂರಿನ ಹೊಂಬಾಳೆ ತಂಡದಿಂದ 'ಶ್ರೀ ಕೃಷ್ಣ ಸಂಧಾನ' ಪೌರಾಣಿಕ ನಾಟಕ ಪ್ರದರ್ಶನ.
ಮ. 3.00 : ತುಮಕೂರು, ಪಾಂಚಜನ್ಯ ಕಲಾಬಳಗ ಅವರಿಂದ ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ.
ಸಂ. 6.00 : ಜಿ. ಆಂಜನಪ್ಪ ಮತ್ತು ತಂಡದಿಂದ 'ಸಂಗ್ಯಾ ಬಾಳ್ಯ' ಸಾಮಾಜಿಕ ನಾಟಕ ಪ್ರದರ್ಶನ.

ಚಿಕ್ಕಗಡಿಯಾರ ವೇದಿಕೆ

ಸಂ. 5.00 : ಶಂಕರಪ್ಪ ಗುರಪ್ಪ ಮುರಡಿ ಮತ್ತು ತಂಡದಿಂದ ಕೋಲಾಟ, ಬಾಗಲಕೋಟೆ.
ಸಂ. 5.30 : ಲಕ್ಷ್ಮಿ ಬಾಯಿ ಹರಿಜನ ಮತ್ತು ತಂಡದಿಂದ ಗೀಗೀಪದ.
ಸಂ. 6.30 : ಮೈಸೂರು ಜಿಲ್ಲೆಯ ಕಲಾವಿದರಿಂದ ಸೋಬಾನೆ ಪದ.
ಸಂ. 7.30 : ಮಹಾದೇವಯ್ಯ ಮತ್ತು ತಂಡದಿಂದ ತಂಬೂರಿ ಪದ, ಮೈಸೂರು.
ರಾ. 8.30 : ಶಂಕರ್ ದಮ್ಮನಿಂಗಲ ಮತ್ತು ತಂಡದಿಂದ ಕ್ರಾಂತಿಕಾರಿ ಗೀತೆಗಳು, ಹಾಸನ.

ನಾದಬ್ರಹ್ಮ ಸಂಗೀತಸಭಾ ವೇದಿಕೆ, ಜೆಎಲ್‌ಬಿ ರಸ್ತೆ.

ಸಂಜೆ 5.00 : ಎಂ.ರವಿಕಿರಣ್ ಮತ್ತು ತಂಡದಿಂದ ಸುಗ್ಗಿ ಕುಣಿತ, ಚಾಮರಾಜನಗರ.
ಸಂಜೆ 5.30 : ಜೋಗಪ್ಪ ಮತ್ತು ತಂಡದಿಂದ ಜಾನಪದ ಗಾಯನ.
ಸಂಜೆ 6.30 : ಗಣೇಶ್ ಈಶ್ವರ ಭಟ್-ತಂಡದಿಂದ ಭಕ್ತಿಗೀತೆಗಳು, ಮೈಸೂರು.
ಸಂಜೆ 7.30 : ದೀಕ್ಷಾ ಕಿರಣಕುಮಾರ್ ಮತ್ತು ತಂಡದಿಂದ ಭರತನಾಟ್ಯ, ಬಾಗಲಕೋಟ.
ರಾತ್ರಿ 8.30 : ಕಲಾಧಾರಿ ಭವಾನಿ ಮತ್ತು ಅಂಬಿಕಾ ದತ್ತ ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.

ಗಾನಭಾರತಿ ವೇದಿಕೆ, ಕುವೆಂಪುನಗರ

ಸಂಜೆ 4.00 : ಸತೀಶ್ ಮತ್ತು ತಂಡದಿಂದ ಡೋಲು ವಾದನ.
ಸಂಜೆ 4.30 : ಡಾ.ವಿದು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ. ಸುಚಿತ್ರಾ ಹೊಳ್ಳ ಮತ್ತು ತಂಡ, ದಕ್ಷಿಣ ಕನ್ನಡ.
ಸಂಜೆ 5.30 : ರವಿಕಿರಣ್ ಮತ್ತು ತಂಡದಿಂದ ಸುಗಮ ಸಂಗೀತ, ಮೈಸೂರು.
ಸಂಜೆ 6.30 : ಎಸ್.ಸೌಮ್ಯಾರಾಣಿ ಮತ್ತು ತಂಡದಿಂದ ಭರತನಾಟ್ಯ, ಮೈಸೂರು.
ಸಂಜೆ 7.30 : ಜಯಸಿಂಹ ಮತ್ತು ತಂಡದಿಂದ ಜಾನಪದ ಸಂಗೀತ.
ರಾತ್ರಿ 8.30 : ಮೈಸೂರಿನ ಮನು ವಿದ್ಯಾ ಕಲ್ಚರಲ್ ಫೌಂಡೇಶನ್‌ನ ವಿದು. ಎಸ್.ನೇತ್ರ ಅವರಿಂದ ಭರತನಾಟ್ಯ

ರಮಾಗೋವಿಂದ ರಂಗಮಂದಿರ ವೇದಿಕೆ, ರಾಮಕೃಷ್ಣನಗರ

ಸಂ. 5.00: ರಾಜೇಂದ್ರ ಪ್ರಸಾದ್ ಮತ್ತು ತಂಡದಿಂದ ಜಾನಪದ ಗಾಯನ.
ಸಂ. 5.30: ಸಂಸ್ಕೃತ ನೃತ್ಯ ಅಕಾಡೆಮಿ, ಬೆಂಗಳೂರು ಇವರಿಂದ ಸಮೂಹ ನೃತ್ಯ.
ಸಂ. 6.30: ಶಂಕರ್ ಭಾರತೀಪುರ-ತಂಡದಿಂದ ಸುಗಮ ಸಂಗೀತ, ಬೆಂಗಳೂರು.

ಸಂ. 7.30: ಶಿವಮೊಗ್ಗ ಹೊಂಗಿರಣ ಅವರಿಂದ ಹಗ್ಗದ ಕೊನೆ. ನಾಟಕ ಪ್ರದರ್ಶನ (ಡಾ. ಸಾಸ್ವೆಹಳ್ಳಿ ಸತೀಶ್).

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 4.15 : ಗುರುರಾಜ್ ಮತ್ತು ತಂಡದಿಂದ ವಾದ್ಯ ಸಂಗೀತ.
ಸಂ. 4.45 : ಎಸ್.ಶಿವಣ್ಣ ಮತ್ತು ತಂಡದಿಂದ ಜಾನಪದ ಗೀತೆಗಳು.
ಸಂ. 5.30 : ಮಲ್ಲಿಗೆ ಕಲಾತಂಡ (ಎಂ.ಸಿ.ಜಗದೀಶ್) ಅವರಿಂದ ವಚನ ಗಾಯನ.
ಸಂ. 6.30: ಅಂಬರೀಶ್ ಹೂಗಾರ ಮತ್ತು ತಂಡದಿಂದ ತಬಲಾ ವಾದನ, ಕಲಬುರಗಿ.
ಸಂ. 7.30: ಸಹನಾ ಭಾರದ್ವಾಜ್ ಮತ್ತು ತಂಡದಿಂದ ಸುಗಮ ಸಂಗೀತ, ಬೆಂಗಳೂರು.
ರಾ. 8.30 : ಗಂಗಾಧರ ಗಾಂಧಿ ಮತ್ತು ತಂಡದಿಂದ ಕನ್ನಡ ಗೀತ ಗಾಯನ, ಮಂಗಳೂರು.

ಜಗನ್ಮೋಹನ ಅರಮನೆ ವೇದಿಕೆ

ಸಂಜೆ 4.15: ರಮ್ಯಾ ಮತ್ತು ತಂಡದಿಂದ ಡೊಳ್ಳು, ಮೈಸೂರು.
ಸಂಜೆ 4.45: ಎಂ.ಶಿವಶಂಕರ್ ಮತ್ತು ತಂಡದಿಂದ ರಂಗಗೀತೆ, ಚಾಮರಾಜನಗರ.
ಸಂಜೆ 5.30: ಮನೋಜ್ಞ ನೃತ್ಯ ಕಲಾ ಅಕಾಡೆಮಿಯಿಂದ ಭರತನಾಟ್ಯ.
ಸಂಜೆ 6.30: ಸ್ವರ್ಣ ನಾಗರಾಜ್ ಮತ್ತು ತಂಡದಿಂದ ಭಕ್ತಿಗೀತೆಗಳು, ಮೈಸೂರು.
ಸಂಜೆ 7.30: ಪೂರ್ಣಿಮಾ ಅರುಣಾ ನಂದಾ ಅವರಿಂದ ಭರತನಾಟ್ಯ, ಬೆಂಗಳೂರು.
ರಾತ್ರಿ 8.30: ಜಾನಪದ ರಂಗಮಾಧ್ಯಮ ಅವರಿಂದ ಯಕ್ಷಗಾನ- ಮೂಡಲಪಾಯ, ಚನ್ನರಾಯಪಟ್ಟಣ.

ಕರ್ನಾಟಕ ಕಲಾಮಂದಿರ ವೇದಿಕೆ

ಸಂಜೆ 4.00: ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ (ಮೈಸೂರು ಕೃಷ್ಣಮೂರ್ತಿ, ತಲಕಾಡು) ಇವರಿಂದ ನೃತ್ಯ-ನಾಟಕ (ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಬುದ್ಧ-ಬಸವ-ಅಂಬೇಡ್ಕರ್ ಗೀತೆಗಳಿಗೆ).
ಸಂಜೆ 5.00: ನಾದಸ್ವರ-ಡಿ.ಜೆ.ಗೋವಿಂದರಾಜು ಮತ್ತು ತಂಡ, ಮಂಡ್ಯ.
ಸಂಜೆ 5.30: ಶುಭ ರಾಘವೇಂದ್ರ ಮತ್ತು ತಂಡದಿಂದ ಗಮಕ ವಚನ, ಮೈಸೂರು.
ಸಂಜೆ 6.30: ಜನಪದ ಜಾತ್ರೆ-ನಾಟ್ಯ ಅವರಿಂದ ನೃತ್ಯ ಸಂಗಮ, ಮೈಸೂರು (ಎನ್.ಪವಿತ್ರಾ ಮತ್ತು ತಂಡ).
ಸಂಜೆ 7.30 : ಮೆಹಬೂಬ ಸಾಬ ನದಾಫ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ಧಾರವಾಡ.
ರಾತ್ರಿ 8.30 : ಎನ್.ವಿ.ಇಂಚರ ಮತ್ತು ತಂಡದಿಂದ ಭರತನಾಟ್ಯ, ಬೆಂಗಳೂರು.

ಪಂಜಿನ ಕವಾಯಿತು ಮೈದಾನ (ಬನ್ನಿಮಂಟಪ)



ಸಂಜೆ 6.00 : ಡ್ರೋನ್ ಪ್ರದರ್ಶನ. ಉದ್ಘಾಟನೆ: ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9	: ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30	: ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9	: ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7	: ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	: ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ- ದಿನ 4 ಟ್ರಿಪ್),
ಬೆ. 10 ರಿಂದ 5	: ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8	: ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)
ಬೆ. 10 ರಿಂದ	: ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ.

ಬೀದಿ ನಾಟಕದ ಮೂಲಕ ಸ್ವಚ್ಛತಾ ಜಾಗೃತಿ



ಬೀದಿ ನಾಟಕದ ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತಾ ಅರಿವು ಮೂಡಿಸಲಾಯಿತು.

ಮೈಸೂರು, ಸೆ.28(ಎಂಕೆ)- ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಚಿಕ್ಕಗಡಿಯಾರ ಎದುರಿನ ಸಾಂಸ್ಕೃತಿಕ ವೇದಿಕೆಯಲ್ಲಿ ಬೀದಿ ನಾಟಕದ ಮೂಲಕ ಸ್ವಚ್ಛತಾ ಜಾಗೃತಿ ಮೂಡಿಸಲಾಯಿತು.

ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪ ಸಮಿತಿ ಆಯೋಜಿಸಿದ್ದ ಸ್ವಚ್ಛತಾ ಜಾಗೃತಿ ಕಾರ್ಯಕ್ರಮದ ಅಂಗವಾಗಿ ನೇಪಥ್ಯ ರಂಗ ತಂಡದಿಂದ ಬೀದಿ ನಾಟಕ ಪ್ರದರ್ಶಿಸಿ ಸಾರ್ವಜನಿಕರಲ್ಲಿ ಸ್ವಚ್ಛತೆ ಜೊತೆಗೆ ಹಸಿಕಸ ಮತ್ತ ಒಣಕಸ ಬೇರ್ಪಡಿಸುವುದು, ಎಲ್ಲೆಂದರಲ್ಲಿ ಕಸ ಬಿಸಾಡದಂತೆ ಅರಿವು ಮೂಡಿಸಲಾಯಿತು.

ಎಲ್ಲೆಂದರಲ್ಲಿ ಕಸ ಬಿಸಾಡುವುದರಿಂದ ಉಂಟಾಗುವ ಪರಿಣಾಮಗಳು, ನೀರನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡದಿರುವುದರಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮ ಹಾಗೂ ಮೈಸೂರು ಸ್ವಚ್ಛತಾ ನಗರ ಪ್ರಶಸ್ತಿ ಪಡೆಯಲು ಪೌರಕಾರ್ಮಿಕರ ಕೊಡುಗೆ ಕುರಿತು ತಿಳಿಹೇಳಲಾಯಿತು.

ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ಅಧ್ಯಕ್ಷ ಸುಭಾನ್, ಉಪಾಧ್ಯಕ್ಷ ವಸಂತ್ ಕುಮಾರ್, ಸದಸ್ಯರಾದ ಮೊಹಮದ್ ಶರೀಫ್, ಮಲ್ಲಜ್ಜಮ್ಮ, ಸಾಕಮ್ಮ, ರಾಮಚಂದ್ರ, ಸಿದ್ದಪ್ಪ, ಮರಿಯಪ್ಪ, ಸುರೇಶ್, ನಗರ ಪಾಲಿಕೆ ಆರೋಗ್ಯ ನಿರೀಕ್ಷಕರಾದ ಮಂಜುಕುಮಾರ್, ಕೃಷ್ಣ, ಪ್ರಭಾಕರ್ ಮತ್ತಿತರರಿದ್ದರು.

ಮೈಸೂರಲ್ಲಿ ಹೊರನಾಡ ಕನ್ನಡಿಗರ ಕಲರವ

ಕಣ್ಮನ ಸೆಳೆದ ನೃತ್ಯ ರೂಪಕ, ನಾಟಕ, ಕನ್ನಡಿಗರ ಗೀತೆ



ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆ ಇದ್ದು, ಎಲ್ಲಾ ರಂಗದಲ್ಲೂ ಹೆಣ್ಣು ಸಮಾಜಕ್ಕೆ ಕಣ್ಣು ಇದ್ದಾಗೆ. ಹೀಗಾಗಿಯೇ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಹೊರನಾಡುಗಳಲ್ಲಿ ಕನ್ನಡ ಭಾಷೆ ಬಳಕೆ ಕಡಿಮೆ. ಹೀಗಾಗಿ ಮುಂದಿನ ಪೀಳಿಗೆಗೆ ಹಾಗೂ ಕನ್ನಡ ಉಳಿವಿಗೆ ವಿನೂತನವಾಗಿ ಸೇವೆ ಸಲ್ಲಿಸಲಾಗುತ್ತಿದೆ ಹಲವು ವರ್ಷಗಳಿಂದ ಹೊರನಾಡಲ್ಲಿ ಕನ್ನಡ ವಿವಿಧ ಸಂಘಗಳಿದ್ದು ತಮಿಳು ನಾಡು ಚೆನ್ನೈನಲ್ಲಿ ಕಳೆದ 52ವರ್ಷಗಳಿಂದ ಅಲ್ಲಿಯೂ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುತ್ತಿದೆ. ಈ ಬಾರಿ ದಸರಾದಲ್ಲಿ ನಮ್ಮ ತಂಡ ಪಾಲ್ಗೊಳ್ಳಲು ದಸರಾ ಸಮಿತಿ ಹಾಗೂ ನಮ್ಮ ತಂದೆ ನಂದಿಧ್ವಜ ಮಹಾದೇವಪ್ಪ ಅವರ ಸಹಕಾರದಿಂದ ಎಲ್ಲವೂ ಸಾಧ್ಯವಾಯಿತು.

- ದಾಕ್ಷಾಯಿಣಿ ಎಸ್. ದಳವಾಯಿ, ಸಂಚಾಲಕರು, ಹೊರನಾಡ ಕನ್ನಡಿಗರು.

ಮೈಸೂರು, ಸೆ.28-ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ-2025 ಪ್ರಯುಕ್ತ ಕರ್ನಾಟಕ ಸಂಸ್ಕೃತಿ ಸೊಬಗನ್ನು ಪ್ರತಿಬಿಂಬಿಸುವ ನೃತ್ಯ, ನೃತ್ಯ ರೂಪಕ ಹಾಗೂ ಕನ್ನಡಿಗರ ಗೀತೆಯ ಬಿಡುಗಡೆಯನ್ನು ವಿಶೇಷವಾಗಿ ತಮಿಳು ನಾಡಿನ ವಿವಿಧ ಕನ್ನಡಿಗರ ಸಂಘಗಳು ಒಗ್ಗೂಡಿ ಹೊರನಾಡ ಕನ್ನಡಿಗರು ಶೀರ್ಷಿಕೆಯಡಿ ಇದೇ ಮೊದಲ ಬಾರಿಗೆ ಸೆಪ್ಟೆಂಬರ್ 24ರಂದು ಮೈಸೂರಿನ ಕಲಾಮಂದಿರದಲ್ಲಿ ಪ್ರಸ್ತುತಪಡಿಸಿದವು.

ನವದುರ್ಗೆಯರ ಸ್ತುತಿ ನೃತ್ಯ, ಚಾಮುಂಡಿ ಹರಸಿದ ಮಹಾನುಭಾವರ ನೃತ್ಯ ರೂಪಕ ಸೇರಿದಂತೆ ಹೊರನಾಡ ಕನ್ನಡಿಗರ ಗೀತೆಯಲ್ಲಿ ಸುಮಾರು 45 ಮಂದಿ ಗೃಹಿಣಿಯರು ಪಾಲ್ಗೊಂಡು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೆರುಗು ತಂದಿದ್ದು ವಿಶೇಷವಾಗಿತ್ತು.

ನೃತ್ಯ ರೂಪಕ ವೈಭವ: ಆಧುನಿಕ ಹಾಗೂ ತಂತ್ರಜ್ಞಾನ ಯುಗದಲ್ಲಿ ಪೊಲೀಸ್, ಶಿಕ್ಷಕಿ, ನ್ಯಾಯಾಲಯ, ರಾಜಕೀಯ, ಕೃಷಿ ವಲಯ ಸೇರಿದಂತೆ ವಿವಿಧ ರಂಗದಲ್ಲಿ ತನ್ನ ಜೀವನದಲ್ಲಿ ಹೇಗೆ ಮಹಿಳೆಯರು ದೇವಿಯಾಗಿ ರಕ್ಷಣೆ ಮಾಡುತ್ತಾರೆ ಮತ್ತು ಪ್ರತಿ ಹೆಣ್ಣಿನಲ್ಲೂ ಒಂದಲ್ಲ ಒಂದು ರೀತಿಯಲ್ಲಿ ದೇವಿ ಇದ್ದಾಳೆ ಎಂಬುದು ನೃತ್ಯ ರೂಪಕದಲ್ಲಿ ಮೂಡಿಬಂದಿತು. ಇದರಲ್ಲಿ ನವ ದುರ್ಗೆಯರ ಸ್ತುತಿ, ನೋಡುಗರ ಕಣ್ಮನ ಸೆಳೆಯಿತು. ಜೊತೆಗೆ ಸಮಾಜದಲ್ಲಿ ವಿವಿಧ ರಂಗದಲ್ಲಿ ಮಹಿಳೆಯರ ಪಾತ್ರ ಹಾಗೂ ನೀಡಿದ ಕೊಡುಗೆ ಎಂತಹುದು ಎಂಬುದನ್ನು ತಿಳಿಸಿಕೊಡಲಾಗಿತ್ತು.

ಜನಮನ ಮಿಡಿದ ಹೃದಯವಂತ ಅರಸರು (ಎರಡು ನಾಟಕ) ಪುಸ್ತಕ ಡಾ. ಗೀತಾ ಸೀತಾರಾಮ್ ರಚನೆ ಆಧಾರಿತ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆ ಕುರಿತ ನಾಟಕ ಪ್ರದರ್ಶನ ಕೂಡ ರಾಜರ ಕೊಡುಗೆ ಸಾರಿ ಹೇಳಿತು. ಇದರಲ್ಲಿ ಕೆಂಪನಂಜಮ್ಮಣಿ ಪಾತ್ರವೂ ಪ್ರೇಕ್ಷಕರ ಕಣ್ಣಿಗೆ ಬಂದಿದ್ದು ಕೊಂಡಾಡುವಂತಿತ್ತು. ಅಷ್ಟೇ ಅಲ್ಲದೆ ಕನ್ನಡ ಪ್ರೀತಿ, ಪ್ರೇಮ, ನಾಡುನುಡಿ, ಸಂಸ್ಕೃತಿ, ಇತಿಹಾಸದ ಮೇಲೂ ಬೆಳಕು ಚೆಲ್ಲಿದ್ದರು.

ನಾವು ಕನ್ನಡಿಗರು : ನಾವಿರೊ ಊರೆ ನಮ್ಮೂರು.. ಕನ್ನಡಿಗರೆಲ್ಲ ನಮ್ಮೋರು.. ದುಡಿಮೆಗೆ ಬಿಟ್ಟೆವು ತವರೂರು. ಇರುವೆಡೆ ನೆಮ್ಮದಿ ಕಾಣೋರು ನಾವು ಕನ್ನಡಿಗರು.. ಹೊರನಾಡ ಕನ್ನಡಿಗರು ಎಂಬ ಗೀತೆ ನೆರೆದಿದ್ದವರನ್ನು ತಲೆದೂಗುವಂತೆ ಮಾಡಿತು. ಅಲ್ಲದೆ ಈ ಗೀತೆಯೂ ಕನ್ನಡದ ಬಗ್ಗೆ ಅಭಿಮಾನ ಸೇರಿದಂತೆ ಎಲ್ಲರನ್ನು ಒಗ್ಗೂಡಿಸುವ ಜೊತೆಗೆ ಮುಂದಿನ ಪೀಳಿಗೆಗೆ ಕನ್ನಡ ಹಾಗೂ ಸಂಸ್ಕೃತಿ ಬಿಂಬಿಸುವಂತಹ ಸಾಹಿತ್ಯ ಇದಾಗಿತ್ತು. ಗೀತೆಯ ಕೊನೆ ಸಾಲಿನಲ್ಲಿ ಹೇಳುವಂತೆ ಎಲ್ಲೆಡೆ ಕನ್ನಡ ಬೆಳೆಯಲಿ, ಭಾಷಾ ಹಿರಿಮೆ ಬೆಳಗಲಿ, ಜೈ ಭುವನೇಶ್ವರಿ.. ಜೈ ಕರ್ನಾಟಕ ಎಂಬ ಭಾವನೆ ಮೂಡಿ ಮೋಡಿ ಮಾಡಿದ್ದು ಜಯಕಾರ, ಚಪ್ಪಾಳೆ ಸಾಕ್ಷಿಯಾಯಿತು.

21 ಬಾರಿ ಕುಶಾಲತೋಪು ಸಿಡಿಸುವ ಎಂಟೆದೆಬಂಟರ ತಂಡ ಸಜ್ಜು

35 ಮಂದಿ ಸಿಬ್ಬಂದಿಗಳಿಂದ ಸಾಹಸ



ಪ್ರಸಕ್ತ ಸಾಲಿನಲ್ಲಿ ಸಿಡಿಮದ್ದು ಸಿಡಿಸಲು ಸಜ್ಜಾಗಿರುವ ಫಿರಂಗಿ ದಳ.

ಮೈಸೂರು,ಸೆ.28(ಎಂಟಿವೈ)- ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರಬಿಂದುವಾದ ಜಂಬೂಸವಾರಿ ಮೆರವಣಿಗೆಯ ವೇಳೆ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವಾಗ ಒಂದು ನಿಮಿಷದೊಳಗೆ 21 ಸುತ್ತು ಸಿಡಿಮದ್ದು ಸಿಡಿಸುವುದಕ್ಕೆ ಫಿರಂಗಿ ದಳ ಸಜ್ಜಾಗಿದೆ.

7 ಫಿರಂಗಿ ಬಳಸಿ ತಲಾ 3 ಸುತ್ತಿನಲ್ಲಿ 21 ಬಾರಿ ಕುಶಾಲತೋಪು ಸಿಡಿಸುವುದಕ್ಕೆ ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್ ನೇತೃತ್ವದಲ್ಲಿ ಎಸಿಪಿ ಕುಮಾರಸ್ವಾಮಿ ಮಾರ್ಗದರ್ಶನದಲ್ಲಿ 36 ಜನ ಸಿಬ್ಬಂದಿಗಳ ಫಿರಂಗಿ ದಳ ಪ್ರಾಣ ಲೆಕ್ಕಿಸದೇ ಸಿಡಿಮದ್ದು ಸಿಡಿಸುವುದಕ್ಕೆ ಟೊಂಕಕಟ್ಟಿ ಸಜ್ಜಾಗಿದೆ. ಈಗಾಗಲೇ 3 ಬಾರಿ ಸಿಡಿಮದ್ದು ಸಿಡಿಸುವ ತಾಲೀಮನ್ನು ಯಶಸ್ವಿಯಾಗಿ ನಡೆಸಿರುವ ಫಿರಂಗಿ ದಳ ಇದೀಗ ಅಂತಿಮ ಹಂತದ ಕುಶಾಲತೋಪು ಸಿಡಿಸುವ ಜವಾಬ್ದಾರಿ ನಿಭಾಯಿಸಲು ಸಜ್ಜಾಗಿದೆ.

7 ಫಿರಂಗಿಗಳಲ್ಲಿ 4 ಫಿರಂಗಿಗಳಿಗೆ 1 ಕೆ.ಜಿ. 800 ಗ್ರಾಂ ಗನ್ ಪೌಡರ್‌ನಿಂದ ತಯಾರಿಸಿದ ಸಿಡಿಮದ್ದು, ಉಳಿದ 3 ಫಿರಂಗಿಗಳಿಗೆ 1 ಕೆ.ಜಿ. 600 ಗ್ರಾಂ ಗನ್ ಪೌಡರ್ ಬಳಸಿ ತಯಾರಿಸಿದ ಸಿಡಿಮದ್ದನ್ನು ಬಳಸಿ ಸಿಡಿಸುವುದಕ್ಕೆ ಫಿರಂಗಿ ದಳ ಸಿಬ್ಬಂದಿಗಳು ಸನ್ನದ್ಧರಾಗಿದ್ದಾರೆ. ಸುಮಾರು 15 ದಿನ ಒಣ ತಾಲೀಮು ನಡೆಸಿ, ಒಂದೇ ನಿಮಿಷದಲ್ಲಿ 21 ಕುಶಾಲತೋಪು ಸಿಡಿಸುವ ಚಾಕಚಕ್ಯತೆಯನ್ನು ಫಿರಂಗಿ ದಳದ ಸಿಬ್ಬಂದಿಗಳು ಮೈಗೂಡಿಸಿಕೊಂಡಿದ್ದು, ಇದೀಗ ಜಂಬೂಸವಾರಿ ದಿನ ಪುಷ್ಪಾರ್ಚನೆ ವೇಳೆ ಕರ್ನಾಟಕ ಪೊಲೀಸ್ ಬ್ಯಾಂಡ್ ವಾದನ ರಾಷ್ಟ್ರಗೀತೆ ನುಡಿಸುವಾಗ ಒಂದು ನಿಮಿಷದೊಳಗೆ 21 ಬಾರಿ ಕುಶಾಲ ತೋಪು ಸಿಡಿಸುವುದಕ್ಕೆ ಸನ್ನದ್ಧವಾಗಿದೆ.

ಅಪಾಯಕಾರಿ: ಸಿಡಿಮದ್ದು ಸಿಡಿಸುವ ಕಾರ್ಯ ಅಪಾಯಕಾರಿಯಾಗಿದ್ದು, ಅಂತಹ ಸವಾಲನ್ನು ಫಿರಂಗಿ ದಳ ಸಮರ್ಥವಾಗಿ ನಿಭಾಯಿಸಲು ಪಣ ತೊಟ್ಟಿದೆ. ಕಿವಿಗಡಚಿಕ್ಕುವ ಭಾರಿ ಪ್ರಮಾಣದ ಶಬ್ದದೊಂದಿಗೆ ದಟ್ಟ ಹೊಗೆ ಮತ್ತು ಬೆಂಕಿ ಉಗುಳುವ ಫಿರಂಗಿಯಿಂದ ಅಂತರ ಕಾಯ್ದುಕೊಂಡು ಸುರಕ್ಷಿತವಾಗಿ ಸಿಡಿಮದ್ದು ಸಿಡಿಸುವ ಸವಾಲಿನ ಕೆಲಸವನ್ನು ಫಿರಂಗಿ ದಳ ನಿಭಾಯಿಸುತ್ತಿದೆ.

ಅ.2ರಂದು ಜಂಬೂಸವಾರಿ ಹಾಗೂ ಪಂಜಿನ ಕವಾಯತು ಸಂದರ್ಭದಲ್ಲಿ ಮತ್ತು ಅ.1ರಂದು ಪಂಜಿನ ಕವಾಯತು ತಾಲೀಮಿನ ವೇಳೆ 21 ಬಾರಿ ಕುಶಾಲ ತೋಪು ಸಿಡಿಸಲಿರುವ ಈ ಫಿರಂಗಿ ದಳದ ಸಿಬ್ಬಂದಿಗಳು ಅರಮನೆ ಆವರಣದಲ್ಲಿ ಸೋಮವಾರ ನಡೆಯುವ ಜಂಬೂ ಸವಾರಿಯ ಪುಷ್ಪಾರ್ಚನೆಯ ತಾಲೀಮಿನ ವೇಳೆಯೂ ಸಿಡಿಮದ್ದು ಸಿಡಿಸಲು ಸನ್ನದ್ಧರಾಗಿದ್ದಾರೆ. ಸ್ವಲ್ಪ ಯಾಮಾರಿದರೂ ಅಪಾಯ ಮೈಮೇಲೆ ಎಳೆದುಕೊಳ್ಳುವ ಆತಂಕವಿದೆ. ಈ ಹಿನ್ನೆಲೆಯಲ್ಲಿ ಸವಾಲಿನ ಕೆಲಸವನ್ನು ಸಂಭ್ರಮದಿಂದಲೇ ಮಾಡಲು ಫಿರಂಗಿ ದಳದ ಸಿಬ್ಬಂದಿಗಳು ಮುಂದಾಗಿದ್ದು, ಎಲ್ಲರ ಹಾರೈಕೆ ನಿರೀಕ್ಷಿಸುತ್ತಿದ್ದಾರೆ.

ಫಿರಂಗಿ ದಳದ ಸೇನಾನಿಗಳು

ನಗರ ಸಶಸ್ತ್ರ ಮೀಸಲು ಪಡೆಯ ಆರ್‌ಎಸ್‌ಐ ಸಂತೋಷ್ ಕುಮಾರ್, ಎಆರ್‌ಎಸ್‌ಐಗಳಾದ ಸಿದ್ದರಾಜು, ಕೆ.ಕುಮಾರ, ಚನ್ನಬಸವಯ್ಯ, ಜನಾರ್ದನ ಚೆಟ್ಟಿ, ಎಹೆಚ್‌ಸಿಗಳಾದ ಆನಂದ ಕುಮಾರ್, ಮೋಹನ್ ಕುಮಾರ್, ಮಂಜು, ಶ್ರೀನಿವಾಸಚಾರಿ, ಚಿಕ್ಕಣ್ಣ, ರವಿ, ಹೊನ್ನಪ್ಪ, ಶಿವಕುಮಾರ್, ಚಿನ್ನಸ್ವಾಮಿ, ಅಣ್ಣೇಗೌಡ, ಕೆಂಡೇಗೌಡ, ಎಪಿಸಿಗಳಾದ ಬಸವರಾಜ, ರತನ್, ಮಲ್ಲಯ್ಯ, ನಾಗರಾಜ, ವಿಷಕಂಠ, ಶಿವಕುಮಾರ್, ರವಿಚಂದ್ರನ್, ಮಹೇಶ, ಮಂಜುನಾಥ್, ರಮೇಶ, ಗಫೂರ್, ಮಂಜುನಾಥ, ಮಲ್ಲಪ್ಪ, ಸಂತೋಷ್, ಅಣ್ಣಪ್ಪ, ಪ್ರದೀಪ್, ರವಿಸ್ವಾಮಿ, ಶ್ರೀಕಾಂತ, ರವಿಚಂದ್ರ ಸಿಡಿಮದ್ದು ಸಿಡಿಸುವ ಕಾರ್ಯದಲ್ಲಿ ತೊಡಗಲಿದ್ದಾರೆ.

ಎರಡು ವರ್ಷದ ಹಿಂದೆ

ದಸರಾ ಸಂದರ್ಭದಲ್ಲಿ ಎರಡು ವರ್ಷದ ಹಿಂದೆ ಸಿಡಿಮದ್ದು ಸಿಡಿಸುವ ವೇಳೆ ರಂಜಕ ಸೋರಿಕೆಯಾಗಿ ಇಬ್ಬರು ಸಿಬ್ಬಂದಿಗಳಿಗೆ ಗಾಯವಾಗಿತ್ತು. ಅದರಲ್ಲೂ ಓರ್ವ ಸಿಬ್ಬಂದಿಗೆ ಆಗಿರುವ ಗಾಯದಿಂದಾಗಿ ಇನ್ನು ಅವರು ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ಆ ಸಿಬ್ಬಂದಿಗೆ ಮೊದಲು ಚಿಕಿತ್ಸೆ ಕೊಡಿಸಲು ಇಲಾಖೆ ತೋರಿದ ಮುತುವರ್ಜಿ ಕಾಲಕ್ರಮೇಣ ಕ್ಷೀಣಿಸಿದೆ. ಇದರಿಂದ ಚಿಕಿತ್ಸಾ ವೆಚ್ಚವನ್ನು ಆ ಸಿಬ್ಬಂದಿಗಳ ಕುಟುಂಬಸ್ಥರೇ ನಿಭಾಯಿಸುವಂತಾಗಿದೆ. ಆ ಗಾಯಾಳು ಸಿಬ್ಬಂದಿಗೆ ಸೂಕ್ತ ಚಿಕಿತ್ಸೆ ಕೊಡಿಸಿ, ನೆರವಾಗಲು ಮುಂದಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಆಧಾರಿತ ಕೌಶಲ ಕಲಿಕೆ ಅಗತ್ಯ

ಕಿಷ್ಕಿಂದಾ ವಿವಿ ಕುಲಪತಿ ಡಾ.ಟಿ.ಎಸ್.ನಾಗಭೂಷಣ ಸಲಹೆ



ಮೈಸೂರಿನ ಎಟಿಎಂಇ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.28(ಬಿಎಲ್‌ಯು)- ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಕೌಶಲಗಳು ಪ್ರಸ್ತುತ ದಿನಗಳಲ್ಲಿ ಬಹಳ ಅವಶ್ಯವಾಗಿದ್ದು, ಈ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಕಿಷ್ಕಿಂದಾ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಟಿ.ಎಸ್. ನಾಗಭೂಷಣ ಸಲಹೆ ನೀಡಿದರು.

ನಗರದ ಬನ್ನೂರು ರಸ್ತೆಯ ಎಟಿಎಂಇ ಕಾಲೇಜಿನಲ್ಲಿ ಇಂದು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಗಣಿತ ಶಾಸ್ತ್ರದ ಲೀನಿಯರ್ ಆಲ್‌ಜಿಬ್ರಾದ ಸಮರ್ಪಕ ಜ್ಞಾನ ಬಹುತೇಕ ಇಂಜಿನಿಯರಿಂಗ್ ವಿಭಾಗಗಳಲ್ಲಿ ಉಪಯುಕ್ತವಾಗಿದ್ದು, ಇದರ ಸಮರ್ಪಕ ಬಳಕೆ ಅಗತ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ವಿದ್ಯಾರ್ಥಿಗಳು ಇಂಜಿನಿಯರಿಂಗ್ ಶಿಕ್ಷಣದೊಂದಿಗೆ ನೂತನ ಕೌಶಲ ಅಳವಡಿಸಿಕೊಳ್ಳಬೇಕು ಎಂದು ಡಾ.ನಾಗಭೂಷಣ್ ತಿಳಿಸಿದರು.

ಇದೇ ವೇಳೆ ಮಾತನಾಡಿದ ವಾಸ್ತುಶಿಲ್ಪಿ ಪಾರ್ವತಿ ರಾಮಕೃಷ್ಣ ಅವರು, ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ವಿನಯಶೀಲತೆ, ಸಂಸ್ಕೃತಿ, ಸಂಪ್ರದಾಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆಯಿತ್ತರು.

ತರುವಾಯ ಮಾತನಾಡಿದ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಅವರು, ವಿದ್ಯಾರ್ಥಿಗಳನ್ನು ಕಾಲೇಜಿಗೆ ದಾಖಲು ಮಾಡಲಾಗಿದೆ ಎಂದು ಪೋಷಕರು ಜವಾಬ್ದಾರಿ ಮರೆತು ಕೂರಬಾರದು. ಕಾಲೇಜಿನ ಜೊತೆ ಸಂಪರ್ಕ ಇಟ್ಟುಕೊಂಡು ಮಕ್ಕಳ ಪ್ರಗತಿ ಬಗ್ಗೆ ವಿಚಾರಿಸಬೇಕು ಎಂದು ಹೇಳಿದರು.

ಇಂಜಿನಿಯರಿಂಗ್‌ನಲ್ಲಿ ರ್‍ಯಾಂಕ್ ಪಡೆದ ಇದೇ ಕಾಲೇಜಿನ ವಿದ್ಯಾರ್ಥಿಗಳಾದ ಭಾವನ ಎಸ್.ಪಿ., ಎಸ್ ಯಶಸ್ವಿನಿ, ವಿಶ್ವಾಸ್ ಬಿ ಅವರನ್ನು ಅಭಿನಂದಿಸಲಾಯಿತು.

ಕಾಲೇಜಿನ ಪ್ರಿನ್ಸಿಪಾಲ್ ಡಾ.ಎಲ್.ಬಸವರಾಜು ಗಣ್ಯರನ್ನು ಸ್ವಾಗತಿಸಿದರೆ, ಸಹಾಯಕ ಪ್ರಾಧ್ಯಾಪಕ ಸಿ.ಚಂದ್ರಶೇಖರ್ ನಿರೂಪಣೆ ಮಾಡಿದರು. ಡೀನ್ ಡಾ.ಶ್ರೀನಿವಾಸ್ ವಂದಿಸಿದರು.

ಕಾಲೇಜಿನ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದ ಮೂರ್ತಿ, ಡೀನ್ ಎಸ್.ಆರ್.ಭಾಗ್ಯಶ್ರೀ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅರ್ಥಪೂರ್ಣ ಹೆಬ್ಬಾಳು ದಸರಾಗೆ ತೆರೆ



ಹೆಬ್ಬಾಳು ದಸರಾ ಅಂಗವಾಗಿ ಆಯೋಜಿಸಿದ್ದ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್, ಬಹುಮಾನ ವಿತರಿಸಿದರು.

ಮೈಸೂರು,ಸೆ.28– ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನಿಂದ ಆಯೋಜಿಸಿದ್ದ ಐದನೇ ವರ್ಷದ 'ಹೆಬ್ಬಾಳು ದಸರಾ' ಭಾನುವಾರ ಸಮಾರೋಪಗೊಂಡಿತು. ಹೆಬ್ಬಾಳು ದಸರಾ ಅಂಗವಾಗಿ ವಿಜಯನಗರ ವಾರ್ಡ್ ನಂ.3ರ ನಿವಾಸಿಗಳಿಗೆ ಆಯೋಜಿಸಿದ್ದ ಕ್ರೀಡಾ ಹಬ್ಬದಲ್ಲಿ ಪಾಲ್ಗೊಂಡು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ, ಪ್ರೋತ್ಸಾಹಿಸಲಾಯಿತು.

ಈ ವೇಳೆ ಟ್ರಸ್ಟ್‌ನ ಅಧ್ಯಕ್ಷರೂ ಆದ ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಮಾತನಾಡಿ, ಕ್ರೀಡೆ ಮನುಷ್ಯನ ಮಾನಸಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಸಾಕಷ್ಟು ಪ್ರಯೋಜನಕಾರಿಯಾಗಿದೆ. ಒಗ್ಗಟ್ಟು, ಸಾಮರಸ್ಯ, ಮನರಂಜನೆ ಹಾಗೂ ಕ್ರೀಡಾಸ್ಫೂರ್ತಿ ಬೆಳೆಸುವ ಉದ್ದೇಶದಿಂದ ಹೆಬ್ಬಾಳು ದಸರಾದಲ್ಲಿ ಇಂತಹ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಹೆಬ್ಬಾಳು ದಸರಾ ಕ್ರೀಡಾ ಹಬ್ಬದಲ್ಲಿ ಕೇವಲ ವೃತ್ತಿಪರರಿಗೆ ಸ್ಪರ್ಧೆಗಳನ್ನು ಆಯೋಜಿಸಿದ್ದು, ಗೆಲುವು ಸಾಧಿಸಿದವರಿಗೆ ಬಹುಮಾನ ವಿತರಣೆ ಮಾಡಲಾಗಿದೆ.

ನಿತಿನ್ ಶಾಸ್ತ್ರಿ ಸುಶ್ರಾವ್ಯ ಗಾಯನ

ಹೆಬ್ಬಾಳು ದಸರಾ ಭಾಗವಾದ ಸಾಂಸ್ಕೃತಿಕ ಸಂಭ್ರಮದಲ್ಲಿ ಗಾಯಕ ನಿತಿನ್ ರಾಜಾರಾಂ ಶಾಸ್ತ್ರಿ ಹಾಗೂ ತಂಡದ ಕಲಾವಿದರು ಗಾಯನ ಪ್ರಸ್ತುತಪಡಿಸಿದರು. 'ಸೋರುತಿಹುದು ಮನಿಯ ಮಾಳಿಗೆ ಅಜ್ಞಾನದಿಂದ...' ಗೀತೆಯನ್ನು ಮನೋಜ್ಞವಾಗಿ ಹಾಡಿದರು. 'ಪಲ್ಲವಿ ಅನು ಪಲ್ಲವಿ' ಚಿತ್ರದ 'ನಗುವ ನಯನ ಮಧುರ ಮೌನ ಮಿಡಿವ ಹೃದಯ ಇದೇ ಮಾತೇಕೆ...' ಹಾಡುವಾಗ ನೆರೆದಿದ್ದವರೂ ಗುನುಗುತ್ತಾ ಆಸ್ವಾದಿಸಿದರು. ಶಿಳ್ಳೆ ಚಪ್ಪಾಳೆ ಮೂಲಕ ಕಲಾವಿದರ ಪ್ರೋತ್ಸಾಹಿಸಿದರು. ಟಪ್ಪಾಂಗುಚ್ಚಿ ಹಾಡುಗಳಿಗೆ ಯುವಕರು, ಮಕ್ಕಳು, ಮಹಿಳೆಯರು ಹೆಜ್ಜೆ ಹಾಕಿ ಸಂಭ್ರಮಿಸಿದರು.

ನಾಡಹಬ್ಬ ದಸರಾ ಸಂದರ್ಭದಲ್ಲೇ ಹೆಬ್ಬಾಳು ದಸರಾ ಸೀಸನ್ –5 ಆಯೋಜನೆ ಮಾಡಿದ್ದು, ಈ ಬಗ್ಗೆ ನಿವಾಸಿಗಳು ಅತೀವ ಸಂತಸ ವ್ಯಕ್ತಪಡಿಸಿದ್ದಾರೆ. ಎಲ್ಲಾ ಕಾರ್ಯಕ್ರಮಗಳೂ ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಎಲ್ಲಾ ಸಮುದಾಯದವರ ಸಹಕಾರದೊಂದಿಗೆ ಯಶಸ್ವಿಯಾಗಿ ನೆರವೇರಿದ್ದು ಖುಷಿ ತಂದಿದೆ ಎಂದರು.

ಬಹುಮಾನ ವಿತರಣೆ: 10ರಿಂದ 15 ವರ್ಷ ಒಳಗಿನ ಮಕ್ಕಳಿಗಾಗಿ ಚಿತ್ರಕಲೆ, ಲೆಮನ್ ಅಂಡ್ ಸ್ಪೂನ್ ಓಟ ಮತ್ತು ಯುವಕ, ಯುವತಿಯರಿಗೆ ಶಾಟ್‌ಪುಟ್, ಹಗ್ಗಜಗ್ಗಾಟ, ಮ್ಯೂಸಿಕಲ್ ಚೇರ್, ಬಾಲ್ ಇನ್ ಬಾಸ್ಕೆಟ್, 50 ವರ್ಷ ಮೇಲ್ಪಟ್ಟವರಿಗೆ ಆಯೋಜಿಸಿದ್ದ ಬಾಲ್ ಇನ್ ಬಾಸ್ಕೆಟ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಇದೇ ವೇಳೆ ಬಹುಮಾನ ವಿತರಿಸಲಾಯಿತು.

ಇದೇ ವೇಳೆ ನವಭಾರತ್ ನಿರ್ಮಾಣ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್, 20 ಸ್ತ್ರೀ ಶಕ್ತಿ ಮಹಿಳಾ ಸ್ವ ಸಹಾಯ ಸಂಘಕ್ಕೆ ತಲಾ ಹತ್ತು ಸಾವಿರ ರೂ. ಪ್ರೋತ್ಸಾಹ ಧನ ನೀಡಿದರು.

ವರ್ಣರಂಜಿತ ದೀಪಾಲಂಕಾರ: ಹೆಬ್ಬಾಳ ದಸರಾ ಅಂಗವಾಗಿ ಈ ಬಾರಿ ವಿಶೇಷ ದೀಪಾಲಂಕಾರ ಅತ್ಯಾಕರ್ಷಕವಾಗಿತ್ತು. ವಾರ್ಡ್ ನಂ.3ರ ಪ್ರಮುಖ ವೃತ್ತ, ಜಂಕ್ಷನ್‌ಗಳು ಹಾಗೂ ರಸ್ತೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು ಸಮಾರಂಭ ನಡೆದ ವಿಜಯನಗರ ರೈಲ್ವೆ ಲೇಔಟ್ ರಂಗಮಂದಿರದ ಸುತ್ತಲೂ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ ಕಣ್ಮನ ಸೆಳೆಯಿತು.

ಕರೂರು ಕಾಲ್ತುಳಿತ: ಸಾವಿನ ಸಂಖ್ಯೆ 39ಕ್ಕೇರಿಕೆ; ಟಿವಿಕೆ ಜಿಲ್ಲಾ ಕಾರ್ಯದರ್ಶಿ ಸೇರಿ ಹಲವರ ವಿರುದ್ಧ ಎಫ್‌ಐಆರ್

ಚೆನ್ನೈ, ಸೆ.28– ತಮಿಳು ನಟ ಹಾಗೂ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕ ವಿಜಯ್ ಅವರ ಕರೂರ್ ರ್‍ಯಾಲಿ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 39ಕ್ಕೆ ಏರಿಕೆಯಾಗಿದೆ.



ಎಫ್‌ಐಆರ್ ದಾಖಲು: ಕರೂರು ಪಟ್ಟಣ ಪೊಲೀಸರು ಟಿವಿಕೆ ಪಶ್ಚಿಮ ಜಿಲ್ಲಾ ಕಾರ್ಯದರ್ಶಿ ಮತಿಯಳಗನ್ ಸೇರಿದಂತೆ ಹಲವರ ವಿರುದ್ಧ ಬಿಎನ್‌ಎಸ್‌ನ ಸೆಕ್ಷನ್ 109,110,125ಬಿ, 223 ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಎಫ್‌ಐಆರ್ ದಾಖಲಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 109 ಮತ್ತು 110 ಕ್ರಮವಾಗಿ ಕೊಲೆ ಯತ್ನ ಮತ್ತು ಅಪರಾಧಿಕ ನರಹತ್ಯೆಗೆ ಯತ್ನಿಸುವ ಪ್ರಕರಣಗಳಾಗಿವೆ. ಸೆಕ್ಷನ್ 125 ದುಡುಕಿನ ಅಥವಾ ನಿರ್ಲಕ್ಷ್ಯದ ವರ್ತನೆಯ ಮೂಲಕ ಇತರರ ಜೀವ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಕೃತ್ಯಗಳನ್ನು ಉಲ್ಲೇಖಿಸುತ್ತದೆ. ಸೆಕ್ಷನ್ 223 ಸಾರ್ವಜನಿಕ ಸೇವಕರು ಸರಿಯಾಗಿ ಘೋಷಿಸಿದ ಆದೇಶವನ್ನು ಪಾಲಿಸದಿದ್ದಕ್ಕೆ ಸಂಬಂಧಿಸಿದ್ದಾಗಿದೆ.

ತಲಾ 20ಲಕ್ಷ ಪರಿಹಾರ ಘೋಷಿಸಿದ ವಿಜಯ್: ತಮಿಳುನಾಡಿನ ಕರೂರಿನಲ್ಲಿ ನಿನ್ನೆ ಸಂಜೆ ನಡೆದ ರ್‍ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಬಲಿಯಾದ 39 ಜನರ ಕುಟುಂಬಗಳಿಗೆ ನಟ–ರಾಜಕಾರಣಿ ವಿಜಯ್ ತಲಾ 20 ಲಕ್ಷ ರೂ. ಪರಿಹಾರವನ್ನು ಘೋಷಿಸಿದ್ದಾರೆ. ಅಲ್ಲದೆ, ದುರಂತದಲ್ಲಿ ಗಾಯಗೊಂಡ ಸುಮಾರು 100 ಜನರಿಗೆ ತಮ್ಮ ಪಕ್ಷವು ತಲಾ 2 ಲಕ್ಷ ರೂ.ಗಳನ್ನು ನೀಡಲಿದೆ ಎಂದು ಟಿವಿಕೆ ಮುಖ್ಯಸ್ಥರು ತಿಳಿಸಿದ್ದಾರೆ.

ಸಂತ್ರಸ್ತನಿಂದ ಹೈಕೋರ್ಟ್ ಮೊರೆ: ಘಟನೆಯಲ್ಲಿ ಗಾಯಗೊಂಡಿರುವ ಅರ್ಜಿದಾರ ಸೆಂಥಿಲ್ ಕಣ್ಣನ್ ಎಂಬವರು ದುರಂತದ ಹೊಣೆಗಾರಿಕೆಯನ್ನು ವಹಿಸುವವರೆಗೂ ಮತ್ತು ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವವರೆಗೆ ಟಿವಿಕೆಯ ಸಭೆಗಳು, ರ್‍ಯಾಲಿಗೆ ಅಥವಾ ರಾಜಕೀಯ ಸಭೆಗಳಿಗೆ ಅನುಮತಿ ನೀಡದಂತೆ ತಮಿಳುನಾಡು ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ನಿರ್ದೇಶನ ನೀಡಬೇಕು ಎಂದು ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಅಭಿನಂದನೆ...



ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್‌ಗೆ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆ ಆಗಿರುವ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಮೈಮುಲ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಕೆ.ಉಮಾಶಂಕರ್ ಹಾಗೂ ಎ.ಟಿ.ಸೋಮಶೇಖರ್ ಅವರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಎನ್.ಯೋಗಾನಂದ್, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಜನತಾ ಬಜಾರ್ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಎಸ್.ಕೃಷ್ಣಕುಮಾರ್(ಸಿ.ಡಿ) ಅಭಿನಂದಿಸಿದರು.